ಸಂಪುಟ: 05 ಸಂಚಿಕೆ: 322 ಪುಟಗಳು: 08 ಬುಧವಾರ 04 ಫೆಬ್ರವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಸಾಧನೆ ಇಲ್ಲದೇ ಸತ್ತರೆ
ಸಾವಿಗೆ ಅವಮಾನ.
ಆದರ್ಶ ಇಲ್ಲದೆ
ಬದುಕಿದರೆ ಬದುಕಿಗೆ
ಅವಮಾನ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ರಾಜ್ಯದಲ್ಲಿವೆ ಅಸ್ಪಷ್ಟ ಭಾವಚಿತ್ರ ಹೊಂದಿರುವ 9.25 ಲಕ್ಷ ವೋಟರ್ ಐಡಿ

## ● ರಾಜ್ಯದಲ್ಲಿ ಅಸ್ಪಷ್ಟ ಭಾವಚಿತ್ರ ಹೊಂದಿರುವ ವೋಟರ್ ಐಡಿ ಕಾರ್ಡ್ ಪತ್ತೆ ಕಾರ್ಯಕ್ಕೆ ಮುಂದಾದ ಆಯೋಗ

• **ಉದಯವಾಹಿನಿ, ಬೆಂಗಳೂರು**

ಮಸುಕಾಗಿರುವ, ಮುಖಚಹರೆ ತಾಳೆಯಾಗದ, ಸರಿಯಾಗಿ ಕಾಣದ ಕಪ್ಪು- ಬಿಳುಪಿನ ಭಾವಚಿತ್ರ ಸೇರಿದಂತೆ ಭಾವಚಿತ್ರ ಸರಿಯಾಗಿದ 9.25 ಲಕ್ಷ ಮತದಾರರ ಗುರುತಿನ ಚೀಟಿಗಳನ್ನು ಪಟ್ಟಿ ಮಾಡಲಾಗಿದೆ.

ಆ ಪಟ್ಟಿಯನ್ನು ಎಲ್ಲ ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) ವಿತರಣೆ ಮಾಡಲಾಗಿದ್ದು, ಮತದಾರರ ಇತ್ತೀಚಿನ ಭಾವಚಿತ್ರ ಸಂಗ್ರಹಿಸಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೆಲಸ ವಹಿಸಲಾಗಿದೆ.

**9.97 ಲಕ್ಷ ಅರ್ಜಿ ಬಾಕಿ:** ಇದರ ಜತೆಗೆ ಹೆಸರು ಸರಿ ಇಲ್ಲದಿರುವುದು, ಲಿಂಗ, ಸಂಬಂಧ, ವಯಸ್ಸು, ವಿಳಾಸ ತಪ್ಪಾಗಿರುವುದನ್ನೂ ಪರಿಷ್ಕರಣೆ ಮಾಡಲಾಗುತ್ತಿದೆ. ಮಾಹಿತಿ ತಪ್ಪಾಗಿರುವುದನ್ನು ಸರಿಪಡಿಸಲು ನಮೂನೆ 8ರ ಅಡಿ ಸಲ್ಲಿಕೆಯಾಗಿರುವ 9.97 ಲಕ್ಷ ಅರ್ಜಿಗಳು ವಿಲೇವಾರಿ ಬಾಕಿ ಇವೆ.

**ಬಣ್ಣದ ಗುರುತಿನ ಚೀಟಿ ವಿತರಣೆ**




ಹಾವೇರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಅಸ್ಪಷ್ಟ ಭಾವಚಿತ್ರ ಇರುವ ಗುರುತಿನ ಚೀಟಿಗಳ ಹೆಚ್ಚಾಗಿವೆ.

### ಸೆಲ್ಫಿ ಫೋಟೋಗಳು

ಆಯೋಗ ಪಟ್ಟಿ ಮಾಡಿರುವ ತಪ್ಪಾದ ಫೋಟೋಗಳಿರುವ ಗುರುತಿನ ಚೀಟಿಗಳಲ್ಲಿ ಹೆಚ್ಚಾಗಿ ಸೆಲ್ಫಿ ಫೋಟೋಗಳಿರುವ ಚೀಟಿಗಳೇ ಹೆಚ್ಚಾಗಿವೆ. ಅದು ಬಿಟ್ಟರೆ ಹಿಂದೆ ವೆಬ್ ಕ್ಯಾಮೆರಾದಲ್ಲಿ ತೆಗೆದ ಕರಕಲಾದ ಭಾವಚಿತ್ರಗಳಿವೆ. ಅಂಥವರ ಈಗಿನ ಫೋಟೋಗಳನ್ನು ಸಂಗ್ರಹಿಸಿ ಮೊಬೈಲ್ ಆ್ಯಪ್ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇವೆ ಎಂದು ಮತಗಟ್ಟೆ ಅಧಿಕಾರಿ ಲಲಿತಾ ಗೌಡ ತಿಳಿಸಿದರು.

ಇದೇ ಮತಗಟ್ಟೆ ಅಧಿಕಾರಿಗಳಿಗೆ ಮತದಾರರ ಗುರುತಿನ ಚೀಟಿ ಮ್ಯಾಪಿಂಗ್ ಕೆಲಸ ಕೂಡ ವಹಿಸಲಾಗಿದೆ. 2002ರ ಮತದಾರರ ಪಟ್ಟಿ ಮತ್ತು 2025ರ ಮತದಾರರ ಪಟ್ಟಿ ಮ್ಯಾಪಿಂಗ್ ಮಾಡಿ ಕುಟುಂಬದ ಸದಸ್ಯರನ್ನು ಒಂದು ಗುಂಪು ಮಾಡುವುದು. ಮುಂದೆ ರಾಜ್ಯದಲ್ಲಿ ಎಸ್‌ಐಆರ್ ಜಾರಿಯಾದರೆ, ಕೆಲಸ ಸುಲಭವಾಗಲಿ ಎನ್ನುವ ಕಾರಣಕ್ಕೆ ಪೂರ್ವಭಾವಿಯಾಗಿ ಈ ಎಲ್ಲಾ ಕೆಲಸ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಭಾವಚಿತ್ರ ಪತ್ತೆ ಮಾಡಲಾಗದ ಗುರುತಿನ ಚೀಟಿಗಳಿರುವ ಟಾಪ್ 5 ಜಿಲ್ಲೆಗಳು**

● ದಕ್ಷಿಣ ಕನ್ನಡ-1.70 ಲಕ್ಷ ● ಹಾವೇರಿ-1.20ಲಕ್ಷ ● ಮೈಸೂರು-58,309 ● ಮಂಡ್ಯ-57,308 ● ಚಿತ್ರದುರ್ಗ-57,074

**ಬಣ್ಣದ ಫೋಟೋ:** ಯಾರಾದರು ದಾಖಲೆಯಾಗಿ ಮತದಾರರ ಗುರುತಿನ ಚೀಟಿ ಕೊಡಿ ಎಂದರೆ ಮುಜುಗರ ಪಟ್ಟಿಕೊಳ್ಳಬೇಕಿತ್ತು. ಅದರಲ್ಲಿರುವ ಭಾವಚಿತ್ರಗಳು ಅಷ್ಟು ವಿಕಾರವಾಗಿ ಕಾಣುತ್ತಿದ್ದವು. ಈಗ ಮತದಾರರಿಗೆ ಬಣ್ಣದ ಗುರುತಿನ ಚೀಟಿಗಳನ್ನು ನೀಡಲು ಚುನಾವಣಾ ಆಯೋಗ ಮುಂದಾಗಿದೆ.

ಮತದಾರರೇ ಮಾಡಿಕೊಳ್ಳಬಹುದಾಗಿದ್ದ ಕೆಲಸವನ್ನು ಈಗ ಚುನಾವಣಾ ಆಯೋಗ ಉಚಿತವಾಗಿ ಮತಗಟ್ಟೆ ಅಧಿಕಾರಿಗಳ ಮೂಲಕ ಮಾಡಲು ಮುಂದಾಗಿದೆ. ಭವಿಷ್ಯದಲ್ಲಿ ಮತದಾರರಿಗೆ ಬಣ್ಣದ ಗುರುತಿನ ಚೀಟಿ ವಿತರಣೆ ಆಗಲಿದೆ ಎಂದು ಉತ್ತರ ಕನ್ನಡ ಹೆಚ್ಚುವರಿ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ ತಿಳಿಸಿದರು.

## ಅಧಿಕಾರ ಸಿಕ್ಕರೆ ಮೀಸಲಾತಿ ಬೇಕು ಎನ್ನುವವರನ್ನು ಜೈಲಿಗೆ ಹಾಕ್ತೇನೆ

• **ಉದಯವಾಹಿನಿ, ಬೆಂಗಳೂರು**

ಚಿತ್ತಾಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಥೋಡ್ ಅಧಿಕಾರ ಸಿಕ್ಕರೆ ಮೀಸಲಾತಿ ಬೇಕು ಎನ್ನುವವರನ್ನು ಜೈಲಿಗೆ ಹಾಕ್ತೇನೆ ಎಂಬ ಹೇಳಿಕೆ ಇದೀಗ ವೈರಲ್ ಆಗುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಈ ವಿಡಿಯೋ ಹರಿದಾಡುತ್ತಿದ್ದು, ವಿರೋಧವೂ ವ್ಯಕ್ತವಾಗುತ್ತಿದೆ. ಮಣಿಕಂಠ ರಾಥೋಡ್ ಬಿಜೆಪಿ ಎಂಬ ಫೇಸ್ ಬುಕ್ ಪೇಜ್ ನಲ್ಲಿ ಅವರು ಈ ವಿಡಿಯೋ ಹಂಚಿಕೊಂಡಿದ್ದಾರೆ.

ವಿಡಿಯೋದಲ್ಲಿ ಮೀಸಲಾತಿ ಕುರಿತಾಗಿ ನೀಡಿರುವ ಹೇಳಿಕೆ ವ್ಯಾಪಕವಾಗಿ ಹರಿದಾಡುತ್ತಿದೆ. ನನಗೆ ಪ್ರಧಾನಿ ಆಗಲು ಅವಕಾಶ ಸಿಕ್ಕರೆ ಅದೆಂತ ಚಮತ್ಕಾರ ಮಾಡುತ್ತೇನೆಂದರೆ ಅಮೇರಿಕಾ, ಬ್ರಿಟನ್ ದೇಶದ ಜನರು ಬಂದು ಭಾರತೀಯ ಪೌರತ್ವ ಕೇಳಬೇಕು. ಇದು ಸಾಧ್ಯವಾಗಿಸಲು ದೇಶದಲ್ಲಿ ಮೀಸಲಾತಿ ವ್ಯ ವಸ್ಥೆಯನ್ನು ಬದಲಾವಣೆ ಮಾಡಬೇಕಾಗಿದೆ. ಕೇವಲ ಬಡವರಿಗಷ್ಟೇ ಮೀಸಲಾತಿ ಸಿಗಬೇಕು. ಜಾತಿ ಆಧಾರದಲ್ಲಿ ಮೀಸಲಾತಿ ರದ್ದಾಗಬೇಕು. ದೇಶದಲ್ಲಿ ಜಾತಿಯ ಆಧಾರದಲ್ಲಿ ಮೀಸಲಾತಿ ಜಾರಿಯಲ್ಲಿದೆ ಅದನ್ನು ಮೊದಲು ರದ್ದು ಮಾಡಬೇಕಾಗಿದೆ.

## ಭ್ರಷ್ಟ ಅಧಿಕಾರಿಗಳ ನಿದ್ದೆಗೆಡಿಸಿದ ಲೋಕಾಯುಕ್ತ ಸಂಸ್ಥೆ

• **ಉದಯವಾಹಿನಿ, ಧಾರವಾಡ**

ರಾಜ್ಯದ ಬಹುತೇಕ ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ ಫೆಬ್ರವರಿ– ಮಾರ್ಚ್ ತಿಂಗಳಲ್ಲಿ ಮುಗಿಯಲಿದೆ. ಹೀಗಾಗಿ 2026ರ ಏಪ್ರಿಲ್– ಮೇ ತಿಂಗಳಲ್ಲಿ ಚುನಾವಣೆ ನಡೆಸಲು ಸರಕಾರ ಸಜ್ಜಾಗಿದ್ದು, ಪೂರ್ವಸಿದ್ಧತೆಗೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ಕೂಡ ನೀಡಿದೆ. ರಾಜ್ಯದ 5,948 ಗ್ರಾಪಂಗಳ ಪೈಕಿ 5,698 ಗ್ರಾಪಂಗಳಿಗೆ 2020 ಡಿಸೆಂಬರ್‌ನಲ್ಲಿ ಚುನಾವಣೆ ಆಗಿತ್ತು. ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆ 2021 – 22ರಲ್ಲಿ ನಡೆದಿದ್ದರಿಂದ 2026ರ ಫೆಬ್ರವರಿ ಎರಡನೇ ವಾರಕ್ಕೆ ಈ ಪಂಚಾಯಿತಿ ಚುನಾಯಿತ ಸದಸ್ಯರ ಅಧಿಕಾರಾವಧಿ ಮುಗಿಯಲಿದೆ. ಇದರೊಟ್ಟಿಗೆ 2026ರ ಮಾರ್ಚ್‌ಗೆ ಮುಗಿಯುವ 92 ಗ್ರಾಪಂಗಳನ್ನು ಸೇರಿಸಿ ಚುನಾವಣೆ ನಡೆಸಲು ಸರಕಾರ ತಯಾರಿ ನಡೆಸಿದೆ. ಈಗಾಗಲೇ ರಾಜ್ಯದ 187 ನಗರ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್ ಅವಧಿ ಮುಗಿದಿದೆ. 2021ರಿಂದಲೇ ರಾಜ್ಯದ 31 ಜಿಪಂ ಹಾಗೂ 240 ತಾಪಂಗಳಿಗೂ ಚುನಾಯಿತ ಪ್ರತಿನಿಧಿಗಳಿಲ್ಲ. ಈಗ 5,790 ಗ್ರಾಪಂಗಳನ್ನೂ ಆಡಳಿತಾಧಿಕಾರಿಗಳ ಮೇಲೆ ನಿರ್ವಹಿಸಿದರೆ (ಕೆಲ ಗ್ರಾಪಂಗಳಿಗೆ ನೇಮಿಸಲಾಗಿದೆ) ಸರಕಾರ ಆಕ್ಷೇಪಕ್ಕೆ ಗುರಿಯಾಗುವ ಸಾಧ್ಯತೆಗಳಿವೆ.

## ಮೋಹನ್ ಕಾತರಕಿ ಸೇರಿ ಐದು ಗಣ್ಯರಿಗೆ ಗಡಿನಾಡು ಚೇತನ ಪ್ರಶಸ್ತಿ

• **ಉದಯವಾಹಿನಿ, ಬೆಂಗಳೂರು**

ಆತ್ಮಹತ್ಯೆಗೆ ಶರಣಾಗಿರುವ ಕಾನ್ಫಿಡೆಂಟ್ ಪ್ರಾಜೆಕ್ಟ್ (ಇಂಡಿಯಾ) ಪ್ರೈ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರ ನೀಡುವ ಗಡಿನಾಡು ಚೇತನ ಪ್ರಶಸ್ತಿಗೆ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಮೋಹನ್ ಕಾತರಕಿ ಸೇರಿದಂತೆ ಐವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಹೇಳಿದರು.

ಜಯದೇವಿ ತಾಯಿ ಲಿಗಾಡೆ ಪ್ರಶಸ್ತಿಗೆ ಮೋಹನ್ ಕಾತರಕಿ, ಚನ್ನಬಸವ ಪಟ್ಟದ್ದೇವರ ಪ್ರಶಸ್ತಿಗೆ ರಾಯಚೂರಿನ ಹೋರಾಟಗಾರ ಮಲ್ಲನಗೌಡ ಇಂದುಪುರ, ಫ.ಗು.ಹಳಕಟ್ಟಿ ಪ್ರಶಸ್ತಿಗೆ ವಿಜಯಪುರದ ನಾಗೇಶ ಕುಲಕರ್ಣಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು. ಕಯ್ಯಾರ ಕಿಞ್ಞಣ್ಣ ರೈ ಪ್ರಶಸ್ತಿಗೆ ಕಾಸರಗೋಡಿನ ನಿವೃತ್ತ ಶಿಕ್ಷಕ ಎನ್. ಚನಿಯಪ್ಪ ನಾಯ್ಕ್, ಬೆಳವಡಿ ಮಲ್ಲಮ್ಮ ಪ್ರಶಸ್ತಿಗೆ ಮಸ್ಕತ್‌ನಲ್ಲಿ ಕನ್ನಡ ಸಂಘ ನಡೆಸುತ್ತಿರುವ ಶಾಲೆಯಲ್ಲಿ ಕನ್ನಡ ಪಾಠ ಮಾಡುತ್ತಿರುವ ಶಿಕ್ಷಕಿಯರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ 1 ಲಕ್ಷ, ಫಲಕ ಒಳಗೊಂಡಿದೆ ಎಂದು ತಿಳಿಸಿದರು.

ಕನ್ನಡಿಗರ ಹಿತಾಸಕ್ತಿಗೆ ವಿರುದ್ಧವಾಗಿರುವ ಮಲಯಾಳ ಭಾಷಾ ಮಸೂದೆಯನ್ನು ಕೇರಳ ವಿಧಾನಸಭೆಯಲ್ಲಿ ಈಚೆಗೆ ಅಂಗೀಕರಿಸಲಾಗಿದೆ. ಆದರೆ, ಇದಕ್ಕೆ ಒಪ್ಪಿಗೆ ನೀಡದಂತೆ ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಮಾಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

# ವಾಗ್ಯುದ್ಧದ ಅಬ್ಬರ ಲೋಕ ಸಮರ

## ವಿಪಕ್ಷಗಳಿಂದ ಸರಂಡರ್ ಮೋದಿ ಘೋಷಣೆ

### ರಾಹುಲ್ ಆರೋಪ



ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಭಾಷಣ ಮಾಡುತ್ತಿದ್ದಾಗ ಭಾರಿ ಗದ್ದಲ ಭುಗಿಲೆದ್ದಿತು. ಚೀನಾದ ವಿಷಯದ ಕುರಿತು ರಾಹುಲ್ ಗಾಂಧಿಯವರ ಭಾಷಣವನ್ನು ವಿರೋಧಿಸಿದ್ದರಿಂದ ಎರಡೂ ಕಡೆಯವರು ಗದ್ದಲ ಮಾಡುತ್ತಲೇ ಇದ್ದರು. ತನಗೆ ಮಾತನಾಡಲು ಬಿಡದಿದ್ದಕ್ಕೆ ಆಕ್ರೋಶಗೊಂಡ ರಾಹುಲ್ ಗಾಂಧಿ, ''ನನಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ. ನಾನು ವಿರೋಧ ಪಕ್ಷದ ನಾಯಕ. ಸದನದಲ್ಲಿ ಮಾತನಾಡುವುದು ನನ್ನ ಹಕ್ಕಾಗಿದ್ದರೂ ನನಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ'' ಎಂದು ಹೇಳಿದ್ದಾರೆ. ಅಮೆರಿಕದೊಂದಿಗಿನ ಒಪ್ಪಂದದ ಕುರಿತು ಪ್ರಧಾನಿ ಮೋದಿ ಒತ್ತಡದಲ್ಲಿ ರಾಜಿ ಮಾಡಿಕೊಳ್ಳಬೇಕಾಯಿತು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ''ಪ್ರಧಾನಿ ಮೋದಿಯವರು ಗೊಂದಲಕ್ಕೊಳಗಾಗಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಸ್ಥಗಿತಗೊಂಡಿದ್ದ ಯುಎಸ್-ಭಾರತ ವ್ಯಾಪಾರ ಒಪ್ಪಂದಕ್ಕೆ ನಿನ್ನೆ ರಾತ್ರಿ ಪ್ರಧಾನಿ ನರೇಂದ್ರ ಮೋದಿ ಸಹಿ ಹಾಕಿದ್ದಾರೆ. ಅವರ ಮೇಲೆ ತೀವ್ರ ಒತ್ತಡವಿದೆ. ಇದು ನರೇಂದ್ರ ಮೋದಿಯವರ ಇಮೇಜ್‌ಗೆ ಹಾನಿಯಾಗಬಹುದು ಎಂದು ಅವರು ಆತಂಕಗೊಂಡಿದ್ದಾರೆ'' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.



### ಸಂಸತ್ತನಲ್ಲಿ ಚರ್ಚೆಗೆ ಕಾಂಗ್ರೆಸ್ ಒತ್ತಾಯ

ಈ ಒಪ್ಪಂದದ ಬೆನ್ನಲ್ಲೇ ಮಾತನಾಡಿರುವ ಕಾಂಗ್ರೆಸ್ ನಾಯಕರು, ಮೋದಿ ಸರ್ಕಾರ ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಮತ್ತು ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕ ವ್ಯಾಪಾರ ಒಪ್ಪಂದಗಳ ಪಠ್ಯವನ್ನು ಉಭಯ ಸದನದಲ್ಲಿ ಚರ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ.ಈ ಕುರಿತು ಮಾತನಾಡಿರುವ ಜೈರಾಮ್ ರಮೇಶ್, ವಿಶೇಷವಾಗಿ ಅಮೆರಿಕದ ಕೃಷಿ ಕಾರ್ಯದರ್ಶಿ ಬ್ರೂಕ್ ರೋಲಿನ್ಸ್ ಭಾರತವು ಅಮೆರಿಕದಿಂದ ಕೃಷಿ ಆಮದುಗಳನ್ನು ಉದಾರೀಕರಣಗೊಳಿಸಿದೆ ಎಂದು ಹೇಳಿಕೆ ನೀಡಿರುವುದರಿಂದ ಇದನ್ನು ಚರ್ಚೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಎನ್‌ಡಿಎ ಸಂಸದೀಯ ಪಕ್ಷದಲ್ಲಿ ಪ್ರಧಾನಿಗೆ ಸನ್ಮಾನ**

**ಎರಡೂ ಸದನದಲ್ಲೂ ವಿಪಕ್ಷಗಳ ಗದ್ದಲ**




ಅಮೆರಿಕ-ಭಾರತ ವ್ಯಾಪಾರ ಒಪ್ಪಂದದ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಘೋಷಣೆ ಬೆನ್ನಲ್ಲೇ ಕಾಂಗ್ರೆಸ್, ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದೆ. ಪ್ರಧಾನಿ ಮೋದಿ ಅಂತಿಮವಾಗಿ ವಾಷಿಂಗ್ಟನ್‌ಗೆ ಶರಣಾಗಿದ್ದಾರೆ ಎಂದು ಕುಟುಕಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಬಾಲಿವುಡ್ ಸಿನಿಮಾದ ಪ್ರಸಿದ್ಧ ಡೈಲಾಗ್ ಉಲ್ಲೇಖಿಸಿ 'ಮೊಗ್ಯಾಂಬೋ ಖುಷ್ ಹೈ' ಎಂದು

**ಮೊಗ್ಯಾಂಬೊ ಖುಷ್ ಹೈ ಎಂದು ಟೀಕಿಸಿದ ಕಾಂಗ್ರೆಸ್**

ವ್ಯಂಗ್ಯವಾಡಿದ್ದು, ಈ ಒಪ್ಪಂದವನ್ನು ಎಲ್ಲಾ ಒಪ್ಪಂದಗಳ ಪಿತಾಮಹ ಎಂದು ಹೇಗೆ ವಿವರಿಸಬಹುದು ಎಂದು ಪ್ರಶ್ನಿಸಿದರು. ಆಪರೇಷನ್ ಸಿಂಧೂರವನ್ನು ನಿಲ್ಲಿಸಿದ್ದಾಗಿ ವಾಷಿಂಗ್ಟನ್ ಡಿಸಿಯಿಂದ ಟ್ರಂಪ್ ಘೋಷಿಸಿದರು. ವಾಷಿಂಗ್ಟನ್‌ನಿಂದ ವೆನಿಜುವೆಲಾ ಮತ್ತು ರಷ್ಯಾದಿಂದ ಭಾರತ ತೈಲ ಖರೀದಿಯ ಕುರಿತ ಅಪ್ಡೇಟ್ ಅನ್ನು ಘೋಷಿಸಿದರು. ಇದೀಗ ವಾಷಿಂಗ್ಟನ್ನಿಂದಲೇ ಭಾರತ-ಅಮೆರಿಕದ ವ್ಯಾಪಾರ ಒಪ್ಪಂದವನ್ನು ಘೋಷಿಸಿದ್ದಾರೆ. ಈ ಕುರಿತು ಹೆಚ್ಚಿನ ವಿವರದ ನಿರೀಕ್ಷೆಯಲ್ಲಿರುವುದಾಗಿ ತಿಳಿಸಿದರು.

• **ಉದಯವಾಹಿನಿ, ನವದೆಹಲಿ**

ಅಮೆರಿಕ–ಭಾರತದ ವ್ಯಾಪಾರ ಒಪ್ಪಂದದ ಕುರಿತು ಚರ್ಚೆಗೆ ಒತ್ತಾಯಿಸಿ ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರು ಸದನದಿಂದ ಹೊರ ನಡೆದರು. ಶೂನ್ಯ ಅವಧಿ ಮುಗಿದ ಕೂಡಲೇ ಈ ಕುರಿತು ಪ್ರಸ್ತಾಪಿಸಿದ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಈ ಒಪ್ಪಂದದ ಬಗ್ಗೆ ಮಾಹಿತಿ ವಾಷಿಂಗ್ಟನ್‌ನಿಂದ ಪಡೆಯಲಾಗುತ್ತಿದೆ ಎಂದು ಆರೋಪಿಸಿದರು. ವಿಪಕ್ಷ ಸದಸ್ಯರು ಪ್ರತಿಭಟನೆ ಆರಂಭಿಸಿದ ವೇಳೆ ಮಾತನಾಡಿದ ಸಭಾ ನಾಯಕ ಜೆಪಿ ನಡ್ಡಾ, ಅಮೆರಿಕದ ಅಧ್ಯಕ್ಷರು ಸಾಮಾಜಿಕ ಮಾಧ್ಯಮದ ಪೋಸ್ಟ್ ಮೂಲಕ ಭಾರತೀಯ ಸರಕುಗಳ ಮೇಲಿನ ಸುಂಕ ಕಡಿತದ ಬಗ್ಗೆ ಮಾಹಿತಿ ನೀಡಿದರು ಮತ್ತು ಪ್ರಧಾನಿ ಮೋದಿಯವರೊಂದಿಗೆ ಮಾತನಾಡಿದರು ಎಂದ ಅವರು, ವಿಪಕ್ಷಗಳು ಒತ್ತಡಕ್ಕೆ ಒಳಗಾಗಿದ್ದು, ಒಳ್ಳೆಯ ವಿಷಯದಲ್ಲಿಯೂ ಕೆಟ್ಟದನ್ನೂ ಹುಡುಕಲು ಮುಂದಾಗಿದೆ ಎಂದು ಆರೋಪಿಸಿದರು.

ಭಾರತ–ಯುಎಸ್ ವ್ಯಾಪಾರ ಒಪ್ಪಂದದ ಕುರಿತು ಚರ್ಚಿಸಲು ಮತ್ತು ಒಪ್ಪಂದದ ಎಲ್ಲಾ ಸೂಕ್ಷ್ಮ ವಿವರಗಳನ್ನು ಒದಗಿಸಲು ಸರ್ಕಾರ ಸಿದ್ಧವಾಗಿದೆ ಎಂದು ನಾನು ಸದನಕ್ಕೆ ಭರವಸೆ ನೀಡುತ್ತೇವೆ. ವ್ಯಾಪಾರ ಒಪ್ಪಂದದ ಕುರಿತು ಸರ್ಕಾರ ಸ್ವಯಂಪ್ರೇರಿತ ಹೇಳಿಕೆಯನ್ನು ಹೊರಡಿಸುತ್ತದೆ. ಆದರೆ, ಇಂಡಿಯಾ ಒಕ್ಕೂಟದ ಈ ಪ್ರತಿಭಟನೆ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದ್ದು, ಇದು ಬೇಜವಾಬ್ದಾರಿತನದ ನಡವಳಿಕೆ ಎಂದರು. ಈ ನಡುವೆ ವಿಪಕ್ಷ ನಾಯಕರು ಇದು ದೇಶದ ಹಿತಾಸಕ್ತಿಗೆ ಮಾಡಿದ ದ್ರೋಹ ಎಂದು ಆರೋಪಿಸಿ ಘೋಷಣೆ ಕೂಗಿದರು. ರಾಜ್ಯಸಭಾ ಅಧ್ಯಕ್ಷರಾದ ಸಿಪಿ ರಾಧಾಕೃಷ್ಣನ್, ಸರ್ಕಾರ ಈ ವಿಚಾರ ಕುರಿತು ಚರ್ಚಿಸಲು ಸಿದ್ಧವಿದೆ. ಆದರೆ, ವಿಪಕ್ಷಗಳು ಗದ್ದಲ ಸೃಷ್ಟಿಸುತ್ತಿದೆ ಎಂದರು.ಸರ್ಕಾರ ಈ ಕುರಿತು ಸ್ವಯಂಪ್ರೇರಿತ ಹೇಳಿಕೆ ನೀಡಲಿದೆ ಮತ್ತು ಸರ್ಕಾರ ಅದಕ್ಕೆ ಸಿದ್ಧವಿದೆ. ಆದರೆ, ನೀವು ಹತಾಶೆಯಲ್ಲಿ ಮಾತನಾಡಿದ್ದೀರಾ ಎಂದು ನಡ್ಡಾ ಮತ್ತೊಮ್ಮೆ ಅವರ ಹತಾಶೆ ಪ್ರತಿ ಹಂತದಲ್ಲೂ ಕಂಡುಬರುತ್ತದೆ ಎಂದು ಹೇಳಿದರು. ಈ ವೇಳೆ ಟಿಎಂಸಿ ಹೊರತುಪಡಿಸಿ ಎಲ್ಲಾ ವಿರೋಧ ಪಕ್ಷದ ಸದಸ್ಯರು ನಂತರ ಪ್ರತಿಭಟನೆ ನಡೆಸಿ ಸಭಾತ್ಯಾಗ ಮಾಡಿದರು.

ಬಳಿಕ ಟಿಎಂಸಿ ಕೂಡ ಸದನದಿಂದ ಹೊರ ನಡೆದಿದ್ದು, ತಾವು ಸಭಾತ್ಯಾಗ ಮಾಡಿದ್ದಕ್ಕೆ ಕಾರಣ, ಎಸ್‌ಐಆರ್ ನಡೆಸುವಾಗ ಪೀಡಿತ ಕುಟುಂಬಗಳನ್ನು ದೆಹಲಿ ಪೊಲೀಸರು ನಡೆಸಿಕೊಂಡ ರೀತಿಯಾಗಿದೆ ಎಂದರು. ಬಜೆಟ್ ಅಧಿವೇಶನದಲ್ಲಿ ವಿಪಕ್ಷ ಸಂಸದರ ನಿರಂತರ ಘೋಷಣೆ ಹಿನ್ನೆಲೆ ಸಂಸತ್ತಿನ ಉಭಯ ಸದನಗಳನ್ನು ಮಧ್ಯಾಹ್ನದವರೆಗೆ ಮುಂದೂಡಲಾಯಿತು

ಸಂಸದ ವೇಣುಗೋಪಾಲ್, ಭಾರತ– ಅಮೆರಿಕ ವ್ಯಾಪಾರ ಒಪ್ಪಂದದ ಕುರಿತು ಚರ್ಚಿಸಲು ನಿಲುವಳಿ ಸೂಚನೆಯನ್ನು ನೀಡಿದರು. ಇದು ಭಾರತೀಯ ಕೈಗಾರಿಕೆಗಳು ಮತ್ತು ರೈತರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.ಭಾರತ ಮತ್ತು ಅಮೆರಿಕ ವ್ಯಾಪಾರ ಒಪ್ಪಂದ ಅಮೆರಿಕದಲ್ಲಿ ಭಾರತೀಯ ಸರಕುಗಳ ಮೇಲೆ ಸುಂಕವನ್ನು ಶೇ. 18ಕ್ಕೆ ಇಳಿಸುತ್ತದೆ. ಆದರೆ, ವಾಷಿಂಗ್ಟನ್ ಈ ಒಪ್ಪಂದದ ಮೂಲಕ ನವದೆಹಲಿಗೆ ಹೆಚ್ಚಿನ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲು ಸಹಾಯ ಮಾಡುತ್ತದೆ ಎಂದು ಹೇಳಿಕೊಂಡಿದೆ. ಒಪ್ಪಂದದ ವಿವರಗಳನ್ನು ಸಂಸತ್ತಿನ ಮುಂದೆ ಇಡಲಾಗಿಲ್ಲ ಎಂದು ಸೂಚನೆ ಮಂಡಿಸಿದರು. ಬಳಿಕ ಮಾಜಿ ಸೇನಾ ಮುಖ್ಯಸ್ಥ ಎಂಎಂ ನರವಾಣೆ ಅವರ ಅಪ್ರಕಟಿತ ಆತ್ಮಚರಿತ್ರೆಯ ಕೆಲವೊಂದು ಅಂಶಗಳನ್ನು ಉಲ್ಲೇಖಿಸಲು ರಾಹುಲ್ ಗಾಂಧಿ ಅವರಿಗೆ ಸ್ಪೀಕರ್ ಓಂ ಬಿರ್ಲಾ ಅವರು ಕೂಡ ಅನುಮತಿ ನಿರಾಕರಿಸಿದಕ್ಕೆ ವಿಪಕ್ಷಗಳು ತೀವ್ರ ಪ್ರತಿಭಟನೆ ನಡೆಸಿದವು. ಗದ್ದಲ ಹೆಚ್ಚಾದ ಹಿನ್ನೆಲೆ ಸ್ಪೀಕರ್ ಮಧ್ಯಾಹ್ನಕ್ಕೆ ಸದನವನ್ನು ಮುಂದೂಡಿದರು.

1 ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಭಾರತದ ಬಗ್ಗೆ ನಿಲುವು ಬದಲು.

2 ಭಾರತದಿಂದ ಅಮೆರಿಕಕ್ಕೆ ರಫ್ತಾಗುತ್ತಿದ್ದ ಸಾಮಗ್ರಿಗಳ ಮೇಲಿನ ಆಮದು ಸುಂಕ ಶೇ. 50ರಿಂದ 18ಕ್ಕೆ ಇಳಿಕೆ.

3 ಭಾರತ ಅಮೆರಿಕ ನಡುವಿನ ವಾಣಿಜ್ಯ ಸುಧಾರಣೆಗೆ ಇದು ಉತ್ತಮವಾದ ವಾತಾವರಣ.

ತಿಳಿಸಿದರು.

ವಿಪಕ್ಷಗಳ ಎಲ್ಲದರಲ್ಲೂ ರಾಜಕೀಯ ಮಾಡುವ ಉದ್ದೇಶವನ್ನು ಹೊಂದಿದ್ದು, ಇದು ಅದಕ್ಕೆ ಉದಾಹರಣೆ ಆಗಿದೆ. ಇದು ತುಂಬಾ ಬೇಜವಾಬ್ದಾರಿಯುತ ನಡವಳಿಕೆ.

### 'ಸರಂಡರ್ ಮೋದಿ' ಎಂದು ಘೋಷಣೆ

ನರವಣೆಯವರ ಪುಸ್ತಕದ ಭಾಗಗಳನ್ನು ಉಲ್ಲೇಖಿಸಲು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ನಿರಾಕರಿಸಿದ್ದರು. ಈ ವೇಳೆಯೂ ಪ್ರತಿಭಟನೆ ನಡೆದು, ಮಂಗಳವಾರಕ್ಕೆ ಕಲಾಪ ಮುಂದೂಡಿಕೆಯಾಗಿತ್ತು. ಆದರೂ ರಾಹುಲ್ ಗಾಂಧಿ ಪಟ್ಟು ಬಿಟ್ಟಿರಲಿಲ್ಲ. ಮಂಗಳವಾರ ಸದನದ ಬಾವಿಗಿಳಿದ ಸದಸ್ಯರು 'ಸರಂಡರ್ ಮೋದಿ' ಎಂದು ಘೋಷಣೆ ಕೂಗಿ ಪ್ರತಿಭಟಿಸಿದರು. ಯೋಜಿತ ರೀತಿಯಲ್ಲಿ ಕಲಾಪಕ್ಕೆ ಅಡ್ಡಿಪಡಿಸುವುದು ಸದಸ್ಯರಿಗೆ ಯೋಗ್ಯವಲ್ಲ ಎಂದು ಸ್ಪೀಕರ್ ಅಸಮಾಧಾನ ವ್ಯಕ್ತಪಡಿಸಿದರು.

### 2 ಗಂಟೆಗೆ ಸದನ ಮುಂದೂಡಿಕೆ

ಮಾಜಿ ಸೇನಾ ಮುಖ್ಯಸ್ಥ ಮನೋಜ್ ಮುಕುಂದ್ ನರವಣೆ ಅಪ್ರಕಟಿತ ಆತ್ಮಚರಿತ್ರೆ, ಅಮೆರಿಕದೊಂದಿಗೆ ವ್ಯಾಪಾರ ಸಂಬಂಧ ಸೇರಿ ಹಲವು ವಿಷಯಗಳನ್ನು ಉಲ್ಲೇಖಿಸಿ ಮಂಗಳವಾರವೂ ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದವು. ಗದ್ದಲದಿಂದಾಗಿ ಮಧ್ಯಾಹ್ನ 12 ಗಂಟೆಗೆ ಕಲಾಪವನ್ನು ಸ್ಪೀಕರ್ ಮುಂದೂಡಿದರು. ಮತ್ತೆ ಕಲಾಪ ಸೇರಿದರೂ ಗಲಾಟೆ ಮುಂದುವರಿಯಿತು. ಹೀಗಾಗಿ 2 ಗಂಟೆಗೆ ಸದನ ಮುಂದೂಡಲಾಗಿದೆ.

# ಸದನದಲ್ಲಿ ಅಬಕಾರಿ ಹಗರಣ ಕಿಕ್! ಆರ್ ಬಿ ತಿಮ್ಮಾಪೂರ ರಾಜೀನಾಮೆಗೆ ಬಿಗಿಪಟ್ಟು

## ● ಕಾಸಿಗಾಗಿ ಪೋಸ್ಟಿಂಗ್ ನಡೆಯುತ್ತಿದೆ ● ನಿಷ್ಕ್ರಿಯ ಪರವಾನಗಿಗೆ ಜೀವ ಕೊಡಲಾಗ್ತಿದೆ ● ಹೊಸ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ

• **ಉದಯವಾಹಿನಿ, ಬೆಂಗಳೂರು**


ಅಬಕಾರಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಹಗರಣದ ವಿಧಾನಸಭೆಯಲ್ಲಿ ಚರ್ಚೆಯ ಮತ್ತೇರಿಸಿತು. ನಿಯಮ 69 ಅಡಿಯಲ್ಲಿ ನಡೆದ ಚರ್ಚೆಯಲ್ಲಿ ವಿಪಕ್ಷಗಳು ಅಬಕಾರಿ ಸಚಿವ ಆರ್ ಬಿ ತಿಮ್ಮಾಪೂರ ರಾಜೀನಾಮೆಗೆ ಬಿಗಿಪಟ್ಟು ಹಿಡಿದವು. ಪರಿಣಾಮ ಆಡಳಿತ ವಿಪಕ್ಷಗಳ ನಡುವೆ ತೀವ್ರ ವಾಕ್ಸಮರ ನಡೆಯಿತು. ತನಿಖಾ ವರದಿ ಬರುವವರೆಗೂ ಸಚಿವ ಆರ್ ಬಿ ತಿಮ್ಮಾಪೂರ ರಾಜೀನಾಮೆ ಕೊಡಬೇಕು ಎಂದು ವಿಪಕ್ಷ ನಾಯಕ ಆರ್ ಅಶೋಕ್ ಆಗ್ರಹಿಸಿದರು.

**ಸಿಎಂ ಬಣಕ್ಕೆ ಠಕ್ಕರ್**

**ಪೊಲೀಸರು ಕೊನೆಗೆ ಕಳ್ಳರ ಬಂಧನ ಮಾಡ್ತಾರೆ!:** ಅಶೋಕ್ ಭಾಷಣ ಮುಗಿಯುವಾಗ ಬಂದ ಸಿಎಂ ಸಿದ್ದರಾಮಯ್ಯ ಸದನಕ್ಕೆ ಆಗಮಿಸಿದರು. ಈ ವೇಳೆ ಸಿದ್ದರಾಮಯ್ಯ ಕಾಲೆಳೆದ ಅಶೋಕ್, ಸಿನಿಮಾದಲ್ಲಿ ಪೊಲೀಸರು ಕೊನೆಗೆ ಬರ್ತಾರೆ, ಹಾಗೆ ಸಿದ್ದರಾಮಯ್ಯ ಅವರು ಬಂದಿದ್ದಾರೆ. ಕೊನೆಗೆ ಬಂದು ಕಳ್ಳರ ಬಂಧನ ಮಾಡ್ತಾರೆ.. ಹಾಗೆ ಸಚಿವರ ಬಂಧನ ಮಾಡ್ತಾರಾ ನೋಡೋಣ ಎಂದು ಕಾಲೆಳೆದರು.

ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರಬೇಕಿದ್ದ 6 ಸಾವಿರ ಕೋಟಿ ಎಲ್ಲಿ ಹೋಯ್ತು ಈ ಸರ್ಕಾರಕ್ಕೆ ಮಾನ ಮರ್ಯಾದೆ ಇದೆಯಾ ವಾರ್ಷಿಕವಾಗಿ ಬರಬೇಕಿದ್ದ ಹಣ ಯಾವ ರಾಜ್ಯಕ್ಕೆ ಹೋಯ್ತು ಇಷ್ಟೆಲ್ಲಾ ಲೂಟಿ ಆಗಿದೆ, ಸರ್ಕಾರ ಯಾವ ಅಧಿಕಾರಿಯಿಂದಲೂ ಮಾಹಿತಿ ಪಡೆದಿಲ್ಲ. ಅಧಿಕಾರಿಗಳ ಆಡಿಯೋ ಸುಳ್ಳು ಅಂತಾರೆ. ಹಾಗಾದರೆ ಆಡಿಯೋ ಫಾರೆನ್ಸಿಕ್ ಲ್ಯಾಬ್‌ಗೆ ಯಾಕೆ ಕಳಿಸಿಲ್ಲ ಎಂದು ಪ್ರಶ್ನಿಸಿದರು.

ಸಚಿವರ ಆಪ್ತರು ಹೇಳಿದ್ರು, ಅವರಿಗೆ ಮೂರು ಜಿಲ್ಲೆಗಳು ಮಾತ್ರ ಉಸ್ತುವಾರಿ ಇದೆ ಅಂತ. ಹಾಗಾದ್ರೆ ಉಳಿದ ಜಿಲ್ಲೆಗಳು ಯಾರು ನೋಡಿಕೊಳ್ತಾರೆ ಆ ಕಾಣದ ಕೈ ಯಾವುದು ಅಂತ ಗೊತ್ತಾಗಬೇಕಿದೆ ಎಂದು ಸದನದಲ್ಲಿ ಸರ್ಕಾರಕ್ಕೆ ವಿಪಕ್ಷ ನಾಯಕ ಅಶೋಕ್ ಆಗ್ರಹಿಸಿದರು.



### ಅಬಕಾರಿ ಸಚಿವರು ಸಚಿವರಾಗಲು ಅರ್ಹರಲ್ಲ

ಇದೆಲ್ಲಾ ಆಡಿಯೋ, ವೀಡಿಯೋ, ಹಣ ಎಲ್ಲಿ ಹೋಯ್ತು ಅಂತ ತನಿಖೆ ಆಗಬೇಕು. ಅಲ್ಲಿಯವರೆಗೂ ಸಚಿವರು ರಾಜೀನಾಮೆ ಕೊಡಬೇಕು ಎಂದು ಸದನದಲ್ಲಿ ಸಚಿವ ಆರ್.ಬಿ ತಿಮ್ಮಾಪೂರ ರಾಜೀನಾಮೆಗೆ ಅಶೋಕ್ ಒತ್ತಾಯಿಸಿದರು. ಅಬಕಾರಿ ಇಲಾಖೆಯಲ್ಲಿ ಕಿಕ್ ಲೆವೆಲ್ ಜಾಸ್ತಿಯಾಗಿದೆ. ಕಾಸಿಗಾಗಿ ಪೋಸ್ಟಿಂಗ್ ನಡೆಯುತ್ತಿದೆ. ನಿಷ್ಕ್ರಿಯ ಪರವಾನಗಿಗೆ ಜೀವ ಕೊಡಲಾಗ್ತಿದೆ. ಹೊಸ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ. ಆದರೆ, ಸಿದ್ದರಾಮಯ್ಯ ಮೌನ ಮೂರ್ತಿ ಆಗಿದ್ದಾರೆ. ಅಬಕಾರಿ ಹಗರಣದ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂದರು. ಬೇರೆ ರಾಜ್ಯಗಳ ಚುನಾವಣೆಗೆ ಹಣ ಸಂಗ್ರಹ ಮಾಡಲಾಗ್ತಿದೆ ಎಂಬ ಆರೋಪ ಇದೆ. ಗಾಂಧೀಜಿಯ ಬಗ್ಗೆ ಮಾತನಾಡಿದರೆ ಸಾಲದು. ಗಾಂಧೀಜಿ ಆದರ್ಶ ಪಾಲನೆ ಮಾಡಬೇಕಲ್ವಾ ಇಲಾಖೆ ಎಂದು ವಾಗ್ದಾಳಿ ನಡೆಸಿದರು.

ಅಧಿಕಾರಿ ಗಾಂಧಿ ಮೇಲೆ ಆಣೆ ಇಟ್ಟಿದ್ದಾನೆ. ಪರವಾನಗಿಗೆ ಅರ್ಜಿ ಹಾಕಿದ್ದ ಅರ್ಜಿದಾರನಿಗೆ ನೀನು ಯಾವ ಜಾತಿ ಎಂದು ಅಧಿಕಾರಿ ಕೇಳುತ್ತೇನೆ. ಒಕ್ಕಲಿಗ ಗೌಡ ಎಂದು ಅರ್ಜಿದಾರ ಹೇಳುತ್ತಾನೆ. ಯಾರಾದ್ರೂ ಕುರುಬರನ್ನು ಕರೆದುಕೊಂಡು ಅಪ್ರೋಚ್ ಮಾಡು ಎಂದು ಸಲಹೆ ಕೊಡುತ್ತಾನೆ.

ದೊಡ್ಡ ಸಾಹೇಬ್ರನ್ನು ಭೇಟಿಯಾಗು, ಇಲ್ಲಾಂದ್ರೆ ಚಿಕ್ಕ ಸಾಹೇಬ್ರು ಯತೀಂದ್ರ ಸಿದ್ದರಾಮಯ್ಯನ ಭೇಟಿಯಾಗು ಎಂದು ಸಲಹೆ ನೀಡುತ್ತಾರೆ ಎಂಬುದನ್ನು ಸದನದ ಗಮನಕ್ಕೆ ತಂದರು.

ಅಶೋಕ್ ಮಾತಿಗೆ ಧ್ವನಿಗೂಡಿಸಿದ ಸುನಿಲ್ ಕುಮಾರ್, ಹಗರಣದ ಬಗ್ಗೆ ಸ್ವಲ್ಪ ಮಾತನಾಡಲು ಸಾಧ್ಯವಿಲ್ಲ. ಹಗರಣದ ವಿವರ ಇಷ್ಟು ಉದ್ದವಿದೆ. ಹಾಗಾಗಿ ಸಣ್ಣದಾಗಿ ಮಾತಾಡಲು ಸಾಧ್ಯವಿಲ್ಲ. ನರೇಗಾ ವಿಚಾರ ನಾವು ಚರ್ಚೆ ಮಾಡಲು ಸಿದ್ಧ. ಆದರೆ, ಮೊದಲು ನಮಗೆ ಅಬಕಾರಿ ಹಗರಣದ ಚರ್ಚೆ ಮಾಡಲು ಅವಕಾಶ ನೀಡಿ ಎಂದು ಒತ್ತಾಯಿಸಿದರು.

**ಗದ್ದಲ, ತಿಮ್ಮಾಪೂರ ಸೈಲೆಂಟ್:** ಬಿಜೆಪಿ ಹಾಗೂ ಜೆಡಿಎಸ್ ಗದ್ದಲ ತೀವ್ರಗೊಂಡರೂ ಸಚಿವ ಆರ್ ಬಿ ತಿಮ್ಮಾಪೂರ ಸೈಲೆಂಟ್ ಆಗಿದ್ದರು. ಯಾವುದೇ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡದೆ ಸುಮ್ಮನಾದರು. ಆರೋಪಗಳಿಗೆ ಸಚಿವರ ಉತ್ತರಕ್ಕೆ ಪ್ರತಿಪಕ್ಷಗಳು ಆಗ್ರಹಿಸಿದವು.

**ಈ ದಿನದ ದರ** ಪೆಟ್ರೋಲ್: 102.92 ₹/L ಡೀಸೆಲ್ : 91.67 ₹/L ಬಂಗಾರ: ₹15,393/Gram24ct ₹14,110/Gram22ct ಬೆಳ್ಳಿ: ₹280.00/Gram

## ಭರತನಾಟ್ಯ ಪ್ರದರ್ಶನ

• ಉದಯವಾಹಿನಿ, ಬೆಂಗಳೂರು



ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಫೆಬ್ರವರಿ 5, ಗುರುವಾರ ಸಂಜೆ 5-15ಕ್ಕೆ ವಿದುಷಿ ಮೀನಾಕ್ಷಿ ಪ್ರಸಾದ್ ನಿರ್ದೇಶನದಲ್ಲಿ ಭಾವ ನೂಪುರ ನಾಟ್ಯ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಿದೆ ಎಂದು ಶ್ರೀನಂದಕಿಶೋರ್ ಆಚಾರ್ ತಿಳಿಸಿದ್ದಾರೆ. **ಸ್ಥಳ:** ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-41

## ಫೆ.17ರೊಳಗೆ ಆಸ್ತಿ ತೆರಿಗೆ ಪಾವತಿಸದಿದ್ದರೆ 7000 ಆಸ್ತಿಗಳ ಹರಾಜು

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಅತಿ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ 7,000 ಆಸ್ತಿಗಳ ಹರಾಜಿಗೆ ಜಿಬಿಎ ಅಧಿಕಾರಿಗಳು ನೋಟೀಸ್ ಜಾರಿ ಮಾಡಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಐದು ನಗರ ಪಾಲಿಕೆಗಳಲ್ಲಿ ಸುಮಾರು 7,000 ಆಸ್ತಿ ಮಾಲೀಕರು ಒಟ್ಟು 437 ಕೋಟಿ ರೂ.ಗಳಿಗಿಂತ ಹೆಚ್ಚಿನ ಆಸ್ತಿ ತೆರಿಗೆ ಬಾಕಿಯನ್ನು ಉಳಿಸಿಕೊಂಡಿದ್ದು.ಈ ಸಂಬಂಧ ಆಸ್ತಿ ಮಾಲೀಕರಿಗೆ ತೆರಿಗೆ ಕಟ್ಟುವಂತೆ ನೋಟಿಸ್ ನೀಡಲಾಗಿದೆ. ಆದರೂ ಸಹ ತೆರಿಗೆ ಪಾವತಿಸದೆ ಇರುವುದರಿಂದ, ಮುಂದಿನ ಕ್ರಮವಾಗಿ ಅಸ್ತಿ ಜಪ್ತಿ ಆದೇಶಗಳನ್ನು ಹೊರಡಿಸಲಾಗಿದೆ.

ಜಪ್ತಿ ಆದೇಶಗಳ ಹೊರಡಿಸಿದ ಬಳಿಕವೂ ತೆರಿಗೆ ಪಾವತಿ ಆಗದಿರುವ ಹಿನ್ನೆಲೆಯಲ್ಲಿ ಆಸ್ತಿಗಳನ್ನು ಫೆ.17 ರಂದು ಆಯಾ ವಲಯಗಳ ಜಂಟಿ ಆಯುಕ್ತರ ಕಚೇರಿಗಳಲ್ಲಿ ಹರಾಜು ಮಾರಾಟಕ್ಕೆ ನಿಗದಿಪಡಿಸಲಾಗಿದೆ. ಹರಾಜಿಗೆ ಸಂಬಂಧಿಸಿದ ನೋಟಿಸ್‌ಗಳ ಪಟ್ಟಿಯನ್ನು ಅಧಿಕೃತ ವೆಬ್ ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗಿದೆ. ಸಂಬಂಧಿತ ಆಸ್ತಿ ಮಾಲೀಕರು ತಕ್ಷಣವೇ ಆನ್‌ಲೈನ್ ಮೂಲಕ ತೆರಿಗೆ ಪಾವತಿ ಮಾಡಿದಲ್ಲಿ, ಹರಾಜು ಪ್ರಕ್ರಿಯೆಯನ್ನು ತಪ್ಪಿಸಿಕೊಳ್ಳಬಹುದು ಅಂತ ಜಿಬಿಎ ಮುಖ್ಯ ಅಯುಕ್ತ ಮಹೇಶ್ವರ್ ರಾವ್ ಅದೇಶ ಹೊರಡಿಸಿದ್ದಾರೆ. ಸುಮಾರು7,000 ಆಸ್ತಿ ಮಾಲೀಕರು ಒಟ್ಟು 437 ಕೋಟಿ ರೂ.ಗಳಿಗಿಂತ ಹೆಚ್ಚಿನ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡು ನಗರಪಾಲಿಕೆಗೆ ವಂಚನೆ ಮಾಡುತ್ತಿದ್ದಾರೆ. ಜಿಬಿಎ ಕಾಯ್ದೆ ಪ್ರಕಾರ ಅಂತಹ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡು ಹರಾಜು ಮಾಡಲು ಕಾನೂನಿನಲ್ಲಿ ಅವಕಾಶ ಇದೆ. ಈ ಹಿನ್ನೆಲೆಯಲ್ಲಿ ಆಸ್ತಿ ಮಾಲೀಕರು ತಕ್ಷಣವೇ ಅಸ್ತಿ ತೆರಿಗೆ ಪಾವತಿ ಮಾಡುವಂತೆ ಅವರು ಸೂಚನೆ ನೀಡಿದ್ದಾರೆ.

## ಪಿಜಿ ವೈದ್ಯಕೀಯ ಕೋರ್ಸ್‌ಗಳಿಗೆ ಫೆ.5ರಿಂದ ಆಪ್ಷನ್ಸ್‌ಎಂಟ್ರಿ ಆರಂಭ

• ಉದಯವಾಹಿನಿ, ಬೆಂಗಳೂರು

ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಗಳಿಗೆ 3ನೇ ಸುತ್ತಿನ ಸೀಟು ಹಂಚಿಕೆಗೆ ಆಪ್ಷನ್ಸ್ ದಾಖಲಿಸಲು ಫೆ.5ರಿಂದ ಫೆ.9ರವರೆಗೆ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಅವರು ತಿಳಿಸಿದ್ದಾರೆ. ಅಖಿಲ ಭಾರತ ಕೋಟಾದ 3ನೇ ಸುತ್ತಿನ ಸೀಟು ಹಂಚಿಕೆಯ ವೇಳಾ ಪಟ್ಟಿ ಎಂಸಿಸಿ ಪರಿಷ್ಕರಿಸಿದ ಕಾರಣ ಫೆ.2ರ ಬದಲಿಗೆ ಫೆ.5ರಿಂದ ಇಚ್ಛೆ ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗಿದೆ. ಫೆ.9ರಂದು ಬೆಳಿಗ್ಗೆ 8 ಗಂಟೆವರೆಗೆ ಇಚ್ಛೆ ದಾಖಲಿಸಬಹುದು ಎಂದು ಅವರು ವಿವರಿಸಿದ್ದಾರೆ. ಈ ಹಿಂದಿನ ಸುತ್ತುಗಳಲ್ಲಿ ದಾಖಲಿಸಿದ್ದ ಇಚ್ಛೆಗಳು ಈ ಸುತ್ತಿಗೆ ಇರುವುದಿಲ್ಲ. ಹೀಗಾಗಿ ಹೊಸದಾಗಿಯೇ ಆಪ್ಷನ್ಸ್ ದಾಖಲಿಸಬೇಕು ಎಂದು ಅವರು ತಿಳಿಸಿದ್ದಾರೆ.

ತಾತ್ಕಾಲಿಕ ಸೀಟು ಹಂಚಿಕೆಯ ಫಲಿತಾಂಶವನ್ನು ಫೆ.9ರಂದು ಸಂಜೆ 5 ಗಂಟೆಗೆ ಹಾಗೂ ಅಂತಿಮ ಫಲಿತಾಂಶವನ್ನು ಫೆ.10ರಂದು ಮಧ್ಯಾಹ್ನ 1 ಗಂಟೆ ನಂತರ ಪ್ರಕಟಿಸಲಾಗುತ್ತದೆ ಎಂದು ಅವರು ವಿವರಿಸಿದ್ದಾರೆ. ಸೀಟು ಹಂಚಿಕೆಯಾದವರು ಫೆ.11ರಿಂದ 13ರವರೆಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು. ಫೆ.13ರೊಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು. ಈ ದಿನಾಂಕಗಳು ಬದಲಾಗುವ ಸಾಧ್ಯತೆ ಕೂಡ ಇದ್ದು, ವಿವರಗಳಿಗೆ ಮೇಲಿಂದ ಮೇಲೆ ಕೆಇಎ ವೆಬ್ ಸೈಟ್ ನೋಡಬೇಕು ಎಂದು ಅವರು ಸಲಹೆ ನೀಡಿದ್ದಾರೆ.

## ಮೋದಿ-ಟ್ರಂಪ್ ಒಪ್ಪಂದ ಮಹತ್ವದ ಮೈಲಿಗಲ್ಲು : ಬೊಮ್ಮಾಯಿ

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ನರೇಂದ್ರ ಮೋದಿ,ಅಮೆರಿಕಾ ಅಧ್ಯಕ್ಷ ಟ್ರಂಪ್‌ನಡುವೆ ನಡೆದ ಎರಡು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳ ಒಪ್ಪಂದ ಎರಡೂ ದೇಶಗಳ ನಡುವೆ ಸಹಕಾರ ಸಂಬಂಧ ವೃದ್ಧಿಗೆ ಮಹತ್ವದ ಮೈಲುಗಲ್ಲಾಗಿದೆ ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬೊಮ್ಮಾಯಿ ತಿಳಿಸಿದ್ದಾರೆ. ಈ ಕುರಿತು ಎಕ್ಸ್ ಮಾಡಿರುವ ಅವರು, ಪ್ರಧಾನಿ ನರೇಂದ್ರ ಮೋದಿಯವರ ಸದೃಢ ನಾಯಕತ್ವ ವಿಶ್ವಮಟ್ಟದಲ್ಲಿ ಭಾರತದ ರಾಷ್ಟ್ರೀಯ ಹಿತಾಸಕ್ತಿ ಕಾಪಾಡುವಲ್ಲಿ ಯಶಸ್ವಿಯಾಗಿದೆ. ಅವರ ಸಾಮರ್ಥ್ಯವನ್ನು ಬಳಸಿಕೊಂಡು ವಿಶ್ವ ಮಟ್ಟದಲ್ಲಿ ಭಾರತದ ಅಭಿವೃದ್ಧಿಗೆ ಪೂರಕವಾಗಿ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ಪ್ರಧಾನಿಯವರು ಯಶಸ್ವಿಯಾಗಿದ್ದಾರೆ. ಈ ಮಹತ್ವದ ಸಾಧನೆ ಮಾಡಿರುವ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಮತ್ತು ಅವರ ತಂಡಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದ್ದಾರೆ.ಎರಡು ರಾಷ್ಟ್ರಗಳ ನಡುವಿನ ಈ ಒಪ್ಪಂದ ರೈತರು, ಸಣ್ಣ ಕೈಗಾರಿಕೆಗಳು, ನವೋದ್ಯಮಿಗಳಿಗೆ, ಕೌಶಲ್ಯ ಹೊಂದಿರುವ ಕಾರ್ಮಿಕರಿಗೆ ವಿಶ್ವ ಮಟ್ಟದಲ್ಲಿ ತಂತ್ರಜ್ಞಾನ, ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಹೊಸ ಅವಕಾಶಗಳನ್ನು ಒದಗಿಸಲಿದೆ ಎಂದು ತಿಳಿಸಿದ್ದಾರೆ.

## ರೈತನಿಂದ ಲಂಚ ಪಡೆದ ಸರ್ವೇಯರ್‌ಗೆ ಜೈಲು

• ಉದಯವಾಹಿನಿ, ದೇವನಹಳ್ಳಿ

ಜಮೀನು ಸರ್ವೆ ಕಾರ್ಯ ಹಾಗೂ 11ಇ ನಕ್ಷೆ ಮಾಡಿಕೊಡಲು ರೈತನಿಂದ ಲಂಚ ಪಡೆದ ಆರೋಪ ಸಾಬೀತಾದ ಕಾರಣ ಖಾಸಗಿ ಸರ್ವೇಯರ್‌ಗೆ ಜಿಲ್ಲಾ ನ್ಯಾಯಾಲಯ ಸರ್ವೇಯರ್‌ಗೆ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ದೇವನಹಳ್ಳಿ ತಾಲ್ಲೂಕಿನ ಕುಂದಾಣ ಗ್ರಾಮದ ರೈತ ಎನ್. ಲಕ್ಷ್ಮಣ ಬಿನ್ ನಾರಾಯಣಪ್ಪ ಅವರಿಗೆ ಸೇರಿದ ಸಾಸಲು ಗ್ರಾಮದ ಸರ್ವೆ ನಂ. 26/2ರಲ್ಲಿ 30 ಗುಂಟೆ ಜಮೀನಿನ ಸರ್ವೆ ಹಾಗೂ 11ಇ ನಕ್ಷೆ ಮಾಡಿಕೊಡಲು ಖಾಸಗಿ ಸರ್ವೇಯರ್ ಆಗಿದ್ದ ಡಿ.ಬಿ.ಗೌಡ 3,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. 2013ರ ನವೆಂಬರ್ 29ರಂದು ಲಂಚ ಸ್ವೀಕರಿಸುವ ವೇಳೆ ಲೋಕಾಯುಕ್ತ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದರು.

ಜಿಲ್ಲಾ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಸುಬ್ರಮಣ್ಯ ಪ್ರಕರಣದ ತನಿಖೆ ನಡೆಸಿ, ಬಳಿಕ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಎಂ.ಜೆ. ದಯಾನಂದ, ಆರೋಪಿ ವಿರುದ್ಧ ಜಿಲ್ಲಾ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿ ಇದೇ ಜ. 30ರಂದು ತೀರ್ಪು ಪ್ರಕಟಿಸಿದ ನ್ಯಾಯಾಧೀಶ ವಿಜಯಕುಮಾರ್, ದೇವನಹಳ್ಳಿಯ ಖಾಸಗಿ ಸರ್ವೇಯರ್ ಡಿ.ಬಿ. ಗೌಡ ವಿರುದ್ಧ ಆರೋಪ ಸಾಬೀತಾಗಿದೆ. ಭ್ರಷ್ಟಾಚಾರ ತಡೆ ಕಾಯಿದೆ ಅಡಿ 25 ಸಾವಿರ ದಂಡ ಹಾಗೂ ಒಂದೂವರೆ ವರ್ಷ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದರು.

# ವಿಕಸಿತ ಭಾರತದ ಬ್ಲೂಪ್ರಿಂಟ್ ಈ ಬಜೆಟ್

• ಉದಯವಾಹಿನಿ, ಬೆಂಗಳೂರು

• ಶಂಕರ್ ಎಸ್ ಎನ್

### ಕೇಂದ್ರ ಆಯವ್ಯಯದ ಕುರಿತು ನನ್ನ ಅಭಿಪ್ರಾಯ

ಪ್ರಗತಿ ಆಧಾರಿತ, ಜನಕೇಂದ್ರಿತ ಆಯವ್ಯಯ ಅನಾವರಣಗೊಳಿಸಿದ ಕೇಂದ್ರ ಸರ್ಕಾರ. ಕೇಂದ್ರಸರ್ಕಾರದ ಐತಿಹಾಸಿಕ ಬಜೆಟ್ ಕ್ರಾಂತಿಕಾರಿ, ಜನಸ್ನೇಹಿ, ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಆರ್ಥಿಕ ಶಿಸ್ತಿನ ಬಜೆಟ್ ಇದಾಗಿದೆ. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ 2026-27ರ ಆರ್ಥಿಕ ಮುನ್ನೋಟವು ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತ ಕನಸಿಗೆ ಪೂರಕವಾದ ಮತ್ತು ಭವ್ಯ ಭಾರತದ ಭವಿಷ್ಯ ನಿರ್ಮಾಣಕ್ಕೆ ದಾರಿದೀಪವಾಗಿ ಹೊರಹೊಮ್ಮಿದೆ. ಕರ್ತವ್ಯ ಭವನದಲ್ಲಿ ಸಿದ್ಧಪಡಿಸಿದ ಮೊದಲ ಬಜೆಟ್ ಪ್ರಧಾನಿ ಶ್ರೀನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ದೇಶದ ಎಲ್ಲಾ ವರ್ಗಗಳ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧವಾಗಿದೆ ಎಂಬುದನ್ನು ಪ್ರತಿಫಲಿಸುತ್ತಿದೆ.

ಇದು ಭಾರತದ ಬೆಳವಣಿಗೆ ಕೇಂದ್ರಿತ ಬಜೆಟ್ ಆಗಿದ್ದು, ಏಳು ಪ್ರಮುಖ ಕ್ಷೇತ್ರಗಳಲ್ಲಿ ಉತ್ಪಾದನಾ ಸಾಮರ್ಥ್ಯ ಬಲಪಡಿಸುವಿಕೆ ಮೇಲೆ ಕೇಂದ್ರೀಕೃತವಾಗಿದೆ. ವಿಶೇಷವಾಗಿ ಬಯೋಫಾರ್ಮಾ ಕ್ಷೇತ್ರಕ್ಕೆ 10,000 ಕೋಟಿ ಮೀಸಲಿಟ್ಟು ನವೀನತೆ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಉತ್ಪಾದನೆಗೆ ಬಲವಾದ ಉತ್ತೇಜನ ನೀಡಲಾಗಿದೆ. ಇಂಡಿಯನ್‌ಸೆಮಿಕಂಡಕ್ಟರ್ ಮಿಷನ್ 2.0 ಆರಂಭವು ಭಾರತವನ್ನು ಜಾಗತಿಕ ತಂತ್ರಜ್ಞಾನ ಶಕ್ತಿ ಕೇಂದ್ರವನ್ನಾಗಿ ರೂಪಿಸುವಲ್ಲಿ ದಿಟ್ಟ ಹೆಜ್ಜೆಯಾಗಿದೆ.

**ಕೈಗಾರಿಕಾ ಅಡಿಪಾಯಕ್ಕೆ ಸುಭದ್ರತೆ:** ದೇಶೀಯ ಉತ್ಪಾದನೆಗೆ ಮತ್ತಷ್ಟು ವೇಗ ನೀಡುವ ಉದ್ದೇಶದಿಂದ ಎಲೆಕ್ಟ್ರಾನಿಕ್ಸ್ ಘಟಕಗಳ ಉತ್ಪಾದನಾ ಯೋಜನೆಗೆ ನೀಡುವ ಹೂಡಿಕೆಯನ್ನು ಸುಮಾರು 40,000 ಕೋಟಿಗೆ ಹೆಚ್ಚಿಸಲಾಗಿದೆ. ಇದರ ಜೊತೆಗೆ ಅಪರೂಪದ ಖನಿಜಗಳ ಬಳಕೆ, ಕೆಮಿಕಲ್ ಪಾರ್ಕ್ ಸ್ಥಾಪನೆ, ಜಾಗತಿಕ ಮಟ್ಟದ ಕಂಟೈನರ್ ಉತ್ಪಾದನೆಗೆ 10,000 ಕೋಟಿ ನೆರವು ಘೋಷಿಸಿದ್ದು, ಭಾರತದ ಕೈಗಾರಿಕಾ ಅಡಿಪಾಯವನ್ನು ಬಲಪಡಿಸುತ್ತದೆ.

**ಗ್ರಾಮಗಳ ಬೆಳವಣಿಗೆಗೆ ಪ್ರತೀಕ:** ಕಾರ್ಮಿಕರ ಆಧಾರಿತ ವಸ್ತ್ರೋದ್ಯಮಕ್ಕೆ ವಿಶೇಷ ಒತ್ತು ನೀಡಿದ್ದು, ಖಾದಿ ಗ್ರಾಮೋದ್ಯೋಗ, ಕೈಗಾರಿಕೆಗಳಿಗೆ ಹೊಸ ಚೈತನ್ಯ ತುಂಬಲು ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಕಾರ್ಯಕ್ರಮ ಗಳನ್ನು ಘೋಷಿಸಲಾಗಿದೆ.

ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ರಾಷ್ಟ್ರೀಯ ಚಾಂಪಿಯನ್‌ಗಳಾಗಿ ರೂಪಿಸುವ ಉದ್ದೇಶದಿಂದ 10,000 ಕೋಟಿ ಇಕ್ವಿಟಿ ಬೆಂಬಲ ಒದಗಿಸಲಾಗಿದೆ.

ಸಾರ್ವಜನಿಕ ಮೂಲ ಸೌಕರ್ಯಕ್ಕೆ ಇತಿಹಾಸದಲ್ಲೇ ಅತಿ ಹೆಚ್ಚು 12.2 ಲಕ್ಷ ಕೋಟಿ ಮೀಸಲಿಡಲಾಗಿದೆ. ಇದು ದೀರ್ಘಕಾಲೀನ ಬೆಳವಣಿಗೆಯತ್ತ ಸರ್ಕಾರದ ಬದ್ಧತೆಯನ್ನು ಪ್ರದರ್ಶಿಸುತ್ತದೆ.




ಜನಕೇಂದ್ರಿತ ಯೋಜನೆಗಳಾಗಿ ಏಳು ಹೈ ಸ್ಪೀಡ್ ರೈಲು ಕಾರಿಡಾರ್‌ಗಳು, ಆರೋಗ್ಯ ಕ್ಷೇತ್ರದ ಯೋಜನೆಗಳು, ಖೇಲೋ ಇಂಡಿಯಾ ಮಿಷನ್, ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆ ಉತ್ತೇಜನ, ತೆಂಗು ಪ್ರೋತ್ಸಾಹ ಯೋಜನೆ, ಗೋಡಂಬಿ ಉತ್ತೇಜನ, ಗ್ರಾಮೀಣ ಮಹಿಳಾ ಉದ್ಯಮಿಗಳಿಗೆ SHE- ಮಾರ್ಟ್‌ಗಳು ಘೋಷಿಸಲಾಗಿದೆ.

ಅಂಗವಿಕಲರಿಗೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲು ವಿಶೇಷ ಯೋಜನೆಗಳನ್ನೂ ಪರಿಚಯಿಸಲಾಗಿದೆ. 17 ಕ್ಯಾನ್ಸರ್ ಔಷಧಿಗಳ ಮೇಲೆ ಕಸ್ಟಮ್ಸ್ ಸುಂಕವನ್ನು ಸಂಪೂರ್ಣವಾಗಿ ರದ್ದುಗೊಳಿಸಿರುವುದು, ರೋಗಿಗಳ ನಿರಾಳತೆಗೆ ಕಾರಣವಾಗಿದೆ. ವ್ಯವಹಾರ ಪ್ರಕ್ರಿಯೆಗಳ ಸರಳೀಕರಣ, ಸಹಕಾರಿ ಕ್ಷೇತ್ರಕ್ಕೆ ಹಲವು ಹೊಸ ಕಾರ್ಯಕ್ರಮಗಳು, ಐಟಿ ಕ್ಷೇತ್ರಕ್ಕೆ ಬಲವಾದ ನೀತಿ ಬೆಂಬಲವೂ ಈ ಬಜೆಟ್‌ನ ಪ್ರಮುಖ ಅಂಶಗಳಾಗಿವೆ. ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂಬಂತೆ ರೈತರು, ಮಹಿಳೆಯರು, ಕಾರ್ಮಿಕರು, ಕ್ರೀಡೆ, ಆರೋಗ್ಯ, ಶಿಕ್ಷಣ ವೈದ್ಯಕೀಯ, ಕೈಗಾರಿಕೆ, ಪ್ರವಾಸೋದ್ಯಮ ಕ್ಷೇತ್ರಗಳು ಒಳಗೊಂಡಂತೆ ಸರ್ವ ವ್ಯಾಪಿ, ಸರ್ವ ಸ್ಪರ್ಶಿ ಆಯವ್ಯಯವಾಗಿದೆ.

### ತೆರಿಗೆ ಪಾಲು ಹಂಚಿಕೆಗೆ ಶಿಫಾರಸು

**ದೇಶದ ಸುಸ್ಥಿರ ಬೆಳವಣಿಗೆ ಜೊತೆಗೆ ಜನರ ಆಕಾಂಕ್ಷೆಗಳನ್ನು ಈಡೇರಿಸುವ ಉತ್ತಮ ಬಜೆಟ್ ಇದಾಗಿದೆ. 16ನೇ ಹಣಕಾಸು ಆಯೋಗದ ಮೂಲಕ ಕರ್ನಾಟಕಕ್ಕೆ ಶೇ.4.13ರಷ್ಟು ತೆರಿಗೆ ಪಾಲು ಹಂಚಿಕೆಗೆ ಶಿಫಾರಸು ಮಾಡಲಾಗಿದ್ದು, 2026-27ನೇ ಸಾಲಿನಲ್ಲಿ 63,049 ಕೋಟಿ ತೆರಿಗೆ ಪಾಲು ಕರ್ನಾಟಕಕ್ಕೆ ದೊರೆಯಲಿದೆ. ಒಟ್ಟಿನಲ್ಲಿ ಸಾಮಾನ್ಯ ನಾಗರಿಕರ ಮೇಲೆ ಯಾವುದೇ ಹೆಚ್ಚುವರಿ ತೆರಿಗೆ ಭಾರ ಹಾಕದೇ, ಸಮತೋಲನ ಮತ್ತು ನವೀನತೆಯಿಂದ ಕೂಡಿದ ಈ ಬಜೆಟ್ ಭಾರತವನ್ನು ಅಭಿವೃದ್ಧಿಶೀಲ, ಆತ್ಮನಿರ್ಭರ ಭವಿಷ್ಯದತ್ತ ದೃಢ ಸಂಕಲ್ಪದೊಂದಿಗೆ ಕೊಂಡೊಯ್ಯುತ್ತದೆ.**

## ಮೂರಂತಸ್ತಿನ ಮನೆ ಮಾಲೀಕರಿಗೆ ಜಿಬಿಎ ಹೊಸ ರೂಲ್ಸ್

• ಉದಯವಾಹಿನಿ, ಬೆಂಗಳೂರು



ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿರುವ ಗ್ರೌಂಡ್ +3, ಹೆಚ್ಚಿನ ಅಂತಸ್ತುಗಳ ಕಟ್ಟಡಗಳ ನೆಲಮಹಡಿಯಲ್ಲಿ ಕಡ್ಡಾಯವಾಗಿ ತ್ಯಾಜ್ಯ ಸಂಗ್ರಹಣಾ ಬಿನ್‌ಗಳನ್ನು ಅಳವಡಿಕೆಗೆ ಜಿಬಿಎ ಅದೇಶ ಹೊರಡಿಸಿದೆ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ನಿರ್ವಹಿಸುವುದು ಎಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಪರಿಸರ, ಅರಣ್ಯ, ಹವಾಮಾನ ಬದಲಾವಣೆ ಸಚಿವಾಲಯವು ಜಾರಿಗೊಳಿಸಿರುವ ಘನತ್ಯಾಜ್ಯ ನಿರ್ವಹಣಾ ನಿಯಮಗಳು-2016ರ ಅನ್ವಯ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸಿ ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ಪ್ರಸ್ತುತ ಸುಮಾರು 800ಕ್ಕೂ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ಪರಿವೀಕ್ಷಣೆಯ ವೇಳೆಯಲ್ಲಿ ಕೆಲವು ಬಹುಮಹಡಿ ಕಟ್ಟಡಗಳಲಿ ಕೆಲವು ನಿವಾಸಿಗಳು ತ್ಯಾಜ್ಯವನ್ನು ವಿಲೇವಾರಿದಾರರಿಗೆ ನೀಡದೆ ಇರುವುದು ಕಂಡು ಬಂದಿರುತ್ತದೆ. ಇದರಿಂದ ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡಲಾಗದೆ, ತ್ಯಾಜ್ಯವನ್ನು ಅನಧಿಕೃತವಾಗಿ ರಸ್ತೆ ಬದಿಯಲ್ಲಿ ಅಥವಾ ಖಾಲಿ ನಿವೇಶನಗಳಲ್ಲಿ ಎಸೆಯುತ್ತಿರುವುದರಿಂದ ನಗರದಲ್ಲಿ ಕಪ್ಪು ಚುಕ್ಕೆಗಳು ಸೃಷ್ಟಿಯಾಗುತ್ತಿದ್ದು ಇದು ಸಾರ್ವಜನಿಕರ ಆರೋಗ್ಯ, ನಗರದ ಸೌಂದರೀಕರಣಕ್ಕೆ ಧಕ್ಕೆ ಉಂಟು ಮಾಡುತ್ತಿರುತ್ತದೆ.

ಘನತ್ಯಾಜ್ಯ ನಿರ್ವಹಣಾ ನಿಯಮಗಳು-2016ರ ನಿಯಮ-4 ರ ಪ್ರಕಾರ ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕರು ತಮ್ಮ ಆವರಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಹಸಿ ತ್ಯಾಜ್ಯ, ಒಣ ತ್ಯಾಜ್ಯ ಮತ್ತು ಗೃಹಬಳಕೆಯ ಅಪಾಯಕಾರಿ ತ್ಯಾಜ್ಯವನ್ನಾಗಿ ಪ್ರತ್ಯೇಕಿಸುವುದು ಹಾಗೂ ಅದನ್ನು ಪ್ರತ್ಯೇಕ ಬಣ್ಣದ ತ್ಯಾಜ್ಯದ ಬಿನ್ ಗಳಲ್ಲಿ ಸಂಗ್ರಹಿಸಿಡುವುದು ಕಡ್ಡಾಯವಾಗಿದೆ.

ಜಿಬಿಎ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮನೆ ಮನೆಯಿಂದ ಕಸವನ್ನು ಸಮರ್ಪಕವಾಗಿ ಸಂಗ್ರಹಿಸಲು ಗ್ರೌಂಡ್ +03, ಅದಕ್ಕಿಂತ ಹೆಚ್ಚಿನ ಅಂತಸ್ತುಗಳನ್ನು ಹೊಂದಿರುವ ಎಲ್ಲಾ ವಸತಿ ಗೃಹ, ಸಮುಚ್ಚಯಗಳು, ವಾಣಿಜ್ಯ ಆಸ್ತಿ ಮಾಲೀಕರು, ತಮ್ಮ ಆವರಣದಲ್ಲಿ ಉತ್ಪತ್ತಿ ಆಗುವ ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸಿ ನೆಲ ಮಹಡಿಯಲ್ಲಿ ಪ್ರತ್ಯೇಕವಾಗಿ ಎರಡು ತ್ಯಾಜ್ಯದ ಬಿನ್ ಗಳಲ್ಲಿ ಶೇಖರಿಸಬೇಕು. ನೆಲಮಹಡಿಯಲ್ಲಿ ಈ ಬಿನ್ ಗಳನ್ನು ಸ್ಥಾಪಿಸುವುದರಿಂದ ಸ್ವಚ್ಛತಾ ಸಿಬ್ಬಂದಿಗೆ ತ್ಯಾಜ್ಯ ಸಂಗ್ರಹಣೆ ಸುಗಮವಾಗುತ್ತದೆ ಮತ್ತು ಮೂಲದಲ್ಲೇ ತ್ಯಾಜ್ಯ ವಿಂಗಡಣೆ ಖಚಿತವಾಗುತ್ತದೆ.

ದೀರ್ಘಾವಧಿಯಲ್ಲಿ ಈ ಕ್ರಮವು ನಗರದಲ್ಲಿನ ಬ್ಲಾಕ್ ಸ್ಪಾಟ್‌ಗಳನ್ನು ಗಣನೀಯವಾಗಿ ಕಡಿಮೆ ಮಾಡಿ, ಸಂಪೂರ್ಣ ನಿರ್ಮೂಲನೆಗೆ ಸಹಕಾರಿಯಾಗುತ್ತದೆ. ಒಂದು ವೇಳೆ ಡಸ್ಟ್ ಬಿನ್ ನಿರ್ವಹಣೆ ಮಾಡದೆ ಹೋದರೆ ಅಂತಹ ಕಟ್ಟಡಗಳಿಗೆ ನೋಟೀಸ್ ನೀಡಿ ದಂಡ ವಿಧಿಸಲಾಗುವುದು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಎಚ್ಚರಿಕೆ ನೀಡಿದ್ದಾರೆ.

## ಚಿನ್ನ-ಬೆಳ್ಳಿ ದರ ಸತತ ಇಳಿಕೆ : ಆಭರಣ ಕೊಳ್ಳಲು ಇದು ಸರಿಯಾದ ಸಮಯವೇ..?

• ಉದಯವಾಹಿನಿ, ಬೆಂಗಳೂರು



ಸತತ ನಾಲ್ಕನೇ ದಿನವೂ ಚಿನ್ನ, ಬೆಳ್ಳಿ ದರಗಳು ಇಳಿಕೆ ಆಗಿದ್ದು, ಗ್ರಾಹಕರು ಸಮಾಧಾನಪಡುವಂತಾಗಿದೆ. ತೀವ್ರ ಏರುಗತಿಯಲ್ಲಿದ್ದ ಚಿನ್ನ, ಬೆಳ್ಳಿ ದರಗಳು ಜ.30 ರಿಂದ ಇಳಿಮುಖವಾಗುತ್ತಿವೆ.

ಜ.29 ರಂದು 17,785ರೂ.ನಷ್ಟಿತ್ತು ಅದೇ ರೀತಿ 22 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 2,485 ರೂ. ಗಳಷ್ಟು ಕಡಿಮೆಯಾಗಿದೆ. ಜ.29 ರಂದು 16,395 ರೂ.ನಷ್ಟಿತ್ತು. ಮಂಗಳವಾರ 24 ಕ್ಯಾರೆಟ್ ಚಿನ್ನ ಪ್ರತೀ ಗ್ರಾಂಗೆ 142 ರೂ., 22ಕ್ಯಾರೆಟ್ ಚಿನ್ನ ಪ್ರತೀ ಗ್ರಾಂಗೆ 130 ರೂ. ಹಾಗೂ 18 ಕ್ಯಾರೆಟ್ ಚಿನ್ನ ಪ್ರತೀ ಗ್ರಾಂಗೆ 107 ರೂ. ಇಳಿಕೆಯಾಗಿದೆ. ಬೆಳ್ಳಿ ಪ್ರತೀ ಕೆಜಿಗೆ 20 ಸಾವಿರ ರೂ. ಇಳಿಕೆಯಾಗಿದ್ದು, 2,80,000 ರೂ.ಗಳಷ್ಟಿದೆ. 4 ದಿನಗಳಲ್ಲಿ 1,30,000 ರೂ.ಗಳಷ್ಟು ಬೆಳ್ಳಿ ಪ್ರತಿ ಕೆಜಿಗೆ ಇಳಿಕೆಯಾಗಿದೆ. ಪ್ರತಿ ಗ್ರಾಂಗೆ 20 ರೂ. ಇಳಿಕೆಯಾಗಿದ್ದು, ಪ್ರಸ್ತುತ 280 ರೂ. ದರವಿದೆ. ನಿನ್ನೆ ಪ್ರತೀ ಕೆಜಿ ಬೆಳ್ಳಿಗೆ 50 ಸಾವಿರ ರೂ. ಇಳಿಕೆಯಾಗಿತ್ತು. 24 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 15,75 ರೂ., 22 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 13,910 ರೂ., 18 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 11,381 ರೂ. ಇದೆ.ನಿನ್ನೆ ಕ್ರಮವಾಗಿ 24 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 142 ರೂ. ಹಾಗೂ 22 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 130 ರೂ. ಇಳಿಕೆಯಾಗಿತ್ತು. ಕಳೆದ 4 ದಿನಗಳಲ್ಲಿ 24 ಕ್ಯಾರೆಟ್‌ನ ಪ್ರತಿ ಗ್ರಾಂ ಚಿನ್ನ 2,710 ರೂ.ನಷ್ಟು ಕಡಿಮೆಯಾಗಿದೆ.

## ಪೊಲೀಸರ ತನಿಖೆಯಿಂದ ಬಯಲಾಯ್ತಾ ಉದ್ಯಮಿ ಸಿಜೆ ರಾಯ್ ಆತ್ಮಹತ್ಯೆಯ ಕಾರಣ?

• ಉದಯವಾಹಿನಿ, ಬೆಂಗಳೂರು



ಉದ್ಯಮಿ ಸಿಜೆ ರಾಯ್ ಅವರು ಕಳೆದ ಆರು ತಿಂಗಳಿನಿಂದ ಆರ್ಥಿಕ ಸಂಕಷ್ಟದಲ್ಲಿದ್ದರು ಎಂಬುವುದು ಇದುವರೆಗಿನ ಪೊಲೀಸರ ತನಿಖೆಯಿಂದ ತಿಳಿದು ಬಂದಿದೆ. ರಾಯ್ ಅವರು ರಾಜ್ಯವಲ್ಲದೇ ದೇಶ,ವಿದೇಶಗಳಲ್ಲಿ ಸುಮಾರು 8 ಸಾವಿರ ಕೋಟಿಗೂ ಹೆಚ್ಚು ಸ್ಥಿರ-ಚರ ಆಸ್ತಿ ಹೊಂದಿದ್ದಾರೆ. ಆದರೆ ಅವರು ಹೂಡಿಕೆಗೆ ಎಲ್ಲಿಯೂ ಬ್ಯಾಂಕ್ ಸಾಲ ಮಾಡಿಲ್ಲ ಎಂದು ತಿಳಿದು ಬಂದಿದೆ.

ಬ್ಯಾಂಕ್ ಸಾಲವಿಲ್ಲದೇ ಇಷ್ಟೊಂದು ಅಪಾರ ಪ್ರಮಾಣದ ಹಣ ಅವರಿಗೆ ಎಲ್ಲಿಂದ ಬಂತು ಎಂಬುವುದು ಎಲ್ಲಾ ಉದ್ಯಮಿಗಳ ಪ್ರಶ್ನೆಯಾಗಿದೆ.ಇವರ ಹೊಸ ಯೋಜನೆಗಳಿಗೆ ಕೆಲವು ರಾಜಕೀಯ ಗಣ್ಯ ವ್ಯಕ್ತಿಗಳು, ಕೆಲ ಉನ್ನತ ಮಟ್ಟದ ಅಧಿಕಾರಿಗಳು ಹೂಡಿಕೆ ಮಾಡಿದ್ದಾರೆ ಎಂಬುವುದು ಸಹ ತಿಳಿದು ಬಂದಿದೆ.

ಈ ಹಣದ ಪೈಕಿ ಬಹುಪಾಲು ಅಕ್ರಮ ಹಣ ಆಗಿರಬಹುದೆಂದು ತನಿಖಾ ಸಂಸ್ಥೆಗಳಿಗೆ ಶಂಕೆ ವ್ಯಕ್ತವಾಗಿದೆಕಾನ್ಫಿಡೆಂಟ್ ಸಂಸ್ಥೆ ಮೇಲೆ ಪದೇ ಪದೇ ಆದಾಯ ತೆರಿಗೆ ಇಲಾಖಾಧಿಕಾರಿಗಳು ದಾಳಿ ಮಾಡುತ್ತಿದ್ದುದ್ದರಿಂದ ಇವರ ಬಳಿ ಹೂಡಿಕೆ ಮಾಡಿದ್ದ ಹಣ ವಾಪಸ್ ಕೊಡುವಂತೆ ರಾಜಕಾರಣಿಗಳು, ಗಣ್ಯವ್ಯಕ್ತಿಗಳು,ಉನ್ನತ ಮಟ್ಟದ ಅಧಿಕಾರಿಗಳು ಒತ್ತಾಯಿಸುತ್ತಿದ್ದರೆಂಬ ಅನುಮಾನ ಈಗ ವ್ಯಕ್ತವಾಗಿದೆ.

ಒಂದು ವೇಳೆ ದಾಳಿ ಸಂದರ್ಭದಲ್ಲಿ ರಾಯ್ ಅವರು ತಮ್ಮ ಹೆಸರು ಎಲ್ಲಿ ಬಾಯ್ಬಿಡುತ್ತಾರೆಂಬ ಆತಂಕದಲ್ಲಿ ಹಣ ವಾಪಸ್ ಕೊಡುವಂತೆ ಅವರುಗಳೆಲ್ಲರೂ ಒತ್ತಾಯಿಸುತ್ತಿದ್ದಾರೆಂಬ ಕಾರಣಕ್ಕೆ ರಾಯ್ ಅವರು ಒತ್ತಡಕ್ಕೆ ಒಳಗಾಗಿದ್ದರೇ ಎಂಬ ಸಂಶಯ ಅಲ್ಲಗೆಳೆಯುವಂತಿಲ್ಲ. ಐಟಿ ಅಧಿಕಾರಿಗಳಲ್ಲದೇ ಕೇಂದ್ರ ತನಿಖಾ ಸಂಸ್ಥೆಗಳು ರಾಯ್‌ಅವರ ವ್ಯವಹಾರದತ್ತ ಕಣ್ಣಿಟ್ಟಿದ್ದವು.

ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ರಾಯ್ ಅವರು ಕಳೆದ ಆರು ತಿಂಗಳಿಂದ ಆರ್ಥಿಕ ಸಂಕಷ್ಟದಲ್ಲಿದ್ದರು ಎಂಬುವುದು ತನಿಖೆಯಿಂದ ಗೊತ್ತಾಗಿದೆ. ರಾಯ್ ಅವರು ಕರ್ನಾಟಕ, ಕೇರಳ ಅಲ್ಲದೇ ದುಬೈ ಸೇರಿದಂತೆ ವಿದೇಶಗಳಲ್ಲಿಯೂ ತಮ್ಮ ವ್ಯವಹಾರವನ್ನು ವಿಸ್ತರಿಸಿದ್ದರು. ರಾಯ್ ಅವರ ಹೊಸ ಯೋಜನೆಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸುಆಗದ ಪರಿಣಾಮ ಹಣಕಾಸು ನಿರ್ವಹಣೆಯಲ್ಲಿ ಅವರು ವಿಫಲರಾಗಿದ್ದರು ಎಂಬ ಮಾತು ಕೇಳಿ ಬಂದಿದೆ. ತಮ್ಮ ಜೀವನ ಶೈಲಿಯ ಅನುಗುಣಕ್ಕನುಸಾರವಾಗಿ ರಾಯ್ ಅವರು ಆದಾಯದ ಬಹುಪಾಲನ್ನು ಖರ್ಚು ಮಾಡುತ್ತಿದ್ದುದ್ದರಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದರು ಎಂಬುದು ಕಂಡು ಬಂದಿದೆ. ಒಂದೆಡೆ ಹಣ ಹೂಡಿದವರ ಒತ್ತಡ, ಮತ್ತೊಂದೆಡೆ ಆದಾಯ ತೆರಿಗೆ ಹಾಗೂ ಇತರೆ ಏಜೆನ್ಸಿಗಳ ಪ್ರಶ್ನೆಗಳಿಗೆ ಉತ್ತರ ನೀಡಲು ಸಾಧ್ಯವಾಗದೇ ರಾಯ್ ಅವರು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎನ್ನಲಾಗಿದೆ.

ಈ ಎಲ್ಲಾ ಒತ್ತಡಗಳು ಒಂದೇ ಬಾರಿಗೆ ರಾಯ್ ಅವರ ಜೀವನದಲ್ಲಿ ಆವರಿಸಿಕೊಂಡ ಪರಿಣಾಮ ಅದರಿಂದ ಹೊರ ಬರಲಾಗದೇ ಆತಹತ್ಯೆಯ ನಿರ್ಧಾರ ಮಾಡಿ ತಮ್ಮ ಪ್ರಾಣವನ್ನು ತ್ಯಜಿಸಿದರೇ ಎಂಬೆಲ್ಲಾ ಅಂಶಗಳು ವ್ಯಕ್ತವಾಗುತ್ತಿವೆ. ರಾಯ್ ಅವರು ಮೇಲ್ನೋಟಕ್ಕೆ ಆರ್ಥಿಕ ಸಂಕಷ್ಟದಿಂದ ಆತಹತ್ಯೆ ಮಾಡಿಕೊಂಡಿದ್ದಾರೆಂಬುವುದು ಕಂಡು ಬಂದಿದ್ದು, ಒಟ್ಟಾರೆ ರಾಯ್ ಅವರ ಆತಹತ್ಯೆಗೆ ನಿಖರ ಕಾರಣವೇನೆಂಬುವುದರ ಬಗ್ಗೆ ಎಸ್‌ಐಟಿ ಪೊಲೀಸರು ವಿವಿಧ ದೃಷ್ಟಿಕೋನಗಳಲ್ಲಿ ತನಿಖೆ ಮುಂದುವರೆಸಿದ್ದಾರೆ. ತನಿಖೆ ನಂತರವಷ್ಟೇ ನಿಖರ ಕಾರಣ ತಿಳಿದು ಬರಲಿದೆ.

## ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ವೇಳಾಪಟ್ಟಿ ಪ್ರಕಟ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ನಿರ್ಧರಿಸುವ ಪ್ರಮುಖ ಘಟ್ಟವಾದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಅಧಿಕೃತವಾಗಿ ಪ್ರಕಟಿಸಿದೆ. ಈ ಬಾರಿಯ ಪರೀಕ್ಷೆಗಳು ಮಾರ್ಚ್ 5ರಿಂದ ಆರಂಭಗೊಂಡು ಮಾರ್ಚ್ 30ರವರೆಗೆ ನಡೆಯಲಿದ್ದು, ಮೇ 8ರಂದು ಫಲಿತಾಂಶ ಪ್ರಕಟವಾಗಲಿದೆ ಎಂದು ಮಂಡಳಿ ತಿಳಿಸಿದೆ.

ಪ್ರತೀ ವರ್ಷದಂತೆ ಈ ಬಾರಿಯೂ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು, ಸುಗಮವಾಗಿ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಪರೀಕ್ಷಾ ದಿನಾಂಕ, ಫಲಿತಾಂಶದ ದಿನಾಂಕವನ್ನು ಸಾಕಷ್ಟು ಮುಂಚಿತವಾಗಿಯೇ ಪ್ರಕಟಿಸಿರುವುದು ವಿದ್ಯಾರ್ಥಿಗಳಿಗೆ, ಪೋಷಕರಿಗೆ ನಿರಾಳತೆ ತಂದಿದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ಓದಿನ ಕಡೆಗೆ ಹೆಚ್ಚಿನ ಗಮನ ಹರಿಸಲು, ಪರೀಕ್ಷೆಗೆ ಮಾನಸಿಕವಾಗಿ ಸಿದ್ಧರಾಗಲು ಸಹಕಾರಿಯಾಗಲಿದೆ.



**ಪರೀಕ್ಷಾ ವೇಳಾಪಟ್ಟಿ ವಿವರ :** ಮಾರ್ಚ್ 5ರಂದು ಪ್ರಥಮ ಭಾಷಾ ವಿಷಯಗಳೊಂದಿಗೆ ಪರೀಕ್ಷೆ ಆರಂಭವಾಗಲಿದ್ದು, ಮಾರ್ಚ್ 30ರಂದು ತೃತೀಯ ಭಾಷಾ ವಿಷಯಗಳೊಂದಿಗೆ ಮುಕ್ತಾಯಗೊಳ್ಳಲಿದೆ. ರಾಜ್ಯಾದ್ಯಂತ ಸುಮಾರು 8.5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಗೆ ಹಾಜರಾಗುವ ನಿರೀಕ್ಷೆಯಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಕಡ್ಡಾಯಗೊಳಿಸಲಾಗಿದ್ದು, ಪರೀಕ್ಷಾ ಅಕ್ರಮಗಳಿಗೆ ಕಡಿವಾಣ ಹಾಕಲು ಹದ್ದಿನ ಕಣ್ಣಿಡಲಾಗುವುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

## ಎಚ್‌ಡಿಕೆ ಮೊದಲ ಬಾರಿಗೆ ಸಿಎಂ ಆಗಿ ಇಂದಿಗೆ 20 ವರ್ಷ

• ಉದಯವಾಹಿನಿ, ಬೆಂಗಳೂರು

ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಮೊದಲ ಬಾರಿ ಮುಖ್ಯಮಂತ್ರಿಯಾಗಿ ಇಂದಿಗೆ 20 ವರ್ಷ ಪೂರ್ಣಗೊಂಡಿದೆ. ಕಳೆದ 2006ರ ಫೆ.4 ರಂದು ಕುಮಾರಸ್ವಾಮಿಯವರು ಮೊದಲ ಬಾರಿಗೆ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ್ದರು. ಬಿಜೆಪಿ, ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ 20 ತಿಂಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು. ಉಭಯ ಪಕ್ಷಗಳ ನಡುವಿನ ಭಿನ್ನಾಭಿಪ್ರಾಯದಿಂದಾಗಿ 2007 ರ ಅ.9 ರಂದು ಅವರು ಮುಖ್ಯಮಂತ್ರಿ ಸ್ಥಾನ ತ್ಯಜಿಸಿದ್ದರು. ಈ ಅವಧಿಯಲ್ಲಿ ಜನತಾದರ್ಶನ, ಗ್ರಾಮವಾಸ್ತವ್ಯ ಸೇರಿದಂತೆ ಹಲವು ಜನಪ್ರಿಯ ಕಾರ್ಯಕ್ರಮಗಳ ಮೂಲಕ ಜನಪ್ರಿಯ ಮುಖ್ಯಮಂತ್ರಿ ಹಾಗೂ ಉತ್ತಮ ಆಡಳಿತಗಾರ ಎನಿಸಿಕೊಂಡಿದ್ದರು. 2ನೇ ಬಾರಿಗೆ 2018ರ ಮೇ 23 ರಂದು ಕುಮಾರಸ್ವಾಮಿ ಮುಖ್ಯಮಂತ್ರಿಯಾದರು. 2018ರಲ್ಲಿ ಅತಂತ್ರ ವಿಧಾನಸಭೆ ನಿರ್ಮಾಣವಾಗಿದ್ದ ಕಾರಣ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿಸರ್ಕಾರ ಅಸ್ತಿತ್ವಕ್ಕೆ ಬಂದಿತು. 14 ತಿಂಗಳ ಕಾಲ 2ನೇ ಬಾರಿ ಸಿಎಂ ಆಗಿ ರೈತರ ಸಾಲಮನ್ನಾ ಸೇರಿದಂತೆ ಕೆಲವು ಜನಪ್ರಿಯ ಕಾರ್ಯಕ್ರಮಗಳನ್ನು ನೀಡಿದ್ದರು.

ಆಪರೇಷನ್ ಕಮಲದ ಪರಿಣಾಮದಿಂದ ಆಡಳಿತ ಪಕ್ಷಗಳ ಶಾಸಕರು ರಾಜೀನಾಮೆ ನೀಡಿದ್ದರಿಂದ ಮೈತ್ರಿ ಸರ್ಕಾರ ಪತನವಾಗಬೇಕಾಯಿತು. 2019ರ ಜು.23 ರಂದು ಕುಮಾರಸ್ವಾಮಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 2023ರ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಿಂದ ಅವರು ಚುನಾಯಿತರಾಗಿದ್ದರು. 2024 ರ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದಿಂದ ಚುನಾಯಿತರಾಗಿ 2ನೇ ಬಾರಿಗೆ ಸಂಸದರಾದರು. ಇದಕ್ಕೂ ಮೊದಲು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ಹಾಗೂ ಕನಕಪುರ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಜೆಡಿಎಸ್‌ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಕುಮಾರಸ್ವಾಮಿಯವರನ್ನು ಅಭಿನಂದಿಸುತ್ತಿದ್ದಾರೆ.



**ಕುಮಾರಸ್ವಾಮಿ ಪ್ರತಿಕ್ರಿಯೆ :** ನಾನು ಆಕಸ್ಮಿಕವಾಗಿ ಸಿಎಂ ಆದವನು. ನನಗೆ ಎರಡು ಬಾರಿಯೂ ಪೂರ್ಣ ಪ್ರಮಾಣದ ಸರ್ಕಾರ ಮಾಡಲು ಜನ ಬೆಂಬಲ ಸಿಗಲಿಲ್ಲ. ಆದರೆ ಜನರ ಅಭಿಮಾನ, ಹಾರೈಕೆ ಇತ್ತು. ಅಲ್ಲದೆ, ಭಗವಂತನ ಕೃಪೆಯಿಂದ ಇದೆಲ್ಲಾ ಸಾಧ್ಯವಾಯಿತು ಎಂದು ಭಾವಿಸಿದ್ದೇನೆ. ಸಿಕ್ಕಿದ ಸಣ್ಣ ಅವಕಾಶದಲ್ಲಿಯೇ ನಾನು ಜನಸೇವೆ ಮಾಡಲು ಶ್ರಮಿಸಿದ್ದೇನೆ.

ಗ್ರಾಮ ವಾಸ್ತವ್ಯ, ಜನತಾ ದರ್ಶನ, ಶಾಲೆ ಕಾಲೇಜುಗಳ ನಿರ್ಮಾಣ, ಇಂಧನ ಇಲಾಖೆಯಲ್ಲಿ ಸುಧಾರಣೆ, ಬೆಂಗಳೂರು ಅಭಿವೃದ್ಧಿಗೆ ಕ್ರಮ ವಹಿಸಿ ಮೊದಲ ಹಂತದ ಮೆಟ್ರೋ ಯೋಜನೆಗೆ ಚಾಲನೆ, ಮೊದಲ ಅವಧಿಯಲ್ಲಿಯೂ ಸುಮಾರು 2500 ಕೋಟಿ ರೂಪಾಯಿ ರೈತ ಸಾಲ ಮನ್ನಾ ಸೇರಿ ಅನೇಕ ಜನಪರ ಕೆಲಸಗಳನ್ನು ಮಾಡಿದ್ದೇನೆ ಎಂದು ಪ್ರತಿಕ್ರಿಯಿಸಿದ್ದಾರೆ.

### ವಲಯ ವರ್ಗೀಕರಣ ನಿಯಮ ಪಾಲಿಸದ ಉದ್ದಿಮೆಗಳ ಪರವಾನಗಿ ನವೀಕರಣಕ್ಕೆ ತಡೆ

# ಉದ್ದಿಮೆ ಪರವಾನಗಿಗಳ ನವೀಕರಣಕ್ಕೆ ಅವಕಾಶ


• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ದಂಡ ರಹಿತವಾಗಿ ಫೆ.1 ರಿಂದ ಫೆ. 28 ರವರೆಗೆ 2026-27 ನೇ ಸಾಲಿನ ಉದ್ದಿಮೆ ಪರವಾನಗಿ ನವೀಕರಣಕ್ಕೆ ಅವಕಾಶ ಕಲ್ಪಿಸಿ ಸುತ್ತೋಲೆ ಹೊರಡಿಸಲಾಗಿದೆ. ಉದ್ದಿಮೆದಾರರ ಅನುಕೂಲಕ್ಕೆ ತಕ್ಕಂತೆ 1 ರಿಂದ 5 ವರ್ಷಗಳ ಅವಧಿಗೆ ನವೀಕರಣ ಮಾಡಿಕೊಡಬೇಕು. ನವೀಕರಣ ಶುಲ್ಕವನ್ನು ಉದ್ದಿಮೆದಾರರು ಕೋರುವ ಆರ್ಥಿಕ ವರ್ಷಕ್ಕೆ ಮಿತಿಗೊಳಿಸಿ ಪಾವತಿಸಿಕೊಳ್ಳಬೇಕು. ಆನ್‌ಲೈನ್, ಬ್ಯಾಂಕ್ ಚಲನ್ ಮೂಲಕ ಕೆನರಾ ಬ್ಯಾಂಕ್‌ನಲ್ಲಿ ಪಾವತಿಸಿ ಕೊಳ್ಳಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಸೂಚಿಸಿದ್ದಾರೆ.

**ವಲಯ ವರ್ಗೀಕರಣ ನಿಯಮದಂತೆ ನವೀಕರಣ** ಮಾ.1 ರಿಂದ 31 ರವರೆಗೆ ಶೇ. 25 ರಷ್ಟು ದಂಡ ಶುಲ್ಕದೊಂದಿಗೆ ಪರವಾನಗಿ ನವೀಕರಿಸಬೇಕು. ಏ.1 ರ ನಂತರ ಶೇ. 100 ರಷ್ಟು ದಂಡ ಶುಲ್ಕ ವಿಧಿಸಬೇಕು.

ವಸತಿ ಪ್ರದೇಶಗಳಲ್ಲಿ 40 ಅಡಿ ಅಗಲಕ್ಕಿಂತ ಕಡಿಮೆ ವಿಸ್ತೀರ್ಣದ ರಸ್ತೆಗಳಲ್ಲಿ 2015ರ ನಂತರ ಪ್ರಾರಂಭವಾಗಿರುವ ಉದ್ದಿಮೆಗಳ ಪರವಾನಗಿ ತಡೆಹಿಡಿದು, ಹಿಂಬರಹದೊಂದಿಗೆ ತಿರಸ್ಕರಿಸಬೇಕು ಎಂದು ಆದೇಶಿಸಿದ್ದಾರೆ. ವಸತಿ ಪ್ರದೇಶಗಳಲ್ಲಿ 40 ಅಡಿ ಅಗಲಕ್ಕಿಂತ ಹೆಚ್ಚು ವಿಸ್ತೀರ್ಣವಿರುವ ರಸ್ತೆಗಳಲ್ಲಿ 2015ರ ನಂತರ ಪ್ರಾರಂಭವಾಗಿರುವ ಉದ್ದಿಮೆಗಳು, ನಿಗದಿತ ಉದ್ದಿಮೆಗಳ ಪರವಾನಗಿ ನವೀಕರಿಸಬೇಕು. ಉಳಿದ ಉದ್ದಿಮೆಗಳ ಪರವಾನಗಿ ನವೀಕರಣವನ್ನು ತಡೆಹಿಡಿದು ತಿರಸ್ಕರಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಹಾಗೆಯೇ, ನಕ್ಷೆ ಮಂಜೂರಾತಿ ಉಲ್ಲಂಘಿಸಿ ನಿರ್ಮಿಸಿರುವ ಕಟ್ಟಡಗಳಲ್ಲಿ ಪೂರ್ಣ, ಭಾಗಶಃ ಭಾಗದಲ್ಲಿ ಉದ್ದಿಮೆ ನಡೆಸುತ್ತಿರುವ ದೂರುಗಳಿದ್ದರೆ, ವಾಹನ ನಿಲುಗಡೆ ಪ್ರದೇಶ ಅಥವಾ ರೂಫ್ ಟಾಪ್‌ಗಳಲ್ಲಿ ಉದ್ದಿಮೆ ನಡೆಸುತ್ತಿದ್ದರೆ ಪರವಾನಗಿ ನವೀಕರಣ ತಡೆಹಿಡಿದು, ಹಿಂಬರಹದೊಂದಿಗೆ ತಿರಸ್ಕರಿಸಬೇಕು ಎಂದು ಸೂಚನೆ ನೀಡಲಾಗಿದೆ.



### ಏಪ್ರಿಲ್ 1 ರಿಂದ ಶೇ. 100 ದಂಡ

**ಬೆಂಗಳೂರಿನ 5 ನಗರ ಪಾಲಿಕೆ ವ್ಯಾಪ್ತಿಯಲ್ಲಿ ಫೆಬ್ರವರಿ 1 ರಿಂದ 28ರವರೆಗೆ ದಂಡ ರಹಿತವಾಗಿ 2026-27ನೇ ಸಾಲಿನ ಉದ್ದಿಮೆ ಪರವಾನಗಿ ನವೀಕರಣಕ್ಕೆ ಅವಕಾಶ ನೀಡಲಾಗಿದೆ. ಉದ್ದಿಮೆದಾರರು 1 ರಿಂದ 5 ವರ್ಷಗಳವರೆಗೆ ನವೀಕರಿಸಬಹುದು. ಮಾರ್ಚ್ 1 ರಿಂದ 31 ರವರೆಗೆ ಶೇ. 25 ದಂಡ, ಏಪ್ರಿಲ್ 1 ರಿಂದ ಶೇ. 100 ದಂಡ ವಿಧಿಸಲಾಗುವುದು.**

### ಪರವಾನಗಿ ನವೀಕರಣಕ್ಕೆ ವಿಧಿಸಿರುವ ಇತರೆ ಷರತ್ತುಗಳು

- **100 ಕೆ.ಜಿ.ಗಿಂತ ಹೆಚ್ಚು ತ್ಯಾಜ್ಯ ಉತ್ಪತ್ತಿ ಮಾಡುತ್ತಿರುವ ಉದ್ದಿಮೆಗಳಿಂದ ಮೂಲ ಸ್ಥಳದಲ್ಲಿ ಸಂಸ್ಕರಣೆ ಮತ್ತು ವಿಲೇವಾರಿ ಮಾಡುತ್ತಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆಯಬೇಕು. ಎಂಪ್ಯಾನಲ್ಡ್ ವೆಂಡರ್‌ಗಳಿಗೆ ಕಸ ನೀಡುತ್ತಿದ್ದರೆ, ಆ ಸಂಬಂಧ ಮಾಡಿಕೊಂಡಿರುವ ಒಡಂಬಡಿಕೆ ಪ್ರತಿ ಸಲ್ಲಿಸಬೇಕು.**
- **ಕಲ್ಯಾಣ ಮಂಟಪಗಳು ನಿಯಮ ಪಾಲಿಸುತ್ತಿರುವ ಕುರಿತು ಮಾಲೀಕರು ಹೇಳಿಕೆ ನೀಡಬೇಕು. ಅಲ್ಲದೆ, ಕಚೇರಿ ಆದೇಶವನ್ನು ಪ್ರದರ್ಶಿಸಿರುವ ಛಾಯಾಚಿತ್ರವನ್ನು ಸಲ್ಲಿಸಬೇಕು.**
- **ಹೋಟೆಲ್, ರೆಸ್ಟೋರೆಂಟ್ ಮತ್ತು ಆಹಾರ ಸರಬರಾಜು ಮಾಡುವ ಉದ್ದಿಮೆಗಳು ಕಡ್ಡಾಯವಾಗಿ ಪ್ಲಾಸ್ಟಿಕ್ ನಿಷೇಧ ನಿಯಮ ಪಾಲಿಸುವ ಕುರಿತು ಲಿಖಿತ ಹೇಳಿಕೆ ನೀಡಬೇಕು.**
- **ಉದ್ದಿಮೆ ಸ್ಥಳಗಳಲ್ಲಿ ಪ್ಲಾಸ್ಟಿಕ್ ನಿಷೇಧದ ಬಗ್ಗೆ, ಒಮ್ಮೆ ಬಳಸಿ ಬಿಸಾಡುವ ಸಾಮಗ್ರಿಗಳನ್ನು ಉಪಯೋಗಿಸದಂತೆ ಭಿತ್ತಿ ಪತ್ರಗಳನ್ನು ಪ್ರದರ್ಶಿಸಬೇಕು.**
- **ಉದ್ದಿಮೆ ಸ್ಥಳಗಳಲ್ಲಿ ಹಸಿ ಕಸಕ್ಕೆ, ಒಣ ಕಸಕ್ಕೆ, ಪ್ರತ್ಯೇಕ ಕಸದ ಬುಟ್ಟಿಗಳನ್ನು ಇಟ್ಟುಕೊಂಡು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು.**

# ಸವಿತಾ ಮಹರ್ಷಿ ಜಯಂತಿಗೆ ಅಧಿಕಾರಿಗಳ ಗೈರು : ಮುಖಂಡರ ಆಕ್ರೋಶ

• ಉದಯವಾಹಿನಿ, ಗುಂಡ್ಲುಪೇಟೆ :

ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮಕ್ಕೆ ವಿವಿಧ ಇಲಾಖೆಗಳ ಅಧಿಕಾರಿಗಳು ಗೈರಾಗಿದ್ದನ್ನ ಖಂಡಿಸಿದ ಸಮುದಾಯದ ಮುಖಂಡರು ಜಯಂತಿಯನ್ನ ಬಹಿಷ್ಕರಿಸಿ ಹೊರನಡೆದ ಘಟನೆ ನಡೆಯಿತು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಮಂಗಳವಾರ ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ಗುಂಡ್ಲುಪೇಟೆ ವತಿಯಿಂದ ಸವಿತಾ ಮಹರ್ಷಿ ಜಯಂತಿ ಆಚರಣ ಸಮಾರಂಭಕ್ಕೆ ಇಲಾಖೆ ಅಧಿಕಾರಿಗಳು ಗೈರು ಹಾಜರಾಗುವ ಮೂಲಕ ದ್ವಂದ್ವ ನೀತಿ ಅನುಸರಿಸಿದ್ದಾರೆ ಎಂದು ಮುಖಂಡರು ಆರೋಪಿಸಿದ್ದು ಮಹನೀಯರ ಜಯಂತಿ ಆಚರಣೆ ಸಂದರ್ಭಗಳಲ್ಲಿ ಹಾಜರಿರುವ ಅಧಿಕಾರಿಗಳು ಸವಿತಾ ಮಹರ್ಷಿ ಜಯಂತಿ ಆಚರಣೆಗೆ ಹಾಜರಾಗದೆ ಅಸಡ್ಡೆತನ ತೋರಿದ್ದಾರೆ ಎಂದು ಆರೋಪಿಸಿ ಸಭಾಂಗಣದಿಂದ ಹೊರನಡೆದರು. ಕಳೆದ ವರ್ಷವೂ ಸಹ ಸವಿತಾ ಸಮಾಜವನ್ನ ಕೇವಲವಾಗಿ ಕಂಡಿದ್ದ ಅಧಿಕಾರಿವರ್ಗ ಈ ಬಾರಿಯೂ ಸಹ ಅದೇ ನಡತೆಯನ್ನ ತೋರಿರುವುದು ಅಕ್ಷಮ್ಯ ಎಂದು ಧಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ಹೊರಹಾಕಿದರು. ಈ ವೇಳೆ ಮಾತನಾಡಿದ ಸವಿತಾ ಸಮಾಜ ತಾಲ್ಲೂಕು ಪ್ರದಾನ ಕಾರ್ಯದರ್ಶಿ ಪರಶಿವಮೂರ್ತಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಸಮುದಾಯ 7 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯನ್ನ ಹೊಂದಿದೆ ಹೀಗಿದ್ದರೂ ಸಹ ನಮ್ಮನ್ನ ಕಡೆಗಣಿಸುತ್ತಿರುವುದು ಖಂಡನೀಯ, ಜಯಂತಿಗೆ ಇಓ ಅವರನ್ನ ಹೊರತುಪಡಿಸಿ ಯಾವೊಬ್ಬ ಅಧಿಕಾರಿಗಳು ಹಾಜರಾಗದೆ ನಿಷ್ಟುರತನ ತೋರಿದ್ದಾರೆ ಎಂದು ದೂರಿದರು.


ಉದಯವಾಹಿನಿ ಚಿತ್ರ

ನಮ್ಮ ಸಮುದಾಯದ ಕುರಿತು ಅಧಿಕಾರಿ ವೃಂದ ತಾತ್ಸಾರ ಮನೋಭಾವನೆ ಹೊಂದಿರುವುದು ಸರಿಯಲ್ಲ ಶೀಘ್ರದಲ್ಲೇ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಮಕ್ಷಮದಲ್ಲಿ ಸವಿತಾ ಮಹರ್ಷಿ ಜಯಂತಿಯನ್ನ ಆಚರಣೆ ಮಾಡಬೇಕು ಎಂದು ಆಗ್ರಹಿಸಿದರು. ಈ ಸಂಧರ್ಭದಲ್ಲಿ ಸಮಾಜದ ತಾಲ್ಲೂಕು ಅಧ್ಯಕ್ಷ ವಿಠ್ಠಲ, ಉಪಾಧ್ಯಕ್ಷ ಹಂಗಳ ರಾಜು, ಸಿದ್ದಪ್ಪ, ಮೂರ್ತಿ, ಕೃಷ್ಣಪ್ಪ, ಸುರೇಶ್, ಗಣೇಶ್, ರಾಚ ಸೇರಿದಂತೆ ಹಲವರು ಹಾಜರಿದ್ದರು.

# ಸಾರ್ವಜನಿಕರ ಸಮಸ್ಯೆ ಆಲಿಸದ ತಹಶೀಲ್ದಾರ್ : ನಾಗೇಂದ್ರ ಆರೋಪ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕು ದಂಡಾಧಿಕಾರಿ ಕೊಠಡಿ ಬಾಗಿಲು ಸದಾ ಕಾಲ ಮುಚ್ಚಿದ್ದು, ತಹಶೀಲ್ದಾರ್ ತನ್ಮಯ್ ಎಂ.ಎಸ್. ಸಾರ್ವಜನಿಕರ ಸಂಪರ್ಕಕ್ಕೆ ಸಿಗುತ್ತಿಲ್ಲ. ಇದರಿಂದ ಸಮಸ್ಯೆಗಳನ್ನೊತ್ತು ಬರುವ ಜನರು ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಸಮಿತಿ ರಾಜ್ಯ ಕಾರ್ಯಾಧ್ಯಕ್ಷ ನಾಗೇಂದ್ರ ಆರೋಪಿಸಿದ್ದಾರೆ.

ಗುಂಡ್ಲುಪೇಟೆ ತಹಶೀಲ್ದಾರ್ ತನ್ಮಯ್ ಎಂ.ಎಸ್.ಅಧಿಕಾರ ವಹಿಸಿಕೊಂಡು ಆರು ತಿಂಗಳು ಕಳೆದಿದೆ ಹೀಗಿದ್ದರೂ ಸಹ ಇವರು ಸಾರ್ವಜನಿಕರ ಸಂಪರ್ಕಕ್ಕೆ ಸರಿಯಾಗಿ ಸಿಗುತ್ತಿಲ್ಲ. ಕೆಲಸದ ಸಮಯದಲ್ಲಿ ಕಚೇರಿಗೆ ಬಾರದೆ ಸಭೆ, ಸಮಾರಂಭಗಳ ಕಾರಣ ಹೇಳಿ ಬಹುತೇಕ ಸಮಯವನ್ನು ಹೊರಗೆ ಕಳೆಯುತ್ತಿದ್ದಾರೆ. ಇದರಿಂದ ಯಾವ ವೇಳೆಗೆ ಬಂದರೂ ಸಹ ತಹಶೀಲ್ದಾರ್ ಕೊಠಡಿ ಬಾಗಿಲು ಮುಚ್ಚಿರುತ್ತದೆ ಹೀಗಿದ್ದಲ್ಲಿ ನಾವು ಯಾರ ಬಳಿ ಸಮಸ್ಯೆ ಹೇಳುವುದು ಎಂದು ದೂರಿದ್ದಾರೆ. ತಾಲ್ಲೂಕು ಕಚೇರಿಯ ವಿವಿಧ ಇಲಾಖೆಗಳಲ್ಲಿ ಸಾರ್ವಜನಿಕರ ಕೆಲಸಗಳು ನಿಗಧಿತ ವೇಳೆಗೆ ಆಗುತ್ತಿಲ್ಲ, ಅಧಿಕಾರಿಗಳು ಸಾರ್ವಜನಿಕರನ್ನ ಪ್ರತಿನಿತ್ಯ ಅಲೆಸುತ್ತಿದ್ದಾರೆ. ಕೆಲ ಅಧಿಕಾರಿಗಳು ಕೆಲಸ ಮಾಡಲು ಹಿಂದೇಟು ಹಾಕುತ್ತಿದ್ದಾರೆ ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿದೆ, ಈ ಬಗ್ಗೆ ದೂರು ನೀಡಲು ಹೋದರೆ ತಹಶೀಲ್ದಾರ್ ನಮ್ಮ ಕೈಗೆ ಸಿಗುತ್ತಿಲ್ಲ, ಆದ್ದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಇತ್ತ ಗಮನ ಹರಿಸಬೇಕೆಂದು ಒತ್ತಾಯಿಸಿದ್ದಾರೆ.

# ಚಿನ್ನ ನಿಕ್ಷೇಪಕ್ಕಾಗಿ ಚಿಕ್ಕಬಳ್ಳಾಪುರದಲ್ಲಿ ಹುಡುಕಾಟ

## ಗುಡಿಬಂಡೆಯಲ್ಲಿ ಹೆಲಿಕಾಪ್ಟರ್ ಮೂಲಕ ಏರಿಯಲ್ ಸರ್ವೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಈಗ ಎಲ್ಲೆಲ್ಲೂ ಚಿನ್ನ-ಬೆಳ್ಳಿಯದ್ದೇ ಅಬ್ಬರ. ಚಿನ್ನದ ಬೆಲೆ ಗಗನಕ್ಕೆ ಏರುತ್ತಾ ಇದ್ದಂತೆ ಜನಸಾಮಾನ್ಯರು ಕಂಗಾಲಾಗುತ್ತಿದ್ದಾರೆ. ಆದ್ರೆ, ಈ ನಡುವೆ ಬಂದಿರುವ ಸಿಹಿಸುದ್ದಿ ಒಂದು ಇಲ್ಲಿದೆ. ಚಿಕ್ಕಬಳ್ಳಾಪುರದ ಗುಡಿಬಂಡೆ ತಾಲ್ಲೂಕಿನ ಬೀಚಗಾನಹಳ್ಳಿ ಕ್ರಾಸ್ ಬಳಿ ಚಿನ್ನದ ನಿಕ್ಷೇಪ ಇರುವ ಬಗ್ಗೆ ಸರ್ವೇ ವರದಿ ಇರುವುದರಿಂದ ಆ ಜಾಗದಲ್ಲಿ ಏರಿಯಲ್ ಸರ್ವೇ ನಡೆಸಲಾಗುತ್ತಿದೆ. ವೈಜ್ಞಾನಿಕವಾಗಿ ಸಲಕರಣೆಗಳನ್ನು ಬಳಸಿ, ಹೆಲಿಕಾಪ್ಟರ್ ಮೂಲಕ ಪತ್ತೆಹಚ್ಚಲಾಗುತ್ತಿದೆ. ಗುಡಿಬಂಡೆ ತಾಲ್ಲೂಕಿನ ಆದರ್ಶ ಶಾಲೆ ಇರುವ ಸರಕಾರಿ ಜಾಗದಲ್ಲಿ ಹೆಲಿಕಾಪ್ಟರ್ ಲ್ಯಾಂಡಿಂಗ್, ಹಾರಾಟಕ್ಕೆ ಅವಕಾಶ ಮಾಡಲಾಗಿದೆ.

**ಚಿನ್ನದ ನಿಕ್ಷೇಪಗಳ ಅನ್ವೇಷಣೆ**

ಚಿಕ್ಕಬಳ್ಳಾಪುರ ಜಿಲ್ಲೆಯ ಹಲವು ಸ್ಥಳಗಳು, ಪಕ್ಕದಲ್ಲೇ ತುಮಕೂರು ಜಿಲ್ಲೆಯ ಮದುಗಿರಿ ಬೆಟ್ಟ ಸ್ಥಳಗಳಲ್ಲೂ ಪ್ರತೀದಿನ ಏರಿಯಾ ಸರ್ವೇ ನಡೆಸಲಾಗುತ್ತಿದೆ. ಬೆಳಗ್ಗೆ 8 ರಿಂದ 3 ಗಂಟೆ ಹಾಗೂ ಮಧ್ಯಾಹ್ನದ ಬಳಿಕ, ಒಟ್ಟು 2 ಬಾರಿ ಹಾರಾಟ ನಡೆಸಿ ಏರಿಯಲ್ ಸರ್ವೇ ನಡೆಯುತ್ತಿದೆ.

ಇದು ಸ್ವಾಭಾವಿಕವಾಗಿ ಆರಂಭಿಕ ಹಂತದ ಸರ್ವೇ ಆಗಿದೆ. ಕೆಜಿಎಫ್ ಚಿನ್ನದ ಗಣಿ ಇದ್ದ ಸ್ಥಳದ ಹತ್ತಿರದ ಸ್ಥಳಗಳು ಆಗಿರುವುದರಿಂದ ಲೋಹಗಳು, ಚಿನ್ನದ ನಿಕ್ಷೇಪಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಇದು ಪ್ರಾಥಮಿಕವಾಗಿ ಕಳೆದ 3 ತಿಂಗಳಿಂದ ನಡೆಯುತ್ತಿದ್ದು ಇನ್ನೂ 1 ತಿಂಗಳ ಕಾಲ ಈ ಸರ್ವೇ ನಡೆಯಲಿದೆ ಎಂಬುದು ಗೊತ್ತಾಗಿದೆ. ಸ್ಥಳೀಯ ಜನರಲ್ಲಿ ಕುತೂಹಲ ಹೆಚ್ಚಾಗಿದ್ದು, ನಮ್ಮ ಸ್ಥಳಗಳಲ್ಲೂ ಚಿನ್ನ ಇರಬಹುದು ಎಂಬುದು ಕುತೂಹಲ ಹೆಚ್ಚಿದೆ.

ಈ ಹಿಂದೆಯೂ 2024-25 ನೇ ಸಾಲಿನ ಖನಿಜಾನ್ವೇಷಣೆ ನಡೆಸಲು ಅನುಮೋದನೆಗೊಂಡಿದ್ದ ಪಟ್ಟಿಯಲ್ಲಿ ಹಾಸನ, ಕೊಪ್ಪಳ, ಹಾವೇರಿ, ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ, ಮಂಡ್ಯ ಸೇರಿತ್ತು. ಸದ್ಯ ರಾಜ್ಯದ ರಾಯಚೂರಿನ ಹಟ್ಟಿ ಚಿನ್ನದ ಗಣಿಯಲ್ಲಿ ಮಾತ್ರ ಬಂಗಾರ ಉತ್ಪಾದನೆ ಆಗುತ್ತಿದ್ದು, ಮತ್ತಷ್ಟು ಚಿನ್ನದ ನಿಕ್ಷೇಪಗಳ ಹುಡುಕಾಟ ಮುಂದುವರಿದಿದೆ. ಎಲ್ಲಾ ಮುಖ್ಯ ಖನಿಜ ಗಣಿ ಗುತ್ತಿಗೆದಾರರು ರಾಜಧನದ ಶೇ 2 ರಷ್ಟು ಮೊತ್ತವನ್ನು ಕೇಂದ್ರ ಸರ್ಕಾರ ರಚಿಸಿರುವ ರಾಷ್ಟ್ರೀಯ ಖನಿಜ ಅನ್ವೇಷಣಾ ದತ್ತಿಗೆ ಪಾವತಿಸಬೇಕಾಗುತ್ತದೆ.

ಈ ಮೊತ್ತವನ್ನು ಭಾರತ ಸರ್ಕಾರ ನಿರ್ವಹಿಸಲಿದೆ. ಈ ನಿಧಿ ಬಳಸಿಯೇ ಆಯಾ ರಾಜ್ಯಗಳ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳ ಸಮ್ಮತಿಯೊಂದಿಗೆ ಚಿನ್ನದ ನಿಕ್ಷೇಪಗಳ ಅನ್ವೇಷಣೆ ಕೈಗೊಳ್ಳಲಾಗುತ್ತದೆ.



### ಭೂಮಿ ಬೆಲೆಯೂ ಏರಿಕೆಯಾಗುವ ನಿರೀಕ್ಷೆ

**ಚಿಕ್ಕಬಳ್ಳಾಪುರದ ಗುಡಿಬಂಡೆ ತಾಲ್ಲೂಕಿನಲ್ಲಿ ಚಿನ್ನದ ನಿಕ್ಷೇಪಗಳಿಗಾಗಿ ಹೆಲಿಕಾಪ್ಟರ್ ಮೂಲಕ ಏರಿಯಲ್ ಸರ್ವೇ ನಡೆಸಲಾಗುತ್ತಿದೆ. ಸ್ಥಳಿಯ ಜನರು ಕುತೂಹಲದಿಂದ ಸರ್ವೇ ಗಮನಿಸುತ್ತಿದ್ದು, ಒಂದು ವೇಳೆ ನಿಕ್ಷೇಪ ಪತ್ತೆಯಾದರೆ ಭೂಮಿ ಬೆಲೆಯೂ ಏರಿಕೆಯಾಗುವ ನಿರೀಕ್ಷೆಗಳಿವೆ.**

### ಕೆಜಿಎಫ್, ಆಂಧ್ರದ ಕದಿರಿ ಸುತ್ತ ಸರ್ವೆ

**ಕರ್ನಾಟಕದಲ್ಲಿ ಕೋಲಾರದ ಚಿನ್ನದ ಗಣಿ ಮುಚ್ಚಲ್ಪಟ್ಟಿದ್ದು, ಇದರ ಪುನರಾರಂಭಕ್ಕೂ ಕೇಂದ್ರ ಸರಕಾರ ಚಿಂತನೆ ನಡೆಸುತ್ತಿದೆ. ಇನ್ನೊಂದೆಡೆ ಆಂಧ್ರಪ್ರದೇಶದ ಗಡಿಭಾಗವಾದ ಕದರಿಯಲ್ಲಿ ಈಗಾಗಲೇ 1 ಟನ್ ಮಣ್ಣಿನಲ್ಲಿ 4 ಗ್ರಾಂ ಚಿನ್ನ ಲಭ್ಯ ಆಗುವ ಮಾಹಿತಿ ಹೆಲಿಕಾಪ್ಟರ್ ಸರ್ವೇಯಲ್ಲಿ ಲಭ್ಯವಾಗಿದೆ. ಹೀಗಾಗಿ ಆಂದ್ರಪ್ರದೇಶದ ಗಡಿ ಪ್ರದೇಶಕ್ಕೆ ಹೊಂದಿಕೊಂಡಿರುವ ಗುಡಿಬಂಡೆ ತಾಲ್ಲೂಕಲ್ಲಿ ಹುಡುಕಾಟ ಆರಂಭವಾಗಿದೆ. ಚಿನ್ನ ಖನಿಜ ಇದ್ದಿದ್ದೆ ಆದಲ್ಲಿ ಅದರ ಆಳ, ಗಾತ್ರ ಹಾಗೂ ವ್ಯಾಪ್ತಿಯನ್ನು ಅಂದಾಜಿಸುವ ಉದ್ದೇಶದಿಂದ ಇಲ್ಲಿ ಸಮೀಕ್ಷೆಗಳು ಆರಂಭ ಆಗಿವೆ.**

# ಮಿನಿ ನ್ಯೂಸ್

## ಮಹಿಳೆಯ ಮಾಂಗಲ್ಯ ಸರ ಕಸಿದು ಪರಾರಿಯಾದ ಕಳ್ಳ ; ದೂರು ದಾಖಲು



• ಉದಯವಾಹಿನಿ, ರಾಮನಗರ

ಮಹಿಳೆಯ ಚಿನ್ನದ ಮಾಂಗಲ್ಯ ಸರಕಿತ್ತು ಚಾಕುವಿನಿಂದ ಕೈ ಕೊಯ್ದು ಕಳ್ಳ ತನ್ನ ಕೈ ಚಳಕ ತೋರಿ ಪರಾರಿಯಾಗಿರುವ ಘಟನೆ ಗ್ರಾಮಾಂತರ ಪೋಲೀಸ್ ಠಾಣಾ ವ್ಯಾಪ್ತಿಯ ಪಾದರಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ. ಪಾದರಹಳ್ಳಿ-ಮದರ್‌ಸಾಬರದೊಡ್ಡಿ ಹೋಗುವ ರಸ್ತೆಯ ಪಕ್ಕದ ಜಮೀನಿನಲ್ಲಿರುವ ಒಂಟಿ ಮನೆಯಲ್ಲಿ ವಾಸವಿದ್ದ ಮಹಿಳೆ ಭಾಗ್ಯಮ್ಮ ರಾತ್ರಿ 9.15ರ ಸುಮಾರಿನಲ್ಲಿ ಹೊರ ಬಂದಾಗ ಸುಮಾರು 40ಗ್ರಾಂ ಚಿನ್ನದ ಮಾಂಗಲ್ಯ ಸರಕಿತ್ತುಕೊಂಡು, ಮಹಿಳೆಯ ಕೈಯನ್ನು ಕೊಯ್ದು ಪರಾರಿಯಾಗಿದ್ದಾನೆ.

ಈ ಸಂಬಂಧ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರಕರಣ ಸುದ್ದಿ ತಿಳಿಯುತ್ತಿದ್ದಂತೆ ಡಿವೈಎಸ್‌ಪಿ ಶ್ರೀನಿವಾಸ್, ಗ್ರಾಮಾಂತರ ವೃತ್ತ ಆರಕ್ಷಕ ನಿರೀಕ್ಷಕ ಮುರುಳಿ, ಸಬ್‌ಇನ್ಸ್‌ಪೆಕ್ಟರ್ ಅಲ್ಲಾವುದ್ದಿನ್‌ಸೇರಿದಂತೆ ಶ್ವಾನದಳ ತಂಡ, ಬೆರಳಚ್ಚುಗಾರ ಪೋಲೀಸರ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕಳ್ಳನ ಎಡೆಮುರಿ ಕಟ್ಟಲು ಬಲೆ ಬೀಸಿದ್ದಾರೆ.

# ರೇಷ್ಮೆ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

• ಉದಯವಾಹಿನಿ, ರಾಮನಗರ

ರೇಷ್ಮೆ ಇಲಾಖೆ ವತಿಯಿಂದ 2023-24, 2024-25ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಗೂಡಿನ ನಂತರದ ಚಟುವಟಿಕೆ, ರಾಮನಗರ ವ್ಯಾಪ್ತಿಯಲ್ಲಿ (ರಾಮನಗರ ಮತ್ತು ಚನ್ನಪಟ್ಟಣ) ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸಿರುವ ರೀಲರುಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪ್ರಶಸ್ತಿಗಾಗಿ ನಿಗದಿಪಡಿಸಿರುವ ಅರ್ಹತೆಗಳಂತೆ ಸಕ್ರಿಯ ರೀಲರ್‌ಗಳು ಚಾಲ್ತಿಯಲ್ಲಿರುವ ಲೈಸೆನ್ಸ್ (ರಹದಾರಿ) ಹೊಂದಿರಬೇಕು. ಸರ್ಕಾರಿ ಮಾರುಕಟ್ಟೆಗಳಲ್ಲಿಯೇ ಗೂಡು ಖರೀದಿಸಿರುವ ಬಗ್ಗೆ ಹಾಗೂ ರೇಷ್ಮೆ ವಿನಿಮಯ ಕೇಂದ್ರದಲ್ಲಿ ರೇಷ್ಮೆ ಮಾರಾಟ ಮಾಡಿರುವ ಬಗ್ಗೆ ದಾಖಲಾತಿಗಳನ್ನು ಹೊಂದಿರಬೇಕು.

ಅರ್ಜಿಯನ್ನು ಫೆ.9ರೊಳಗೆ ರಾಮನಗರದ ಗೂಡಿನ ನಂತರದ ಚಟುವಟಿಕೆಗಳ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಬೇಕು. ಹೆಚ್ಚಿನ ಮಾಹಿತಿಗೆ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿ, ಗೂಡಿನ ನಂತರದ ಚಟುವಟಿಕೆ, ರಾಮನಗರದ ಕಚೇರಿಯನ್ನು ಸಂಪರ್ಕಿಸುವಂತೆ ರಾಮನಗರದ ಗೂಡಿನ ನಂತರದ ಚಟುವಟಿಕೆಗಳ ರೇಷ್ಮೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಫೆ.7 ಮತ್ತು 8 ರಂದು ವಿದ್ಯಾರ್ಥಿ ಜಾನಪದ ಲೋಕೋತ್ಸವ

• ಉದಯವಾಹಿನಿ, ರಾಮನಗರ

ಕರ್ನಾಟಕ ಜಾನಪದ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ವಿದ್ಯಾರ್ಥಿ ಜಾನಪದ ಲೋಕೋತ್ಸವ-2026 ಅನ್ನು ಫೆ. 7ರ ಶನಿವಾರ ಹಾಗೂ ಫೆ.8ರ ಭಾನುವಾರ ರಾಮನಗರ ಜಾನಪದ ಲೋಕದಲ್ಲಿ ಆಯೋಜಿಸಲಾಗಿದೆ. ಶ್ರೀ ಆದಿಚುಂಚನಗಿರಿ ಶಾಖಾ ಮಠಾಧೀಶರಾದ ಶ್ರೀ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಚಲನಚಿತ್ರ ಮತ್ತು ರಂಗಭೂಮಿಯ ಪ್ರಖ್ಯಾತ ನಿರ್ದೇಶಕರಾದ ಡಾ. ಟಿ.ಎಸ್. ನಾಗಾಭರಣ ಅವರು ಲೋಕೋತ್ಸವ ಉದ್ಘಾಟಿಸುವರು. ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯದರ್ಶಿಗಳಾದ ಕೆ.ವಿ. ಪ್ರಭಾಕರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕೆ. ರಾಜು ಅವರು ಕರಕುಶಲ ಮೇಳ ಉದ್ಘಾಟಿಸುವರು. ರಾಮನಗರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಎಚ್.ಎ. ಇಕ್ಬಾಲ್‌ಹುಸೇನ್ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು, ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಸ್ವಾಗತಿಸುವರು. ಅಂದು ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 9.30ರ ವರೆಗೆ ಜನಪದ ಕಲಾಪ್ರದರ್ಶನ ಆಯೋಜಿಸಲಾಗಿದೆ. ರಾತ್ರಿ 8 ರಿಂದ 9 ಗಂಟೆಯವರೆಗೆ ಜನಪದ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಕೆರೆಗೆ ಹಾರ ಜನಪದ ರೂಪಕ ಏರ್ಪಡಿಸಲಾಗಿದೆ.

ಫೆ.08ರ ಭಾನುವಾರ ಬೆಳಿಗ್ಗೆ 10.30ಕ್ಕೆ ಯುವಜನರಲ್ಲಿ ಜನಪದ ಗಾಯನ, ಕಲೆಗಳ ಸಂವರ್ಧನೆ ಕುರಿತು ಚರ್ಚೆ-ಸಂವಾದ ಆಯೋಜಿಸಲಾಗಿದೆ. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ಜಾನಪದ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಕೆ. ಚಿನ್ನಪ್ಪಗೌಡ ಅವರು ಆಶಯ ನುಡಿವರು. ಬೆಂಗಳೂರು ದಕ್ಷಿಣ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸತೀಶ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಹಿರಿಯ ರಂಗಕರ್ಮಿ, ಜನಪದ ಸಂವರ್ಧಕರಾದ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಅಧ್ಯಕ್ಷತೆ ವಹಿಸುವರು. ಅಂದು ಮಧ್ಯಾಹ್ನ 1.30ಕ್ಕೆ ಜನಪದ ಗೀತ ಗಾಯನೋತ್ಸವ-2026 ಆಯೋಜಿಸಲಾಗಿದೆ. ಸಂಜೆ 4 ರಿಂದ 4.30ರವರೆಗೆ ಬುಡಕಟ್ಟು ಕಲೆಗಳ ಆಕರ್ಷಣೆ ಯೋಜಿಸಲಾಗಿದೆ. ಸಂಜೆ 4.30 ರಿಂದ 5.30 ರವರೆಗೆ ಆಧುನಿಕ ಗಾಯಕರ ಜನಪದ ಗೀತ ಸಂಭ್ರಮ ಏರ್ಪಡಿಸಲಾಗಿದೆ.

ಫೆ.8ರ ಭಾನುವಾರ ಸಂಜೆ 5.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದ್ದು, ಕರ್ನಾಟಕ ಜಾನಪದ ಪರಿಷತ್ತಿನ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಹಾಗೂ ಮಹಾ ಪೋಷಕರು ಮತ್ತು ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಸಾರಿಗೆ, ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಪ್ರಶಸ್ತಿ ಪ್ರಧಾನ ಮಾಡುವರು.

ಆಂಧ್ರಪ್ರದೇಶದ ವಾಣಿಜ್ಯ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತರು ಹಾಗೂ ಲೇಖಕರಾದ ಜಯರಾಮ್ ರಾಯ್‌ಪುರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡುವರು.

ಮ್ಯಾನೇಜಿಂಗ್ ಟ್ರಸ್ಟಿ ಆದಿತ್ಯ ನಂಜರಾಜ್ ಅವರು ಸ್ವಾಗತಿಸುವರು. ರಾತ್ರಿ 7.30 ರಿಂದ 9 ಗಂಟೆಯವರೆಗೆ ಮಂಡ್ಯ ಕರ್ನಾಟಕ ಸಂಘ ಪ್ರಸ್ತುತಪಡಿಸುವ ಮಕ್ಕಳ ಮೂಡಲಪಾಯ ಯಕ್ಷಗಾನ ಆಯೋಜಿಸಲಾಗಿದೆ.

# ಜನಸ್ನೇಹಿ ಆಡಳಿತ ನೀಡಲು ಜಿಲ್ಲಾಧಿಕಾರಿ ಜಿ. ಪ್ರಭು ಸೂಚನೆ

• ಉದಯವಾಹಿನಿ, ಶಿಡ್ಲಘಟ್ಟ

ಜನಸಾಮಾನ್ಯರ ಯಾವುದೇ ಕೆಲಸವನ್ನು ತ್ವರಿತವಾಗಿ ಮಾಡಿಕೊಡಬೇಕು. ಅವರನ್ನು ವಿನಾಕಾರಣ ಕಚೇರಿಗೆ ಅಲೆದಾಡಿಸಬಾರದು ಎಂದು ಕಂದಾಯ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ. ಪ್ರಭು ಸೂಚನೆ ನೀಡಿದರು. ಇಲ್ಲಿನ ತಾಲ್ಲೂಕು ಕಚೇರಿಗೆ ಸೋಮವಾರ ಭೇಟಿ ನೀಡಿದ ಜಿಲ್ಲಾಧಿಕಾರಿ ಜಿ. ಪ್ರಭು ಅವರು ತಾಲ್ಲೂಕು ಕಚೇರಿಯಲ್ಲಿ ನಡೆಯುತ್ತಿರುವ ಭೂ ದಾಖಲೆಗಳ ಗಣಕೀಕರಣ ಕಾರ್ಯವನ್ನು ಪರಿಶೀಲನೆ ನಡೆಸಿದರು. ಇದೇ ವೇಳೆ ನಾಗರಿಕರ ಅಹವಾಲುಗಳನ್ನು ಸ್ವೀಕರಿಸಿದರು.

ಬಳಿಕ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕಂದಾಯ ಇಲಾಖೆಯನ್ನು ಮಾತೃ ಇಲಾಖೆ ಎಂದು ಕರೆಯಲಾಗುತ್ತದೆ. ಹೀಗಾಗಿ, ಜಿಲ್ಲೆಯಾದ್ಯಂತ ಇರುವ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ಜನಸ್ನೇಹಿ ಆಡಳಿತ ನೀಡಲು ತಹಶೀಲ್ದಾರ್ ಸೇರಿದಂತೆ ಎಲ್ಲಾ ಅಧಿಕಾರಿಗಳು ಮುಂದಾಗಬೇಕು' ಎಂದು ಹೇಳಿದರು. ಕಚೇರಿಯಲ್ಲಿ ಕಡತಗಳ ನಿರ್ವಹಣೆ ಹಾಗೂ ಹಾಜರಾತಿ ನಿರ್ವಹಣೆ ಮಾಡಬೇಕು. ಕಚೇರಿಗೆ ಬರುವ ನಾಗರಿಕರೊಂದಿಗೆ ಅಧಿಕಾರಿಗಳು ಸೌಜನ್ಯಯುತವಾಗಿ ನಡೆದುಕೊಳ್ಳಬೇಕು. ನಾಗರಿಕರಿಂದ ಬಂದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸಕಾಲದಲ್ಲಿ ವಿಲೇವಾರಿ ಮಾಡಬೇಕು ಎಂದು ಸೂಚಿಸಿದರು. ತಹಶೀಲ್ದಾರ್ ಅವರು ಕಡ್ಡಾಯವಾಗಿ ಕುಂದುಕೊರತೆ ಸಭೆ ಆಯೋಜಿಸಬೇಕು. ತಾಲ್ಲೂಕು, ಹೋಬಳಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಸಾರ್ವಜನಿಕರ ಕುಂದುಕೊರತೆ ಸಭೆ ಆಯೋಜಿಸಿ, ಜನರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ತಾಕೀತು ಮಾಡಿದರು.


ಉದಯವಾಹಿನಿ ಚಿತ್ರ


ಈಗಾಗಲೇ ಭೂದಾಖಲೆಗಳ ಸ್ಕ್ಯಾನಿಂಗ್ ಪ್ರಕ್ರಿಯೆ ಜಿಲ್ಲೆಯಾದ್ಯಂತ ನಡೆಯುತ್ತಿದ್ದು, ಮುಂದಿನ ಎರಡು ತಿಂಗಳೊಳಗೆ ಶಿಡ್ಲಘಟ್ಟ ತಾಲ್ಲೂಕಿನ ಎಲ್ಲಾ ಮೂಲ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯ ಪೂರ್ಣಗೊಳ್ಳಲಿದೆ. ರೈತರು ತಾಲ್ಲೂಕು ಕಚೇರಿಗೆ ಬರುವ ಬದಲು ತಾವಿದ್ದಲ್ಲಿಯೇ ಭೂ ದಾಖಲೆಗಳನ್ನು ಪಡೆದುಕೊಳ್ಳುವ ವ್ಯವಸ್ಥೆ ತ್ವರಿತವಾಗಿ ಆಗಲಿದೆ ಎಂದರು. ನಗರದಲ್ಲಿರುವ ಎಲ್ಲಾ ಸಾರ್ವಜನಿಕ ಆಸ್ತಿಗಳ ನಿರ್ವಹಣೆ, ಸಂರಕ್ಷಣೆ ಅತಿ ಮುಖ್ಯ. ನಗರಸಭೆ ಸಮರ್ಪಕವಾಗಿ ನಡೆಯಬೇಕಾದರೆ ಸಂಪನ್ಮೂಲವೂ ಮುಖ್ಯ. ಸ್ವಯಂ ಘೋಷಣೆಯೊಂದಿಗೆ ಕಮರ್ಷಿಯಲ್ ಜಾಗಕ್ಕೆ ಮನೆ ತೆರಿಗೆ ಕಟ್ಟುವುದು. 2000 ಅಡಿ ಜಾಗವಿದ್ದರೆ 1 ಸಾವಿರ ಅಡಿ ಜಾಗಕ್ಕೆ ಮಾತ್ರ ತೆರಿಗೆ ಕಟ್ಟುವುದು ಗಮನಕ್ಕೆ ಬಂದಿದೆ. ಹಾಗಾಗಿ ಮೊದಲ ಹಂತದಲ್ಲಿ ಎಲ್ಲಾ ವಾಣಿಜ್ಯ ಕಟ್ಟಡಗಳ ಪರಿಶೀಲನೆ ಕಾರ್ಯ ನಡೆಸಲಿದ್ದೇವೆ. ಈ ಹಿಂದೆ ಅವರು ಕಟ್ಟಿರುವ ತೆರಿಗೆ ಪರಿಶೀಲನೆ ನಡೆಸಿ ಕಟ್ಟಬೇಕಾದ ತೆರಿಗೆ ಹಣ ಕಟ್ಟಿಸಿಕೊಳ್ಳಲಾಗುವುದು. ಒಂದಷ್ಟು ತೆರಿಗೆ ಹಣ ಬಂದರೆ ನಗರಸಭೆಗಳನ್ನು ಮೌಲ್ಯಯುತವಾಗಿ ನಡೆಸಲು ಸಾಧ್ಯವಾಗುತ್ತದೆ ಎಂದರು. ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಅವರಿಂದ ಅಹವಾಲುಗಳನ್ನು ಸ್ವೀಕರಿಸಲಾಯಿತು. ಸ್ವೀಕರಿಸಿದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ನಿಗದಿತ ಅವಧಿಯೊಳಗೆ ವಿಲೇವಾರಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

# ಸ್ವಚ್ಛತೆ, ಆರೋಗ್ಯದ ದೃಷ್ಟಿಯಿಂದ ಮಹತ್ವದ್ದು: ಶಾಸಕ

• ಉದಯವಾಹಿನಿ, ಪಾಂಡವಪುರ

ಪಟ್ಟಣದಲ್ಲಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಒಳಚರಂಡಿಯ ಮಲತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿಗೆ ಪಟ್ಟಣದ ಮೈಸೂರು ರಸ್ತೆಯ ರಿಲಾಯನ್ಸ್ ಪೆಟ್ರೋಲ್ ಬಂಕ್ ಹಿಂಭಾಗದ ಜಮೀನಿನಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಪಟ್ಟಣದ ನೈರ್ಮಲ್ಯ ಮತ್ತು ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಈ ಯೋಜನೆ ಅತ್ಯಂತ ಮಹತ್ವದ್ದಾಗಿದ್ದು, ಈ ಹಿಂದೆ ಶಾಸಕರಾಗಿದ್ದ ಕೆ.ಎಸ್. ಪುಟ್ಟಣ್ಣಯ್ಯ ಮತ್ತು ಸಿ.ಎಸ್.ಪುಟ್ಟರಾಜು ಅವರ ಪ್ರಯತ್ನದಿಂದಾಗಿ ಈಗ ಕಾರ್ಯರೂಪಕ್ಕೆ ಬರುತ್ತಿದೆ. 20 ಕೋಟಿ ವೆಚ್ಚದಲ್ಲಿ ಈಗ ಎಸ್‌ಎಸ್‌ಟಿಪಿ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತಿದೆ. ಇಷ್ಟರಲ್ಲಿಯೇ 2.5ಕೋಟಿ ವೆಚ್ಚದಲ್ಲಿ ಮಲಿನ ನೀರು ಸಂಸ್ಕರಣಾ ಘಟಕ ಎಫ್‌ಎಸ್‌ಟಿಪಿ ನಿರ್ಮಾಣಕ್ಕೂ ಚಾಲನೆ ನೀಡಲಾಗುವುದು. ಅಲ್ಲದೆ ಘಟಕಗಳ ನಿರ್ಮಾಣಕ್ಕೆ ಭೂಮಿ ಕಳೆದುಕೊಂಡಿರುವ ರೈತ ಕುಟುಂಬದ ಮಕ್ಕಳಿಗೆ ಉದ್ಯೋಗ ದೊರಕಿಸಿಕೊಡುವುದಾಗಿ ಭರವಸೆ ನೀಡಿದರು. ಪುರಸಭೆ ಮುಖ್ಯಾಧಿಕಾರಿ ಸತೀಶ್ ಕುಮಾರ್ ಮಾತನಾಡಿ, ಎಫ್‌ಎಸ್‌ಟಿಪಿ ನಿರ್ಮಾಣ ಕಾರ್ಯವು ಮೂರು ತಿಂಗಳ ಒಳಗಾಗಿ ಮುಗಿಯಲಿದೆ. ಜತೆಗೆ ಎಸ್‌ಟಿಪಿ ನಿರ್ಮಾಣ ಕಾರ್ಯವನ್ನು ಶೀಘ್ರದಲ್ಲಿಯೇ ಪ್ರಾರಂಭಿಸಿ ಒಂದು ವರ್ಷದ ಒಳಗಾಗಿ ಪೂರ್ಣಗೊಳಿಸಲಾಗುವುದು. ಈ ಎರಡು ಘಟಕಗಳಿಂದ ಪಟ್ಟಣದಲ್ಲಿ ನೈರ್ಮಲ್ಯ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

# ಎಸ್‌ಕೆಡಿಆರ್‌ಡಿ ವತಿಯಿಂದ ಎಂಪಿಸಿಎಸ್ ಕಟ್ಟಡ ನಿರ್ಮಾಣಕ್ಕೆ ಅನುದಾನ



ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ರಾಮನಗರ ತಾಲ್ಲೂಕು ವತಿಯಿಂದ ಸಮುದಾಯ ಅಭಿವೃದ್ಧಿ ವಿಭಾಗ ಕಾರ್ಯಕ್ರಮದಡಿಯಲ್ಲಿ ತಾಲ್ಲೂಕಿನ ಹಾಗಲ ಹಳ್ಳಿ, ಬೆಜ್ಜರಹಳ್ಳಿಕಟ್ಟೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ನಿರ್ಮಾಣಕ್ಕೆ ತಲಾ ಎರಡು ಲಕ್ಷದಂತೆ ಒಟ್ಟು ನಾಲ್ಕು ಲಕ್ಷ ಅನುದಾನವನ್ನು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಯೋಜನೆಯ ಜಿಲ್ಲಾ ನಿರ್ದೇಶಕರು ಜಯಕರ್ ಶೆಟ್ಟಿ, ವಕೀಲರಾದ ರಾಜೀವ್ ಗೌಡ, ಬೆಜ್ಜರಹಳ್ಳಿ ಕಟ್ಟೆ ಎಂಪಿಸಿಎಸ್ ಅಧ್ಯಕ್ಷರಾದ ಸುಮಿತ್ರಾ, ಕಾರ್ಯದರ್ಶಿ ಬಸವರಾಜು, ತಾಲ್ಲೂಕು ಯೋಜನಾಧಿಕಾರಿ ಮುರಳಿಧರ್, ಎಂಪಿಸಿಎಸ್ ನಿರ್ದೇಶಕರಾದ ಭಾಗ್ಯಮ್ಮ, ಕೃಷ್ಣಪ್ಪ, ನೀಲಮ್ಮ, ಪಾದರ ಹಳ್ಳಿ ಒಕ್ಕೂಟ ಅಧ್ಯಕ್ಷರಾದ ಸಂಧ್ಯಾರಾಣಿ, ವಲಯದ ಮೇಲ್ವಿಚಾರಕಿ ಗೀತಾ, ಆಕಾಶ್, ಸೇವಾ ಪ್ರತಿನಿಧಿ ವೀಣಾ, ಶ್ರುತಿ, ಸಂಘದ ಸದಸ್ಯರು ಉಪಸ್ಥಿತರಿದ್ದರು.

## 3 ವರ್ಷದಲ್ಲಿ 215 ಮಂದಿ ಬಲಿ ಪಡೆದ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೈ ವೇ: ಟೋಲ್ ಸಂಗ್ರಹ ಮಾತ್ರ ಭರ್ಜರಿ 855 ಕೋಟಿ ರೂ!

# ದಶಪಥ ರಸ್ತೆಯಲ್ಲಿ ಕಡಿಮೆಯಾಗದ ಅಪಘಾತಗಳ ಸಂಖ್ಯೆ

• ಉದಯವಾಹಿನಿ, ರಾಮನಗರ

ರಾಜ್ಯ ರಾಜಧಾನಿ ಬೆಂಗಳೂರಿನಿಂದ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರಿಗೆ ತ್ವರಿತ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ನಿರ್ಮಾಣಗೊಂಡಿರುವ ದಶಪಥ ರಸ್ತೆಯಲ್ಲಿ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತಲೇ ಇಲ್ಲ. ಕಳೆದ ಮೂರು ವರ್ಷಗಳಲ್ಲಿ200ಕ್ಕೂ ಹೆಚ್ಚು ಮಂದಿ ಪ್ರಾಣ ಚೆಲ್ಲಿದ್ದು, ಬೆಂಗಳೂರು-ಮೈಸೂರು ಹೆದ್ದಾರಿ ಸಾವಿನ ರಹದಾರಿಯಾಗಿ ಬದಲಾಗುತ್ತಿದೆಯೇ ಎನ್ನುವ ಆತಂಕ ಹುಟ್ಟುಹಾಕಿದೆ.

**3 ವರ್ಷದಲ್ಲಿ 215 ಮಂದಿ ಬಲಿ:** 3 ವರ್ಷಗಳ ಹಿಂದೆ ಉದ್ಘಾಟನೆಗೊಂಡ ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ಸಾಕಷ್ಟು ಅವಾಂತರಗಳಿಂದಲೇ ಸದ್ದು ಮಾಡಿತ್ತು. ಸಾಲು ಸಾಲು ಅಪಘಾತಗಳ ಹಿನ್ನೆಲೆಯಲ್ಲಿ ಇದನ್ನು ಡೆತ್ ವೇ ಎಂದೇ ಕರೆಯಲಾಗುತಿತ್ತು. ಇದಕ್ಕೆ ಸಾಕ್ಷಿ ಎಂಬಂತೆ 3 ವರ್ಷಗಳಲ್ಲಿ 215 ಮಂದಿ ಜೀವ ಕಳೆದುಕೊಂಡಿದ್ದಾರೆ. 118 ಕಿ.ಮೀ. ಉದ್ದದ ಈ ಹೆದ್ದಾರಿಯಲ್ಲಿ ಕಳೆದ 3 ವರ್ಷಗಳ ಅವಧಿಯಲ್ಲಿ 1674 ಅಪಘಾತಗಳು ಸಂಭವಿಸಿವೆ. ಈ ಅಪಘಾತಗಳಲ್ಲಿ 215 ಮಂದಿ ಸಾವಿಗೀಡಾಗಿದ್ದು, 311 ಮಂದಿ ಗಂಭೀರ ಗಾಯಗೊಂಡಿದ್ದಾರೆ. ಇನ್ನು ಸಣ್ಣಪುಟ್ಟ ಗಾಯಾಳುಗಳ ಸಂಖ್ಯೆ ಸಾವಿರಕ್ಕೂ ಹೆಚ್ಚಿದೆ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ವೇ ಅನ್ನು 2 ಹಂತದಲ್ಲಿ ನಿರ್ಮಿಸಲಾಗಿದೆ. ಮೊದಲ ಹಂತ ಬೆಂಗಳೂರಿನಿಂದ ನಿಡಘಟ್ಟವರೆಗೆ, 2ನೇ ಹಂತ ನಿಡಘಟ್ಟದಿಂದ ಮೈಸೂರುವರೆಗೆ ಇದ್ದು, ಅತಿಹೆಚ್ಚು ಸಾವು ಮತ್ತು ಅಪಘಾತಗಳು ಒಂದನೇ ಹಂತಕ್ಕಿಂತ ಎರಡನೇ ಹಂತದಲ್ಲೇ ಸಂಭವಿಸಿರುವುದು ಅಂಕಿ ಸಂಖ್ಯೆಯಿಂದ ತಿಳಿದು ಬಂದಿದೆ.

ಮೊದಲನೇ ಹಂತದ ಎಕ್ಸ್‌ಪ್ರೆಸ್ ವೇನಲ್ಲಿ 3 ವರ್ಷಗಳಲ್ಲಿ 76 ಮಂದಿ ಸಾವಿಗೀಡಾಗಿದ್ದರೆ, 2ನೇ ಹಂತದಲ್ಲಿ 145 ಮಂದಿ ಸಾವಿಗೀಡಾಗಿದ್ದಾರೆ. ಪಕ್ಕದ ಮಂಡ್ಯ ಜಿಲ್ಲೆಯ ಸರಹದ್ದಿನಲ್ಲಿ ಅತಿ ಹೆಚ್ಚು ಅಪಘಾತ ಸಂಭವಿಸುತ್ತಿರುವುದು ಗಮನಾರ್ಹ.


ಉದಯವಾಹಿನಿ ಚಿತ್ರ

**ಮೊದಲ ವರ್ಷದಲ್ಲೇ 110 ಮಂದಿ ಬಲಿ ಪಡೆದಿದ್ದ ಹೈವೇ:** ಹೆದ್ದಾರಿ ನಿರ್ಮಾಣಗೊಂಡ ಮೊದಲ ವರ್ಷ 2023ರಲ್ಲಿ ಬೆಂಗಳೂರಿನಿಂದ ನಿಡಘಟ್ಟವರೆಗಿನ ಹೆದ್ದಾರಿಯಲ್ಲಿ 33 ಮಂದಿ ಸಾವಿಗೀಡಾಗಿದ್ದರೆ, ನಿಡಘಟ್ಟದಿಂದ ಮೈಸೂರುವರೆಗಿನ ಹೆದ್ದಾರಿಯಲ್ಲಿ 77 ಮಂದಿ ಪ್ರಾಣ ಕಳೆದುಕೊಂಡಿದ್ದರು. ಒಟ್ಟಾರೆ 2023ರಲ್ಲಿ ಬರೋಬ್ಬರಿ 110 ಮಂದಿ ಅಪಘಾತದಲ್ಲಿ ಸಾವಿಗೀಡಾಗಿದ್ದರು.

ಇದಾದ ಬಳಿಕ ಕೆಲವೊಂದು ಸುಧಾರಣಾ ಕ್ರಮಗಳನ್ನು ಪೊಲೀಸ್ ಇಲಾಖೆ ಕೈಗೊಂಡಿತ್ತು. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಹ ಎಕ್ಸ್‌ಪ್ರೆಸ್ ವೇ ನಲ್ಲಿಅಪಘಾತ ನಿಯಂತ್ರಣ ಮಾಡುವ ಸಂಬಂಧ ತಜ್ಞರ ತಂಡವನ್ನು ಕಳುಹಿಸಿ ಬ್ಲಾಕ್ ಸ್ಪಾಟ್‌ಗಳನ್ನು ಗುರುತಿಸಿ ಸುಧಾರಣಾ ಕ್ರಮ ಕೈಗೊಳ್ಳಲು ಸಲಹೆ ನೀಡಿತ್ತು. ವೇಗ ನಿಯಂತ್ರಣಕ್ಕೆ ಎಐ ಕ್ಯಾಮೆರಾಗಳ ಅಳವಡಿಕೆ ಸೇರಿದಂತೆ ಸಾಕಷ್ಟು ಕ್ರಮಗಳನ್ನು ಕೈಗೊಂಡ ಬಳಿಕ ಎಕ್ಸ್ ಪ್ರೆಸ್ ವೇನಲ್ಲಿಅಪಘಾತದಲ್ಲಿ ಸಾವಿಗೀಡಾಗುವರ ಸಂಖ್ಯೆ ಕಡಿಮೆಯಾಗಿದ್ದು, 2024ರಲ್ಲಿ 54 ಮಂದಿ, 2025ರ ಅಕ್ಟೋಬರ್ ವರೆಗೆ 51 ಮಂದಿ ಅಪಘಾತದಲ್ಲಿ ಸಾವಿಗೀಡಾಗಿದ್ದಾರೆ.

**ಸಾವಿನ ಸಂಖ್ಯೆ ಹೆಚ್ಚಳಕ್ಕೆ ಕಾರಣವೇನು?:** ಅತೀ ವೇಗ, ಅಜಾಗರೂಕತೆಯ ಚಾಲನೆ ಮತ್ತು ಲೇನ್ ಶಿಸ್ತು ಪಾಲಿಸದೇ ಇರುವುದರಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿದ್ದರೆ, ಸೂಕ್ತ ವೈದ್ಯಕೀಯ ಆರೈಕೆ ಕೇಂದ್ರಗಳ ಕೊರತೆಯಿಂದ ಸಾವುಗಳ ಸಂಖ್ಯೆ ಹೆಚ್ಚಾಗುತ್ತಿವೆ.

- **ಅತೀ ವೇಗ, ಅಜಾಗರೂಕತೆಯ ಚಾಲನೆ ಮತ್ತು ಲೇನ್ ಶಿಸ್ತು ಪಾಲಿಸದೇ ಇರುವುದರಿಂದ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿದ್ದರೆ, ಸೂಕ್ತ ವೈದ್ಯಕೀಯ ಆರೈಕೆ ಕೇಂದ್ರಗಳ ಕೊರತೆಯಿಂದ ಸಾವುಗಳ ಸಂಖ್ಯೆ ಹೆಚ್ಚಾಗುತ್ತಿವೆ.**
- **ಕೋಟ್ಯಂತರ ರೂಪಾಯಿ ಟೋಲ್ ಸಂಗ್ರಹ ಮಾಡುವ ಹೆದ್ದಾರಿ ಪ್ರಾಧಿಕಾರ ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನ ಹರಿಸದಿರುವುದು ಇದಕ್ಕೆಲ್ಲಾ ಕಾರಣವಾಗಿದೆ.**

### 3 ಕಡೆ ಟೋಲ್ ಶುಲ್ಕ ಪಾವತಿಸಬೇಕಿದೆ

**ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೋಲ್ ಮೂಲಕ ಭರ್ಜರಿ ಹಣ ಸಂಗ್ರಹಿಸುತ್ತಿದೆ. ಎನ್‌ಎಚ್‌ಎಐ ಮೂಲಗಳ ಪ್ರಕಾರ ಕಳೆದ 3 ವರ್ಷಗಳಲ್ಲಿಈ ಹೆದ್ದಾರಿಯಿಂದ 855.79 ಕೋಟಿ ರೂ. ಟೋಲ್ ಮೂಲಕ ಸಂಗ್ರಹವಾಗಿದೆ. ಎಕ್ಸ್‌ಪ್ರೆಸ್ ವೇನಲ್ಲಿ ಪ್ರಯಾಣಿಸುವ ಪ್ರಯಾಣಿಕರು 3 ಕಡೆ ಟೋಲ್ ಶುಲ್ಕ ಪಾವತಿಸಬೇಕಿದೆ. ಮೊದಲ ಹಂತದ ಎಕ್ಸ್ ಪ್ರೆಸ್ ವೇ ಬೆಂಗಳೂರಿನಿಂದ- ನಿಡಘಟ್ಟದವರೆಗೆ ಸಂಚರಿಸಲು ಬೆಂಗಳೂರಿನಿಂದ ಮೈಸೂರು ಕಡೆಗೆ ಹೋಗುವವರು ಕಣ್ಮಣಿಕೆ ಗ್ರಾಮದ ಬಳಿ ಇರುವ ಟೋಲ್ ಪ್ಲಾಜಾದಲ್ಲಿ ಟೋಲ್ ಶುಲ್ಕ ಪಾವತಿ ಮಾಡಬೇಕು. ಈ ಟೋಲ್ ಪ್ಲಾಜಾದಲ್ಲಿ 3 ವರ್ಷಗಳಲ್ಲಿ 282.14 ಕೋಟಿ ರೂ. ಟೋಲ್ ಶುಲ್ಕ ಸಂಗ್ರಹವಾಗಿದೆ. ಇನ್ನು ಮೈಸೂರು ಕಡೆಯಿಂದ ಬೆಂಗಳೂರಿಗೆ ಹೋಗವವರು ಬಿಡದಿಯ ಶೇಷಗಿರಿಹಳ್ಳಿಯ ಬಳಿ ಇರುವ ಟೋಲ್ ಪ್ಲಾಜಾದಲ್ಲಿ ಟೋಲ್ ಕಟ್ಟುತ್ತಿದ್ದು, ಈ ಟೋಲ್ ನಲ್ಲಿ 3 ವರ್ಷದಲ್ಲಿ 248.2 ಕೋಟಿ ಸಂಗ್ರಹವಾಗಿದೆ. ಇನ್ನು 2ನೇ ಹಂತದ ಎಕ್ಸ್ ಪ್ರೆಸ್ ವೇ ನಿಡಘಟ್ಟದಿಂದ-ಮೈಸೂರುವರೆಗೆ ಪ್ರಯಾಣಿಸುವ ವಾಹನಗಳು ಗಣಂಗೂರು ಟೋಲ್ ಪ್ಲಾಜಾದಲ್ಲಿ ಟೋಲ್ ಶುಲ್ಕ ಪಾವತಿಸಬೇಕಿದ್ದು, ಇಲ್ಲಿ 488.81 ಕೋಟಿ ರೂ. ಶುಲ್ಕ ಸಂಗ್ರಹವಾಗಿದೆ.**

ಮೈಸೂರಿನಿಂದ ಬೆಂಗಳೂರಿಗೆ ಒಟ್ಟು 120 ಕಿ.ಮೀ ಅಂತರ ಇರುವ ಈ ರಾಷ್ಟ್ರೀಯ ಹೆದ್ದಾರಿ ಬೆಂಗಳೂರು (10-12 ಕಿ.ಮೀ), ರಾಮನಗರ ಅಥವಾ ಬೆಂಗಳೂರು ದಕ್ಷಿಣ ಜಿಲ್ಲೆ(30 ಕಿ.ಮೀ), ಮಂಡ್ಯ ಜಿಲ್ಲೆಯಲ್ಲಿ(60 ಕಿ.ಮೀ) ಹಾಗೂ ಮೈಸೂರು ಜಿಲ್ಲೆಯಲ್ಲಿ(10ರಿಂದ 12ಕಿ.ಮೀ) ಸರಹದ್ದು ಹೊಂದಿದೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲೆಂದು ರಾಮನಗರ, ಮಂಡ್ಯದಲ್ಲಿ ಅಪಘಾತ ಆರೈಕೆ ಕೇಂದ್ರ (ಟ್ರಾಮಾ ಕೇರ್ ಸೆಂಟರ್) ಸ್ಥಾಪಿಸಬೇಕು ಎಂಬ ಬಹುದಿನಗಳ ಪ್ರಸ್ತಾವನೆಯು ಕೇವಲ ಕಾಗದದಲ್ಲಿ ಮಾತ್ರ ಉಳಿದಿದೆ. ಕೋಟ್ಯಂತರ ರೂಪಾಯಿ ಟೋಲ್ ಸಂಗ್ರಹ ಮಾಡುವ ಹೆದ್ದಾರಿ ಪ್ರಾಧಿಕಾರ ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಹೆಚ್ಚಿನ ಗಮನ ಹರಿಸದಿರುವುದು ಇದಕ್ಕೆಲ್ಲಾ ಕಾರಣವಾಗಿದೆ.

ಅಂತರಾಳದಿಂದ..
EDITORIAL

# ಮುಟ್ಟಿನ ಆರೋಗ್ಯ ಮೂಲಭೂತ ಹಕ್ಕು ಘನತೆಯ ಬದುಕಿಗೆ ಮಹತ್ವದ ಹೆಜ್ಜೆ

ಮುಟ್ಟಿನ ಆರೋಗ್ಯದ ಹಕ್ಕು ಸಂವಿಧಾನ ನೀಡಿರುವ ಜೀವಿಸುವ ಹಕ್ಕಿನ ಭಾಗ ಎಂದು ಘೋಷಿಸಿ ಸುಪ್ರೀಂ ಕೋರ್ಟ್ ನೀಡಿರುವ ಮಹತ್ವದ ತೀರ್ಪು ಮಹಿಳೆಯ ಘನತೆಯ ಬದುಕಿನತ್ತ ಇರಿಸಲಾದ ಮತ್ತೊಂದು ಹೊಸ ಹೆಜ್ಜೆ. ಸಂವಿಧಾನದ 21ನೇ ವಿಧಿ ಪ್ರಕಾರ ಬದುಕುವ ಹಕ್ಕೆಂಬುದು ಘನತೆಯಿಂದ ಬದುಕುವ ಹಕ್ಕನ್ನೂ ಒಳಗೊಳ್ಳುತ್ತದೆ. ಮುಟ್ಟಿನ ನೈರ್ಮಲ್ಯ ಸೌಕರ್ಯಗಳು ಆರೋಗ್ಯದ ವಿಚಾರ ಮಾತ್ರವಲ್ಲ, ಅದೊಂದು ಸಾಂವಿಧಾನಿಕ ಹಕ್ಕು ಎಂದು ಈ ತೀರ್ಪು ಗುರುತಿಸಿದೆ. ಮುಟ್ಟಿನ ನೈರ್ಮಲ್ಯದ ಸೌಕರ್ಯಗಳು ಹೆಣ್ಣುಮಗುವಿನ ಬದುಕು, ಘನತೆ, ಆರೋಗ್ಯ, ಶಿಕ್ಷಣದ ಹಕ್ಕಿನ ಅಂತರ್ಗತ ಭಾಗ ಎಂದೂ ಕೋರ್ಟ್ ಹೇಳಿದೆ. ಹೀಗಾಗಿ, ಎಲ್ಲಾ ಶಾಲೆಗಳಲ್ಲಿ ಉಚಿತವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ಹಾಗೂ ಬಾಲಕ-ಬಾಲಕಿಯರಿಗೆ ಪ್ರತ್ಯೇಕ ಸ್ವಚ್ಛ ಶೌಚಾಲಯ ಸೌಲಭ್ಯಗಳನ್ನು ಒದಗಿಸಬೇಕು ಎಂಬಂಥ ನ್ಯಾಯಿಕ ಪರಮಾದೇಶವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ನೀಡಿದೆ; ಮೂರು ತಿಂಗಳೊಳಗೆ ಆದೇಶ ಪರಿಪಾಲನೆಯ ನಿರ್ದಿಷ್ಟಗಡುವನ್ನೂ ನೀಡಿದೆ.



ಸಂವಿಧಾನದ 14ನೇ ವಿಧಿಯು ಸಮಾನತೆಯ ಹಕ್ಕನ್ನು ನೀಡುತ್ತದೆ. ಆದರೆ ಎಲ್ಲರನ್ನೂ ಒಂದೇ ಬಗೆಯಲ್ಲಿ ಸಮಾನವಾಗಿ ಕಾಣುವಂತಹದ್ದೂ ಅಸಮಾನತೆಯನ್ನು ಶಾಶ್ವತವಾಗಿಸಬಹುದು ಎನ್ನುವ ತರ್ಕ, ಕೋರ್ಟ್‌ನ ಈ ಆದೇಶದ ಹಿಂದೆ ಇದೆ. ಹೀಗಾಗಿ ಅಸಮಾನತೆಯ ಮೂಲ ಕಾರಣ, ವಿಭಿನ್ನ ಅಗತ್ಯಗಳು ಹಾಗೂ ನೀಡಬೇಕಾದ ಅಗತ್ಯ ಬೆಂಬಲಗಳನ್ನು ಆಧರಿಸಿ ನ್ಯಾಯಯುತ ಫಲಿತಗಳನ್ನು ಪಡೆಯುವಂತಹ ತರ್ಕದ (ಸಬ್‌ಸ್ಟಾಂಟಿವ್ ಈಕ್ವಾಲಿಟಿ) ಆಧಾರದಲ್ಲಿ ಕೋರ್ಟ್ ಈ ತೀರ್ಪು ಪ್ರಕಟಿಸಿದೆ. ಈ ಬಗೆಯ ಗ್ರಹಿಕೆಯು, ಮಹಿಳೆ ಹಾಗೂ ಪುರುಷರನ್ನು ಒಂದೇ ರೀತಿಯಲ್ಲಿ ಕಾಣಲಾಗದು ಎಂಬುದನ್ನು ಗುರುತಿಸುತ್ತದೆ. ಇಂತಹ ಕ್ರಮಗಳು ರಕ್ಷಣೆ ಅಥವಾ ಅವಲಂಬನೆಯನ್ನಲ್ಲ, ಸ್ವಾಯತ್ತೆಯನ್ನು ಖಾತರಿ ಪಡಿಸುವಂತಹದ್ದಾಗಿರಬೇಕು ಎಂಬುದನ್ನೂ ಪ್ರತಿಪಾದಿಸುತ್ತವೆ.

> **ಮುಟ್ಟಿನ ಆರೋಗ್ಯವೂ ಹಕ್ಕು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದು ಹೆಣ್ಣಿನ ಘನತೆಯನ್ನು ಎತ್ತಿಹಿಡಿಯುವ ಹಾಗೂ ಸಂವೇದನಾಶೀಲವಾದ ಮಹತ್ವದ ನಡೆ.**

'ಪೀರಿಯಡ್ (ವಾಕ್ಯದ ಪೂರ್ಣ ವಿರಾಮದ ಚಿಹ್ನೆ), ವಾಕ್ಯದ ಅಂತ್ಯವನ್ನು ಸೂಚಿಸಬೇಕು, ಬಾಲೆಯ ಶಿಕ್ಷಣವನ್ನಲ್ಲ ಎನ್ನುವ, ಅಮೆರಿಕನ್ ಶಿಕ್ಷಣ ತಜ್ಞೆ ಮೆಲಿಸ್ಸಾ ಬರ್ಟನ್ ಅವರ ಮಾತುಗಳನ್ನು 127 ಪುಟಗಳ ತೀರ್ಪಿನ ಬರಹದ ಆರಂಭದಲ್ಲಿ ಉಲ್ಲೇಖಿಸಿರುವುದು ಗಮನಾರ್ಹ. ಮುಟ್ಟಿನ ನೈರ್ಮಲ್ಯ ಪರಿಕರಗಳು ಅಥವಾ ಶೌಚಾಲಯದ ಕೊರತೆಯಿಂದಾಗಿ ಬಾಲಕಿಯೊಬ್ಬಳು ತರಗತಿಗಳಿಗೆ ಹಾಜರಾಗುವುದು ಸಾಧ್ಯ ಆಗದಿದ್ದಲ್ಲಿ, ಆಗ ಆಕೆ ತನ್ನ ಸಹಪಾಠಿಗಳಾದ ಹುಡುಗರ ಜೊತೆ ಸಮಾನ ಹೆಜ್ಜೆ ಇರಿಸಲು ಅಸಾಧ್ಯವಾಗುತ್ತದೆ. ಮುಟ್ಟಿನ ನೈರ್ಮಲ್ಯ ಸೌಕರ್ಯ ಸಮಸ್ಯೆಗಳಿಂದಾಗಿಯೇ ದೇಶದಲ್ಲಿ ಸುಮಾರು 2.3 ಕೋಟಿ ಹರೆಯದ ಹೆಣ್ಣುಮಕ್ಕಳು ಅರ್ಧದಲ್ಲೇ ಶಾಲೆ ಬಿಡುತ್ತಾರೆಂಬುದು ಈಗಲೂ ನಮ್ಮ ಸಮಾಜ ಎದುರಿಸುತ್ತಿರುವಂತಹ ಕಟು ವಾಸ್ತವ. ಇಂತಹ ಸಂದರ್ಭದಲ್ಲಿ, ಮುಟ್ಟಿನ ನೈರ್ಮಲ್ಯ ನಿರ್ವಹಣೆ ವ್ಯವಸ್ಥೆಗಳಿಲ್ಲದೆ ಅರ್ಧಕ್ಕೇ ಶಾಲೆ ಬಿಡುವಂತಾಗುವುದು ಅಥವಾ ತರಗತಿಗಳಿಗೆ ಗೈರುಹಾಜರಾಗುವಂತಹದ್ದು ಆಕೆಯ ದೇಹದ ಸ್ವಾಯತ್ತೆ ಹಾಗೂ ಖಾಸಗೀತನವನ್ನು ಉಲ್ಲಂಘಿಸಿದಂತೆ ಎಂದು ಕೋರ್ಟ್ ಪರಿಗಣಿಸಿರುವುದು ಮಹತ್ವದ್ದು. 2009ರ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯನ್ನು ಮುಟ್ಟಿನ ಆರೋಗ್ಯದ ನೆಲೆಯಲ್ಲಿ ವ್ಯಾಖ್ಯಾನಿಸಿರುವುದು ಹೆಣ್ಣುಮಗುವಿನ ಅಗತ್ಯಗಳಿಗೆ ಸಂವೇದನಾಶೀಲವಾದಂತಹ ಸ್ಪಂದನವಾಗಿದೆ. ಉಚಿತ ಶಿಕ್ಷಣ ಟ್ಯೂಷನ್ ಶುಲ್ಕ ರದ್ದತಿಗೆ ಸೀಮಿತವಲ್ಲ. ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಮೇಲಿನ ವೆಚ್ಚದಿಂದಾಗಿ ಹೆಣ್ಣುಮಕ್ಕಳು ಶಾಲೆ ಬಿಡುವಂತಾದರೆ ಅಥವಾ ತರಗತಿಗಳಿಗೆ ಗೈರುಹಾಜರಾಗುವಂತಾದರೆ ಆಗ ಶಿಕ್ಷಣದ ಹಕ್ಕು ಹೆಣ್ಣುಮಗುವಿಗೆ ಷರತ್ತುಬದ್ಧವಾಗಿಬಿಡುತ್ತದೆ. ಹೀಗಾಗಿ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಒದಗಿಸುವುದೂ ಶಾಸನಬದ್ಧ ಮಧ್ಯಸ್ಥಿಕೆಯಾಗುತ್ತದೆ ಎಂದು ಕೋರ್ಟ್ ವಿಶ್ಲೇಷಿಸಿರುವುದನ್ನು ಸರ್ಕಾರಗಳು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಮುಟ್ಟು ಕುರಿತಾಗಿ ಇರುವ ಮೌಢ್ಯ ಹಾಗೂ ಕೀಳು ಭಾವನೆಗಳನ್ನು ತೊಡೆದು ಹಾಕುವ ವಿಚಾರಕ್ಕೂ ತೀರ್ಪು ಒತ್ತು ನೀಡಿದೆ. ಮುಟ್ಟಿನ ಆರೋಗ್ಯವನ್ನು ಮುಟ್ಟಿನ ನೈರ್ಮಲ್ಯ ಪರಿಕರಗಳ ಸೌಕರ್ಯದಿಂದಾಚೆಗೆ ನೋಡುವುದೂ ಅಗತ್ಯ. ಗಂಡಾಳ್ವಿಕೆಯನ್ನು ತಳಕು ಹಾಕಿಕೊಂಡ ಸಾಮಾಜಿಕ-ಸಾಂಸ್ಕೃತಿಕ ರಚನೆಗಳ ಜೊತೆಗೂ ಇದು ಬೆಸೆದುಕೊಂಡಿದೆ. ಹಲವು ಬಗೆಯ ನಿಷೇಧಗಳು, ತಾರತಮ್ಯಗಳು, ಹೊರಗಿಡುವಿಕೆಗಳ ಸಾಮಾಜಿಕ ಪೂರ್ವಗ್ರಹ, ಸಾಂಸ್ಕೃತಿಕ ನಿಷೇಧಗಳ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮ ನಿರಂತರವಾಗಿರಬೇಕು. ಮುಟ್ಟಿನ ಜೈವಿಕ ವಾಸ್ತವದ ಬಗ್ಗೆ ಗಂಡುಮಕ್ಕಳಲ್ಲಿ ಅರಿವು, ಸಂವೇದನಾಶೀಲತೆ ಮೂಡಿಸಬೇಕಾದುದೂ ಮುಖ್ಯ. ಮುಟ್ಟು ಹಾಗೂ ಪ್ರೌಢಾವಸ್ಥೆ ಕುರಿತ ಪಠ್ಯಗಳ ಅಳವಡಿಕೆಗೆ ಕೋರ್ಟ್ ನೀಡಿರುವ ನಿರ್ದೇಶನಗಳು ಅನುಷ್ಠಾನ ಆಗುವುದು ಅಗತ್ಯ. ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಮುಟ್ಟಿನ ಆರೋಗ್ಯದ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬೇಕಾಗಿ ಬಂದದ್ದು ನಮ್ಮ ಸಾಮಾಜಿಕ ಅಸೂಕ್ಷ್ಮತೆ ಹಾಗೂ ಆಡಳಿತಗಳ ವೈಫಲ್ಯಗಳಿಗೆ ನಿದರ್ಶನ.



# ರಾಮಾಯಣ

ಹನುಮಂತನು ತಾರಾದೇವಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ರಣರಂಗದಲ್ಲಿ ಹಿಮ್ಮೆಟ್ಟದೆ ಯುದ್ಧಮಾಡಿ ಗಾಯಪಡೆದು ರಣಭೂಮಿಯಲ್ಲಿ ಮಲಗಿರುವ ವಾಲಿಯ ಶಯನವನ್ನು ಸೇವಿಸುವುದೇ ನನಗೆ ಯೋಗ್ಯವಾದದ್ದು ಎಂದು ನುಡಿದನು.

## ವಾಲಿಯ ಮರಣ

ಈ ಪ್ರಕಾರ ತಾರಾದೇವಿಯು ಹಂಬಲಿಸುತ್ತಿರಲು ಕಂಠಗತಪ್ರಾಣನಾದ ವಾಲಿಯು ನಿಟ್ಟುಸಿರುಬಿಡುತ್ತ ಅಂಗದನನ್ನು ಕರೆದು. ಅಂಗದ, ನಿನ್ನ ಚಿಕ್ಕಪ್ಪನಾದ ಸುಗ್ರೀವನನ್ನು ನೋಡು ಎಂದು ನುಡಿದು ಸುಗ್ರೀವನನ್ನು ಕರೆದು ಮೆಲ್ಲಗೆ ಹೀಗೆಂದನು ಸುಗ್ರೀವ, ನೀನು ಇನ್ನು ದೋಷಗಳನ್ನೆಣಿಸಬೇಡ. ಮುಂದೆ ಬರಲಿರುವ ದುರ್ದಶೆಯು ನನಗೆ ಬುದ್ಧಿ ಮೋಹವನ್ನುಂಟು ಮಾಡಿತು. ನಾನು ಮಾಡಿದ ಅಕೃತ್ಯದಿಂದ ನನಗೂ ನಿನಗೂ ಒಟ್ಟಿಗೆ ದುಃಖವುಂಟಾಯಿತು. ಲೋಕದಲ್ಲಿ ಅಣ್ಣತಮ್ಮಂದಿರ ಮಿತ್ರತ್ವವೇ ಸ್ಥಿರವಾದದ್ದು. ನಾನು ಇಂದೇ ಯಮನ ಮಂದಿರವನ್ನು ಸೇರುತ್ತೇನೆಂದು ತಿಳಿ. ನೀನು ಒಡನೆ ರಾಜ್ಯಾಧಿಪತ್ಯವನ್ನು ವಹಿಸಿಕೊ. ನಾನು ರಾಜ್ಯಾಧಿಪತ್ಯವನ್ನೂ ಅಪರಿಮಿತವಾದ ಐಶ್ವರ್ಯವನ್ನೂ ಮಹತ್ತಾದ ಕೀರ್ತಿಯನ್ನೂ ನನ್ನ ಜೀವವನ್ನೂ ಬಿಟ್ಟು ಹೋಗುತ್ತಿದ್ದೇನೆ. ಈ ಅವಸ್ಥೆಯಲ್ಲಿ ಒಂದು ಮಾತು ಹೇಳುತ್ತೇನೆ. ಆ ಮಾತು ನಿನಗೆ ಕಠಿಣವಾದರೂ ನಡೆಸುವೆಯೆಂದು ನಂಬಿದ್ದೇನೆ. ಎಂದೂ ದುಃಖವನ್ನರಿಯದ ಬುದ್ಧಿವಂತನಾದ ಅಂಗದಕುಮಾರನು ದುಃಖಾತಿಶಯದಿಂದ ಕಣ್ಣೀರುಬಿಡುತ್ತ ಕಂಗೆಟ್ಟು ಭೂಮಿಯಲ್ಲಿ ಬಿದ್ದಿರುವುದನ್ನು ನೋಡು. ಈ ಕುಮಾರನು ನನ್ನ ಪ್ರಾಣಗಳಿಗಿಂತಲೂ ಅಧಿಕನಾದವನು. ನಾನು ಹೋದ ಮೇಲೆ ಇವನನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗನೆಂದು ರಕ್ಷಿಸು. ಈ ಕುಮಾರನಿಗೆ ನೀನೇ ತಂದೆಯೆಂದು ಭಾವಿಸು. ಅಂಗದನು ನಿನಗೆ ಸಮಾನವಾದ ಪರಾಕ್ರಮವುಳ್ಳವನು. ಈತನಿಗೆ ಅಂಜದಿರುವಂತೆ ಅಭಯವನ್ನು ಕೊಟ್ಟು ರಕ್ಷಿಸಿಕೊಂಡಿರು.

ನಿನಗೆ ರಾಕ್ಷಸರೊಡನೆ ಕದನ ಬಂದಲ್ಲಿ ಈತನು ನಿನಗಿಂತಲೂ ಮೊದಲೇ ಹೋಗಿ ಅವರೊಡನೆ ಯುದ್ಧಮಾಡುವನು. ಈತನು ಮಹಾ ಬಲಶಾಲಿ; ಮಹಾಪರಾಕ್ರಮಿ. ರಣರಂಗದಲ್ಲಿ ನಿನ್ನ ಚಿತ್ತಕ್ಕೆ ಸಂತೋಷವುಂಟಾಗುವಂತೆ ಕಾರ್ಯವನ್ನು ಮಾಡುವನು. ತಾರಾದೇವಿಯು ಸುಷೇಣನ ಮಗಳು. ಇವಳು ಸೂಕ್ಷ್ಮವಾದ ಕಾರ್ಯಗಳನ್ನು ನಿಶ್ಚಯಿಸುವುದರಲ್ಲಿ ನಿಪುಣತೆಯುಳ್ಳವಳು. ದೊಡ್ಡ ಆಪತ್ತು ಬರುವ ಸಮಯದಲ್ಲಿ ಈ ದೇವಿಯು ಯೋಚನೆಮಾಡಿ ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿ ಹೇಳುವಳು. ಆ ಕಾರ್ಯವನ್ನು ಮಾಡುವುದರಿಂದ ಆಪತ್ತು ತೊಲಗುವುದು. ನೀನು ಈ ದೇವಿಯ ವಾಕ್ಯವನ್ನು ಮೀರಬೇಡ. ನೀನಾ ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿಕೊಡದಿದ್ದರೆ ನಿನಗೆ ದೋಷವು ಸಂಭವಿಸುವುದು. ಸುಗ್ರೀವ, ಪೂರ್ವದಲ್ಲಿ ದೇವೇಂದ್ರನು ನನಗೆ ಕೊಟ್ಟ ಸುವರ್ಣಮಯವಾದ ಕಂಠಮಾಲೆಯನ್ನು ಧರಿಸಿಕೊ. ಈ ಕಂಠಮಾಲೆಯಲ್ಲಿ ಐಶ್ವರ್ಯವು ಸ್ಥಿರವಾಗಿರುವುದು ಎಂದು ನುಡಿದನು. ಆಗ ಸುಗ್ರೀವನು ಮನಗರಗಿ ಹರ್ಷಗುಂದಿ ರಾಹು ತುಡುಕಿದ ಚಂದ್ರಮಂಡಲದಂತೆ ಕಾಂತಿಹೀನನಾದನು. ಅವನು ವಾಲಿಯ ಮಾತನ್ನು ಮೀರದೆ ಶಾಂತನಾಗಿ ವಾಲಿಯ ಇಚ್ಛೆಯಂತೆ ಆ ಕಂಠಮಾಲೆಯನ್ನು ತೆಗೆದುಕೊಂಡನು. ಆ ಬಳಿಕ ವಾಲಿಯು, ಪ್ರಾಣಗಳು ಕಂಠಗತವಾಗುತ್ತಿರಲು ಅಂಗದನನ್ನು ಕರೆದು ಈ ರೀತಿ ಹೇಳಿದನು. ಅಂಗದ, ನೀನು ದೇಶಕಾಲಗಳನ್ನರಿತು ಕ್ಷಮೆಯ ತಾಳು. ಸುಖ ದುಃಖಗಳು ಬಂದಲ್ಲಿ ಹಿಗ್ಗದೆಯೂ ಕುಗ್ಗದೆಯೂ ಸುಗ್ರೀವನು ಹೇಳುವಂತೆ ಕೇಳಿಕೊಂಡಿರು.

ಮುಂದುವರಿಯುವುದು...

# ಕಲಾರ್ಪಣ ಒಂದು ವಿಹಂಗಮ ನೋಟ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಕಲೆ ಎನ್ನುವುದು ಸೃಜನಶೀಲತೆ, ಕಲ್ಪನಾಶಕ್ತಿಯ ಸಮನ್ವಯದಿಂದ ಮೂಡುವ ವೈವಿಧ್ಯಮಯ ಸಾಂಸ್ಕೃತಿಕ ಚಟುವಟಿಕೆ. ಭಾವನಾತ್ಮಕ ಶಕ್ತಿ, ಪರಿಕಲ್ಪನಾ ಆಲೋಚನೆಗಳು, ತಾಂತ್ರಿಕ ನೈಪುಣ್ಯ, ಸೌಂದರ್ಯದ ಅಭಿವ್ಯಕ್ತಿಯ ಮೂಲಕ ಕಲೆ ಪ್ರೇಕ್ಷಕರಿಗೆ ವಿಶಿಷ್ಟ ಅನುಭವವನ್ನು ನೀಡುತ್ತದೆ. ಈ ಕಲೆಯೇ ಕೇಂದ್ರಬಿಂದು ಆಗಿರುವ ಕಲಾರ್ಪಣ ಎಂಬ ಶಾಲಾ ವಾರ್ಷಿಕೋತ್ಸವವನ್ನು ಡೆಕ್ಕನ್ ವ್ಯಾಲಿ ಇಂಟರ್‌ನ್ಯಾಷನಲ್ ಶಾಲೆಯು ದಿನಾಂಕ 31-01-2026ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಯೋಜಿಸಿತು. ಇದು ಶಾಲೆಯ ಏಳನೇ ವರ್ಷದ ವಾರ್ಷಿಕೋತ್ಸವವಾಗಿತ್ತು. ಡೆಕ್ಕನ್ ಶಾಲೆಯು ಉನ್ನತಮಟ್ಟದ ವಿದ್ಯಾಭ್ಯಾಸದ ಜೊತೆಗೆ ಮಕ್ಕಳಲ್ಲೂ ಹಾಗೂ ಶಿಕ್ಷಕರಲ್ಲೂ ಅಡಗಿರುವ ಕಲಾತ್ಮಕ ಪ್ರತಿಭೆಯನ್ನು ಹೊರತೆಗೆಯುವ ಉದ್ದೇಶದಿಂದ ಈ ''ಕಲಾರ್ಪಣ'' ಕಾರ್ಯಕ್ರಮವನ್ನು ರೂಪಿಸಿದೆ. ಈ ಪರಿಕಲ್ಪನೆ ಎಷ್ಟು ಸೂಕ್ತವಾಗಿದೆ ಎಂಬುದು ಕಾರ್ಯಕ್ರಮದ ಪ್ರತಿಯೊಂದು ಪ್ರದರ್ಶನದಲ್ಲೂ ಸ್ಪಷ್ಟವಾಗಿ ಕಾಣಿಸಿತು. ಕಾರ್ಯಕ್ರಮದಲ್ಲಿ ನೃತ್ಯ, ಸಂಗೀತ, ಜನಪದ ಕಲೆ, ಆಧುನಿಕ ಕಲೆಯ ಸುಂದರ ಮಿಶ್ರಣವನ್ನು ಕಾಣಬಹುದಾಗಿತ್ತು. ಪುಟ್ಟ ಮಕ್ಕಳ ನಗು, ನೃತ್ಯ ಹಾಗೂ ಉತ್ಸಾಹ ಪೋಷಕರ ಮನ ಗೆದ್ದಿತು. ಕೆಲವು ಹಂತಗಳಲ್ಲಿ ಪೋಷಕರೂ ಮಕ್ಕಳೊಂದಿಗೆ ನೃತ್ಯ ಮಾಡುವ ಮೂಲಕ ಮಕ್ಕಳಾದ ಕ್ಷಣಗಳು ಕಾರ್ಯಕ್ರಮಕ್ಕೆ ವಿಶೇಷ ಕಳೆ ನೀಡಿದವು.

ಈ ಬಾರಿ ವಿಶೇಷವಾಗಿ ಕರ್ನಾಟಕದ ಜನಪದ ಕಲೆಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಕೊಡವ ನೃತ್ಯ, ವೀರಗಾಸೆ, ಡೊಳ್ಳು ಕುಣಿತ, ವೀರಭದ್ರನ ಕುಣಿತ ಮೊದಲಾದ ಪ್ರದರ್ಶನಗಳು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಪೌರಾಣಿಕ ಯುಗದ ಕಿರುನೋಟ ಎಂಬ ನೃತ್ಯರೂಪಕದಲ್ಲಿ ನಮ್ಮ ಹಿಂದೂ ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಮಕ್ಕಳು ಮನಮೋಹಕವಾಗಿ ಪ್ರದರ್ಶಿಸಿದರು. ವಿಷ್ಣುವಿನ ದಶಾವತಾರಗಳನ್ನು ಪುಟಾಣಿಗಳು ನೃತ್ಯ ರೂಪದಲ್ಲಿ ತೋರಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ವಾಲ್ಮೀಕಿ ಮಹರ್ಷಿ ರಚಿಸಿದ ರಾಮಾಯಣದ ಪ್ರಮುಖ ಘಟ್ಟಗಳನ್ನು ವೇದಿಕೆಯ ಮೇಲೆ ಜೀವಂತವಾಗಿ ಮೂಡಿಸಿದುದು ಡೆಕ್ಕನ್ ಶಾಲೆಯ ಮಕ್ಕಳ ಪ್ರತಿಭೆಗೆ ಸಾಕ್ಷಿಯಾಯಿತು.

ಚಂದ್ರಚೂಡ ಶಿವಶಂಕರ ಪಾರ್ವತಿ ರಮಣನೆ ಎಂಬ ಹಾಡಿಗೆ ಮಕ್ಕಳು ಮಾಡಿದ ನೃತ್ಯ ಶಿವ ಪಾರ್ವತಿಯರ ಸಾನ್ನಿಧ್ಯವನ್ನು ವೇದಿಕೆಗೆ ತಂದಂತಿತ್ತು. ಜೀವನದಲ್ಲಿ ನಗು ಮಾತ್ರವಲ್ಲ, ಕೆಲವೊಮ್ಮೆ ಭಯವೂ ಅಗತ್ಯ ಎಂಬ ಸಂದೇಶವನ್ನು horror ನೃತ್ಯದ ಮೂಲಕ ಪ್ರದರ್ಶಿಸಿ ಕೆಲ ಕ್ಷಣ ಕಲಾಭವನವನ್ನು ನಿಶ್ಯಬ್ದಗೊಳಿಸಿದರು. ಭಾರತೀಯ ನಾಟ್ಯಶಾಸ್ತ್ರದಲ್ಲಿ ವಿವರಿಸಲಾದ ನವರಸಗಳು ಪ್ರೀತಿ, ಹಾಸ್ಯ, ಕರುಣೆ, ಕೋಪ, ಶೌರ್ಯ, ಭಯ, ಅಸಹ್ಯ, ಅದ್ಭುತ , ಶಾಂತಿ ಇವೆಲ್ಲವೂ ಒಂದೇ ವೇದಿಕೆಯಲ್ಲಿ ಮೂಡಿಬಂದಿದ್ದು ಪ್ರೇಕ್ಷಕರಿಗೆ ಅಪೂರ್ವ ಅನುಭವವನ್ನು ನೀಡಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ರಾಜೀವ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ಎ. ನಿತಿನ್, ಕೆಪಿಎಸ್‌ಕಾಲೇಜು ಅರಸೀಕೆರೆಯ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದ, ನಿವೃತ್ತ ಪ್ರಾಂಶುಪಾಲರಾದ ಶ್ರೀ ಶಿವಣ್ಣ ಅವರು ಭಾಗವಹಿಸಿದ್ದರು. ಶಾಲೆಯ ಕಾರ್ಯದರ್ಶಿಗಳಾದ ಶ್ರೀಸುನಿಲ್ ಎಚ್.ಎನ್., ಖಜಾಂಚಿಗಳಾದ ಡಾ. ನಿರಂಜನ್ ಸಿ.ಎಂ., ಟ್ರಸ್ಟಿಗಳಾದ ಶ್ರೀಮನ್ಸೂರ್ ಪಾಷಾ, ಹಾಗೂ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಹೇಮಲಕ್ಷ್ಮಿ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಅತಿಥಿಗಳು ಮಾತನಾಡಿ, ಮಕ್ಕಳಲ್ಲಿ ಶಿಸ್ತು, ಸಮಯಪ್ರಜ್ಞೆ, ಪೋಷಕರು ಹಾಗೂ ಗುರುಗಳಿಗೆ ಗೌರವ ನೀಡುವ ಗುಣಗಳನ್ನು ಬೆಳೆಸುವಲ್ಲಿ ಡೆಕ್ಕನ್ ಶಾಲೆಯ ಕಾರ್ಯವೈಖರಿಯನ್ನು ಶ್ಲಾಘಿಸಿದರು. ರೈತರ ಮಕ್ಕಳ ಶಿಕ್ಷಣಕ್ಕೆ ಶಾಲೆಯ ಕೊಡುಗೆ ಶ್ಲಾಘನೀಯವೆಂದು ಹೇಳಿದರು. ಈ ಯಶಸ್ವಿ ಕಾರ್ಯಕ್ರಮಕ್ಕೆ ಶಾಲೆಯ ಶಿಸ್ತು, ನಿಯಮಪಾಲನೆ, ಶಿಕ್ಷಕರ ಸೃಜನಶೀಲತೆ, ಸಮಯಪ್ರಜ್ಞೆ ಹಾಗೂ ಮಕ್ಕಳ ಮತ್ತು ಸಿಬ್ಬಂದಿಯ ಕಠಿಣ ಪರಿಶ್ರಮವೇ ಮುಖ್ಯ ಕಾರಣವೆಂದು ಹೇಳಬಹುದು.

# ಚಪ್ಪಲಿ ಜಾರಬಾರದೆಂದರೆ ಈ ಟಿಪ್ಸ್ ಫಾಲೋ ಮಾಡಿ



ಕೆಲವೊಮ್ಮೆ ನಾವು ನಮ್ಮ ನೆಚ್ಚಿನ ಚಪ್ಪಲಿಗಳನ್ನು ಧರಿಸುವುದನ್ನು ನಿಲ್ಲಿಸುತ್ತೇವೆ ಏಕೆಂದರೆ ಅವುಗಳ ಅಡಿಭಾಗಗಳು ಸವೆದು ಅವು ನೆಲದ ಮೇಲೆ ಜಾರಿಬೀಳಲು ಪ್ರಾರಂಭಿಸುತ್ತವೆ. ಅದು ಒದ್ದೆಯಾದ ಸ್ನಾನಗೃಹದ ನೆಲವಾಗಿರಲಿ, ಮಳೆಗಾಲವಾಗಿರಲಿ, ಸಣ್ಣ ಜಾರುವಿಕೆ ಕೂಡ ಗಂಭೀರ ಗಾಯವನ್ನು ಉಂಟುಮಾಡಬಹುದು. ಆದರೆ ನಿಮ್ಮ ಹಳೆಯ ಚಪ್ಪಲಿಗಳನ್ನು ಮತ್ತೆ ಹೊಸದಾಗಿ ಸುರಕ್ಷಿತವಾಗಿಸಬಹುದು ಎಂದು ನಿಮಗೆ ತಿಳಿದಿದೆಯೇ? ನಿಮ್ಮ ಚಪ್ಪಲಿಗಳನ್ನು ಕೇವಲ 10 ರೂಪಾಯಿಯಲ್ಲಿ ಜಾರದಂತೆ ತಡೆಯುವ ಮನೆಯಲ್ಲಿ ತಯಾರಿಸಿದ ಟ್ರಿಕ್ ಬಗ್ಗೆ ನಾವು ನಿಮಗೆ ಹೇಳುತ್ತೇವೆ.


**ಒಣಗಿದ ನಂತರ ಘರ್ಷಣೆ ಉಂಟುಮಾಡುತ್ತದೆ:** ಕನಿಷ್ಠ 15-20 ನಿಮಿಷಗಳ ಕಾಲ ಒಣಗಲು ಬಿಡಿ. ಉಗುರು ಬಣ್ಣ ಸಂಪೂರ್ಣವಾಗಿ ಒಣಗಿದಾಗ ಮತ್ತು ಗಟ್ಟಿಯಾಗಿದಾಗ, ಅದು ನೆಲದ ಮೇಲೆ ಅಗಾಧವಾದ ಘರ್ಷಣೆಯನ್ನು ಉಂಟುಮಾಡುತ್ತದೆ.

**ಹಂತ-ಹಂತದ ಮಾರ್ಗದರ್ಶಿ:** ಮೊದಲು, ನಿಮ್ಮ ಚಪ್ಪಲಿಗಳನ್ನು ಸೋಪ್, ನೀರಿನಿಂದ ಚೆನ್ನಾಗಿ ತೊಳೆಯಿರಿ. ಅಡಿಭಾಗದಲ್ಲಿ ಯಾವುದೇ ಕೊಳಕು, ಎಣ್ಣೆ ಇಲ್ಲ ಎಂದು ಖಚಿತಪಡಿಸಿಕೊಳ್ಳಿ. ಅವುಗಳನ್ನು ಸಂಪೂರ್ಣವಾಗಿ ಒಣಗಲು ಬಿಡಿ.

**ನೇಲ್ ಪಾಲಿಶ್ ಮ್ಯಾಜಿಕ್ ಹ್ಯಾಕ್; ಇನ್ನು ಜಾರುವಿಕೆ ಇಲ್ಲ:** ನಿಮ್ಮ ಕಾಸ್ಮೆಟಿಕ್ ಬಾಕ್ಸ್‌ನಲ್ಲಿರುವ ನೇಲ್ ಪಾಲಿಶ್ ನಿಮ್ಮ ಜೀವವನ್ನು ಉಳಿಸಬಹುದು ಎಂದು ನೀವು ಬಹುಶಃ ಎಂದಿಗೂ ಊಹಿಸಿರಲಿಲ್ಲ. ಹೌದು, ನೇಲ್ ಪಾಲಿಶ್ ಅನ್ನು ನಿಮ್ಮ ಉಗುರುಗಳನ್ನು ಸುಂದರಗೊಳಿಸಲು ಮಾತ್ರವಲ್ಲದೆ ನಿಮ್ಮ ಚಪ್ಪಲಿಗಳ ಹಿಡಿತವನ್ನು ಹೆಚ್ಚಿಸಲು ಸಹ ಬಳಸಬಹುದು.


**ಇದು ಹೇಗೆ ಕೆಲಸ ಮಾಡುತ್ತದೆ?:** ಉಗುರು ಬಣ್ಣ ಒಣಗಿದ ನಂತರ, ಅದು ಪ್ಲಾಸ್ಟಿಕ್‌ನಂತಹ ಬಿಗಿಯಾದ, ಒರಟಾದ ಪದರವನ್ನು ರೂಪಿಸುತ್ತದೆ. ನೀವು ನಯವಾದ ನೆಲ, ಟೈಲ್‌ಗಳ ಮೇಲೆ ನಡೆಯುವಾಗ, ಈ ಎತ್ತರದ ಚುಕ್ಕೆಗಳು ನೆಲವನ್ನು ದೃಢವಾಗಿ ಹಿಡಿಯುತ್ತವೆ, ಜಾರಿಬೀಳುವ ಅಪಾಯವನ್ನು 100% ರಷ್ಟು ಕಡಿಮೆ ಮಾಡುತ್ತದೆ. ನಿಮ್ಮ ಚಪ್ಪಲಿಗಳು ತುಂಬಾ ಸವೆದಿದ್ದರೆ, ನೀವು ಉಗುರು ಬಣ್ಣಕ್ಕೆ ಬದಲಾಗಿ ಅಂಟು ಗನ್‌ನಿಂದ ಹನಿಗಳನ್ನು ಸಹ ಬಳಸಬಹುದು. ಇದು ಹೆಚ್ಚು ಬಾಳಿಕೆ ಬರುವ ಮತ್ತು ಬಲವಾದ ಹಿಡಿತವನ್ನು ಒದಗಿಸುತ್ತದೆ.

# ಪ್ಯಾನಿಕ್ ಅಟ್ಯಾಕ್ ತಡೆಯುತ್ತಂತೆ ಈ ಸಿಂಪಲ್ ಪೇಪರ್ ಬ್ಯಾಗ್ ಟಿಪ್ಸ್



ಇತ್ತೀಚಿನ ದಿನಗಳಲ್ಲಿ ಆತಂಕ, ಖಿನ್ನತೆ, ಪ್ಯಾನಿಕ್ ಅಟ್ಯಾಕ್ ಪ್ರಕರಣಗಳು ಹೆಚ್ಚುತ್ತಿವೆ. ಯಾವುದೇ ಪರಿಸ್ಥಿತಿ ವ್ಯಕ್ತಿ ಅಥವಾ ವಸ್ತುವಿನಿಂದ ಆತಂಕವನ್ನು ಪ್ರಚೋದಿಸಬಹುದು. ಒಬ್ಬ ವ್ಯಕ್ತಿಯು ಉಸಿರುಗಟ್ಟಿಸುತ್ತಿರುವಂತೆ ಭಾವಿಸಿದಾಗ ಮತ್ತು ಅದೇ ವಿಷಯದ ಬಗ್ಗೆ ಪದೇ ಪದೇ ಯೋಚಿಸುತ್ತಿರುವಾಗ ಆತಂಕ ಉಂಟಾಗುತ್ತದೆ. ಪ್ಯಾನಿಕ್ ಅಟ್ಯಾಕ್ ಎಂದರೆ ಯಾವುದೇ ನಿಜವಾದ ಕಾರಣವಿಲ್ಲದೆ ವ್ಯಕ್ತಿಯು ತೀವ್ರವಾದ ಭಯವನ್ನು ಅನುಭವಿಸುವ ಸ್ಥಿತಿ. ಪ್ಯಾನಿಕ್ ಅಟ್ಯಾಕ್ ಆತಂಕ, ಉಸಿರಾಟದ ತೊಂದರೆಗೆ ಕಾರಣವಾಗಬಹುದು. ಹೆಚ್ಚುವರಿಯಾಗಿ, ಅನೇಕ ಲಕ್ಷಣಗಳು ಹೃದಯಾಘಾತದಂತೆ ಭಾಸವಾಗಬಹುದು. ಅಂತಹ ಪರಿಸ್ಥಿತಿಯಲ್ಲಿ, ಪ್ಯಾನಿಕ್ ಮಾಡಬೇಡಿ, ಸರಳ ಪರಿಹಾರವನ್ನು ಪ್ರಯತ್ನಿಸಿ.

**ಕಾಗದದ ಚೀಲ:** ದೆಹಲಿಯ ಏಮ್ಸ್‌ನ ಸಾಮಾನ್ಯ ವೈದ್ಯ ಮತ್ತು ನರರೋಗ ತಜ್ಞೆ ಡಾ. ಪ್ರಿಯಾಂಕಾ ಸೆಹ್ರಾವತ್, ಯಾರಾದರೂ ಆಗಾಗ್ಗೆ ಪ್ಯಾನಿಕ್ ಅಟ್ಯಾಕ್‌ಗಳನ್ನು ಅನುಭವಿಸಿದರೆ, ಸರಳವಾದ ಕಾಗದದ ಚೀಲವು ತುಂಬಾ ಉಪಯುಕ್ತವಾಗಿದೆ ಎಂದು ವಿವರಿಸುವ ವಿಡಿಯೋವನ್ನು ಹಂಚಿಕೊಂಡಿದ್ದಾರೆ.



**ಪ್ಯಾನಿಕ್ ಅಟ್ಯಾಕ್ ಸಮಯದಲ್ಲಿ ಏನಾಗುತ್ತದೆ?:** ಒಬ್ಬ ವ್ಯಕ್ತಿಯು ಪ್ಯಾನಿಕ್ ಅಟ್ಯಾಕ್ ಅನ್ನು ಅನುಭವಿಸಿದಾಗ, ಅವರು ಬಹಳ ವೇಗವಾಗಿ ಉಸಿರಾಡಲು ಪ್ರಾರಂಭಿಸುತ್ತಾರೆ. ಈ ಪರಿಸ್ಥಿತಿಯಲ್ಲಿ, ರಕ್ತದಲ್ಲಿ ಇರುವ ಹೆಚ್ಚಿನ ಪ್ರಮಾಣದ ಇಂಗಾಲದ ಡೈಆಕ್ಸೈಡ್ ಶ್ವಾಸಕೋಶದ ಮೂಲಕ ಬಿಡುಗಡೆಯಾಗುತ್ತದೆ. ಇದು ದೇಹದ pH ಸಮತೋಲನವನ್ನು ಅಡ್ಡಿಪಡಿಸುತ್ತದೆ. ಆತಂಕ, ತ್ವರಿತ ಹೃದಯ ಬಡಿತ, ಎದೆ ಅಥವಾ ದೇಹದ ಇತರ ಭಾಗಗಳಲ್ಲಿ ಬಿಗಿತ, ಎದೆಯಲ್ಲಿ ಭಾರ, ಎದೆಯ ಒಂದು ಬದಿಯಲ್ಲಿರುವ ಭುಜದ ಸ್ನಾಯುಗಳಲ್ಲಿ ನೋವು ಮುಂತಾದ ಲಕ್ಷಣಗಳಲ್ಲಿ ಈ ಬದಲಾವಣೆಯು ಸ್ಪಷ್ಟವಾಗಿ ಕಂಡುಬರುತ್ತದೆ.

**ಪೇಪರ್ ಬ್ಯಾಗ್ ಅಥವಾ ಪೌಚ್ ಹೇಗೆ ಸಹಾಯ ಮಾಡುತ್ತದೆ?:** ಖಿನ್ನತೆ, ಆತಂಕ ಅಥವಾ ಪ್ಯಾನಿಕ್ ಅಟ್ಯಾಕ್ ಸಮಯದಲ್ಲಿ ಯಾರಾದರೂ ಈ ಲಕ್ಷಣಗಳನ್ನು ಅನುಭವಿಸಿದರೆ, ಪೇಪರ್ ಬ್ಯಾಗ್‌ಸಹಾಯಕ ಆಗಬಹುದು. ನೀವು ಯಾವುದೇ ಪೇಪರ್ ಬ್ಯಾಗ್‌ಅನ್ನು ಹೊಂದಿರಬಹುದು. ವ್ಯಕ್ತಿಯು ಮಾಡಬೇಕಾಗಿರುವುದು ಪೇಪರ್ ಬ್ಯಾಗ್‌ನಿಂದ ತಮ್ಮ ಮೂಗು ಮತ್ತು ಬಾಯಿಯನ್ನು ಮುಚ್ಚಿ ಬಿಗಿಯಾಗಿ ಮುಚ್ಚುವುದು. ನಂತರ, ಆರರಿಂದ ಹತ್ತು ಬಾರಿ ನಿಧಾನವಾಗಿ ಉಸಿರಾಡಿ ಮತ್ತು ಬಿಡಿ.

**ಆತಂಕ ಮತ್ತು ಪ್ಯಾನಿಕ್ ಅಟ್ಯಾಕ್‌ಗಳನ್ನು ತಡೆಯುವುದು ಹೇಗೆ?:** ಕಾರ್ಬನ್ ಡೈಆಕ್ಸೈಡ್ ದೇಹದಿಂದ ಹೊರಹೋಗುವುದನ್ನು ತಡೆಯಲು ಪೇಪರ್ ಬ್ಯಾಗ್ ಸಹಾಯ ಮಾಡುತ್ತದೆ. ದೇಹದಲ್ಲಿ ಇಂಗಾಲದ ಡೈಆಕ್ಸೈಡ್ ಉಳಿದು ರಕ್ತದಲ್ಲಿನ ಅದರ ಮಟ್ಟವು ಸಾಮಾನ್ಯ ಸ್ಥಿತಿಗೆ ಮರಳಿದರೆ, ರಕ್ತದ pH ಸಾಮಾನ್ಯ ಸ್ಥಿತಿಗೆ ಮರಳುತ್ತದೆ ಮತ್ತು ಕೆಲವು ನಿಮಿಷಗಳಲ್ಲಿ ಅದರ ಲಕ್ಷಣಗಳು ಕಣ್ಮರೆಯಾಗುತ್ತವೆ.

**ಪದೇ ಪದೇ ಹೀಗಾಗುತ್ತಿದ್ದರೆ ಏನು ಮಾಡಬೇಕು:** ಒಬ್ಬ ವ್ಯಕ್ತಿಯು ಆಗಾಗ್ಗೆ ಪ್ಯಾನಿಕ್ ಅಟ್ಯಾಕ್‌ಗಳನ್ನು ಅನುಭವಿಸಿದರೆ, ಮನೋವೈದ್ಯರು ಅಥವಾ ಮನಶ್ಶಾಸ್ತ್ರಜ್ಞರನ್ನು ಸಂಪರ್ಕಿಸುವುದು ಉತ್ತಮ ಎಂದು ಡಾ. ಸೆಹ್ರಾವತ್ ಹೇಳುತ್ತಾರೆ. ಈ ಸಮಸ್ಯೆಯನ್ನು ಪರಿಹರಿಸಲು ಯಾವ ಔಷಧಿ-ಸಂಬಂಧಿತ ಮತ್ತು ಔಷಧಿ-ಸಂಬಂಧಿತವಲ್ಲದ ಜೀವನಶೈಲಿಯ ಬದಲಾವಣೆಗಳು ಅಗತ್ಯವೆಂದು ನಿರ್ಧರಿಸಲು ಇದು ಅವರಿಗೆ ಸಹಾಯ ಮಾಡುತ್ತದೆ.



# ನೇರಳೆ ಬಣ್ಣದ ಜೇನುತುಪ್ಪವನ್ನು ನೀವು ನೋಡಿದ್ದೀರಾ?


ಆಯುರ್ವೇದದ ಪ್ರಕಾರ ಜೇನುತುಪ್ಪಕ್ಕೆ ಅದರದ್ದೇ ಆದ ಪ್ರಾಮುಖ್ಯತೆ ಇದೆ. ಜೇನುತುಪ್ಪವು ಅದರ ಹಲವಾರು ಆರೋಗ್ಯ ಪ್ರಯೋಜನಗಳಿಗೆ ಹೆಸರುವಾಸಿಯಾಗಿದೆ. ಜೇನುತುಪ್ಪವು ಸಾಕಷ್ಟು ಆಂತರಿಕ ಮತ್ತು ಬಾಹ್ಯ ಉಪಯೋಗಗಳನ್ನು ಹೊಂದಿದೆ. ಈ ಕಿತ್ತಳೆ-ಕಪ್ಪು ಕಂದು ಬಣ್ಣದ ಜೇನುತುಪ್ಪವು ಗಂಟಲು ಕಟ್ಟುವಿಕೆ, ಕಫ, ಬಿಕ್ಕಳಿಕೆ, ಆಸ್ತಮಾ, ಅತಿಸಾರ, ಗಾಯ ಗುಣಪಡಿಸುವಿಕೆ ಮತ್ತು ಇತರ ಕಾಯಿಲೆಗಳಿಗೆ ಅತ್ಯಂತ ಪರಿಣಾಮಕಾರಿಯಾಗಿದೆ. ನಾವು ಸಾಮಾನ್ಯ ಜೇನುತುಪ್ಪದ ಬಗ್ಗೆ ತಿಳಿದಿದ್ದರೂ, ನೀವು ಎಂದಾದರೂ ನೇರಳೆ ಜೇನುತುಪ್ಪದ ಬಗ್ಗೆ ಕೇಳಿದ್ದೀರಾ? ಉತ್ತರ ಕೆರೊಲಿನಾ ಫೆಬ್ರವರಿ 2023ರಲ್ಲಿ ನೇರಳೆ ಜೇನುತುಪ್ಪದ ಜಾರ್ ಗಮನ ಸೆಳೆಯಿತು. ಈ ಬಗ್ಗೆ ಇನ್ನಷ್ಟು ತಿಳಿಯೋಣ.

**ನೇರಳೆ ಜೇನುತುಪ್ಪ ಎಂದರೇನು?:** ಅನನ್ಯ ಮಕರಂದದ ಚಿತ್ರವನ್ನು ಈಗ ಟ್ವಿಟರ್‌ನಲ್ಲಿ ಹಂಚಿಕೊಳ್ಳಲಾಗಿದೆ ಫಿ, ಮತ್ತು ಗಾಜಿನ ಜಾರ್‌ನಲ್ಲಿರುವ ಗಾಢ ನೇರಳೆ ದ್ರವವು ಎಲ್ಲರ ಗಮನ ಸೆಳೆದಿದೆ. ಸಾಮಾಜಿಕ ಮಾಧ್ಯಮ ವರದಿಗಳ ಮೂಲಕ ನೋಡಿದರೆ, ಇದು ಜೇನುನೊಣಗಳು ಅದನ್ನು ಸೃಷ್ಟಿಸುವ ಉತ್ತರ ಕೆರೊಲಿನಾದ ಸ್ಯಾಂಡ್‌ಹಿಲ್ಸ್‌ನಿಂದ ಬಂದ ವಿಶೇಷ ಆವಿಷ್ಕಾರವಾಗಿದೆ. ಉತ್ತರ ಕೆರೊಲಿನಾದ ಸ್ಯಾಂಡ್‌ಹಿಲ್ಸ್‌ನಲ್ಲಿ, ಜೇನುನೊಣಗಳು ನೇರಳೆ ಜೇನುತುಪ್ಪವನ್ನು ಉತ್ಪಾದಿಸುತ್ತವೆ. ಈ ಬಗ್ಗೆ ಟ್ವೀಟ್ ಅನ್ನು @jimrosecircus1 ಹ್ಯಾಂಡಲ್ ಪೋಸ್ಟ್ ಮಾಡಿದೆ. ಟ್ವೀಟ್ ವೈರಲ್ ಆದ ನಂತರ, ರಾಜ್ಯದ ನೈಸರ್ಗಿಕ, ಸಾಂಸ್ಕೃತಿಕ ಸಂಪನ್ಮೂಲ ಇಲಾಖೆಯು ಈ ಸವಿಯಾದ ಪದಾರ್ಥವು ಜೇನುಸಾಕಣೆದಾರರು, ವಿಜ್ಞಾನಿಗಳನ್ನು ಒಂದೇ ರೀತಿ ಆಕರ್ಷಿಸುತ್ತಿದೆ ಎಂದು ಕಾಮೆಂಟ್ ಮಾಡಿದೆ.

**ಜೇನುತುಪ್ಪ ಏಕೆ ನೇರಳೆ ಬಣ್ಣದಲ್ಲಿ ಕಾಣುತ್ತದೆ?:** ಬಿಬಿಸಿ ವರದಿಯ ಪ್ರಕಾರ, ಇಲ್ಲಿಯವರೆಗೆ ಯಾವುದೇ ದೇಶವು ನೇರಳೆ ಜೇನುತುಪ್ಪಕ್ಕೆ ಕಾರಣವನ್ನು ಭೇದಿಸಲು ಸಾಧ್ಯವಾಗಿಲ್ಲ. ತಜ್ಞರ ಪ್ರಕಾರ, ಮಣ್ಣಿನ ಕ್ಷಾರೀಯತೆಯು ಜೇನುತುಪ್ಪದ ಬಣ್ಣವನ್ನು ನೀಲಿ ಬಣ್ಣದಿಂದ ಗುಲಾಬಿ ಬಣ್ಣಕ್ಕೆ ಬದಲಾಯಿಸುತ್ತದೆ ಎಂಬ ಊಹಾಪೋಹಗಳಿವೆ. ಅದು ಜೇನುನೊಣದ ಪ್ರದೇಶವನ್ನು ಸುತ್ತುವರೆದಿರುವ ಕಾಡು ಹಣ್ಣುಗಳು, ಸ್ಥಳೀಯರಲ್ಲಿ ಚರ್ಚೆಯನ್ನು ಹುಟ್ಟುಹಾಕುವ, ಇದು ಆಕ್ರಮಣಕಾರಿ ಕುಡ್ಜು ಬಳ್ಳಿಯ ಆಳವಾದ ನೇರಳೆ ಹೂವು. ಇತರ ಕೆಲವು ತಜ್ಞರ ಪ್ರಕಾರ, ಬಣ್ಣವು ಅಲ್ಯೂಮಿನಿಯಂ-ಸಮೃದ್ಧ ಮಕರಂದ ಅಥವಾ ಹುಳಿ ಮರದ ಸಸ್ಯಗಳ ಹೂವನ್ನು ತಿನ್ನುವ ಜೇನುನೊಣಗಳ ಪರಿಣಾಮವಾಗಿದೆ, ಆದರೆ ಇತರರು ಇದು ಕುಡ್ಜು ಮರದಿಂದ ಬರುತ್ತದೆ ಎಂದು ನಂಬುತ್ತಾರೆ.

**ಜೇನುತುಪ್ಪದ ವಿಧಗಳು:** ಭಾರತೀಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಜೇನುತುಪ್ಪದ ಸಾಮಾನ್ಯ ವಿಧಗಳ ಬಗ್ಗೆ ಹೇಳುವುದಾದರೆ, ಅದು ಕ್ಲೋವರ್, ಬಕ್‌ವೀಟ್, ಅಕೇಶಿಯ, ಮನುಕಾ, ವೈಲ್ಡ್‌ಫ್ಲವರ್, ಅಲ್ಫಾಲ್ಫಾ, ನೀಲಗಿರಿ, ಸೇಜ್, ಲ್ಯಾವೆಂಡರ್, ರೋಸ್ಮರಿ, ಜಾಮು, ಹುಳಿಮರ, ಲಿಂಡೆನ್, ಬ್ಲೂಬೆರ್ರಿ ಮತ್ತು ಆವಕಾಡೊಗಳನ್ನು ಒಳಗೊಂಡಿದೆ.

# ಕಣ್ಣಿನ ಕೆಳಗೆ ಕಪ್ಪು ಕಲೆಗಳು ಕಾಣಿಸಿಕೊಂಡರೆ ಡಾರ್ಕ್ ಸರ್ಕಲ್ ಎಂದು ನೆಗ್ಲೆಕ್ಟ್ ಮಾಡಬೇಡಿ




**ಲಿವರ್ ಹಾನಿ ಆದರೂ ಹೀಗಾಗುತ್ತದೆ**

ಮನುಷ್ಯನ ದೇಹದಲ್ಲಿ ಅತ್ಯಂತ ಸೂಕ್ಷ್ಮವಾದ ಅಂಗಾಂಗಗಳಲ್ಲಿ ನಮ್ಮ ಎರಡೂ ಕಣ್ಣುಗಳು ಕೂಡ ಒಂದು. ಅದರಲ್ಲೂ ಕಣ್ಣುಗಳ ಕೆಳಭಾಗದಲ್ಲಿ ಚರ್ಮ ಹೆಚ್ಚು ಸೂಕ್ಷ್ಮವಾಗಿರುತ್ತದೆ. ಹೀಗಾಗಿ ಮುಖದಲ್ಲಿ ಸುಕ್ಕು ಕಾಣಿಸಿಕೊಂಡರೆ ಅದು ಮೊದಲು ಗೋಚರಿಸುವುದು ಕಣ್ಣುಗಳ ಕೆಳ ಭಾಗದಲ್ಲಿ ಇದನ್ನು ಡಾರ್ಕ್ ಸರ್ಕಲ್ ಸಮಸ್ಯೆ ಎನ್ನಲಾಗುತ್ತದೆ.

**ಕಣ್ಣುಗಳ ಕೆಳಗೆ ಕಪ್ಪು ವೃತ್ತಗಳು ಅಥವಾ ಡಾರ್ಕ್ ಸರ್ಕಲ್:** ಇಂದಿನ ದಿನಗಳಲ್ಲಿ ಕಣ್ಣುಗಳ ಕೆಳಗೆ ಕಪ್ಪು ವೃತ್ತಗಳು, ಡಾರ್ಕ್ ಸರ್ಕಲ್ ಸಾಮಾನ್ಯ ಸಮಸ್ಯೆಯಾಗಿ ಮಾರ್ಪಟ್ಟಿವೆ. ಇದಕ್ಕೆಲ್ಲಾ ಪ್ರಮುಖ ಕಾರಣ ಸರಿಯಾಗಿ ನಿದ್ದೆ ಮಾಡದಿರುವುದು, ಹೆಚ್ಚಾಗಿ ಮೊಬೈಲ್‌ನಲ್ಲಿ ಸಮಯ ಕಳೆಯುತ್ತಿರುವುದು, ಅತಿಯಾದ ಕಣ್ಣಿನಲ್ಲಿ ಕಾಣಿಸಿಕೊಳ್ಳುವ ಆಯಾಸ,ಹೀಗೆ ಹಲವಾರು ಕಾರಣ ಗಳಿಂದಾಗಿ ಕಣ್ಣಿನಲ್ಲಿ ಡಾರ್ಕ್ ಸರ್ಕಲ್ ಅಥವಾ ಕಪ್ಪು ವೃತ್ತಗಳು ಕಾಣಿಸಿ ಕೊಳ್ಳುತ್ತವೆ. ಆದರೆ ಇವೆಲ್ಲಾ ಸಮಸ್ಯೆಗಳು ತಾತ್ಕಾಲಿಕ! ಕೆಲವೊಂದು ಮನೆಮದ್ದುಗಳನ್ನು ಅನುಸರಿಸಿಕೊಂಡು ಹೋಗುವುದರ ಮೂಲಕ ಇದಕ್ಕೆಲ್ಲಾ ಪರಿಹಾರ ಕಂಡು ಕೊಳ್ಳಬಹುದು. ಆದರೆ ಈ ಸಮಸ್ಯೆ ದೀರ್ಘಕಾಲದವರೆಗೆ ಇದ್ದರೆ, ಸ್ವಲ್ಪ ಹುಷಾರು ಕೆಲವೊಮ್ಮೆ ಫ್ಯಾಟಿ ಲಿವರ್ ಸಮಸ್ಯೆ ಕಾಣಿಸಿಕೊಂಡಾಗಲೂ ಕೂಡ ಈ ರೀತಿಯ ಸಮಸ್ಯೆ ಕಾಣಿಸಿಕೊಳ್ಳುತ್ತದೆಯಂತೆ. ಈಗಾಗಲೇ ಹೇಳಿದ ಹಾಗೆ ದೀರ್ಘಕಾಲದ ಆಯಾಸ, ನಿದ್ರೆಯ ಕೊರತೆ ಮತ್ತು ದೇಹದಲ್ಲಿ ವಿಷಕಾರಿ ಅಂಶಗಳು ಸಂಗ್ರಹವಾಗುವುದರಿಂದ ಕಣ್ಣುಗಳ ಕೆಳಗೆ ಕಪ್ಪು ವರ್ತುಲಗಳು ಡಾರ್ಕ್ ಸರ್ಕಲ್ ಅಥವಾ ಕಪ್ಪು ವೃತ್ತಗಳು ಉಂಟಾಗಬಹುದು. ಒಂದು ವೇಳೆ ರಾತ್ರಿ ಚೆನ್ನಾಗಿ ನಿದ್ರೆ ಮಾಡಿದರೂ ಕಪ್ಪು ವರ್ತುಲಗಳು ಕಡಿಮೆಯಾಗದಿದ್ದರೆ, ಅದು ಯಕೃತ್ತಿನ ಸಮಸ್ಯೆಯ ಸಂಕೇತವಾಗಿರಬಹುದು.

**ಈ ಬಗ್ಗೆ ವೈದ್ಯರು ಹೇಳುವುದೇನು?:** ಸರಿಯಾಗಿ ನಿದ್ರೆ ಮಾಡಿದ ನಂತರವೂ ಕಪ್ಪು ವರ್ತುಲಗಳು, ಡಾರ್ಕ್ ಸರ್ಕಲ್‌ಗಳು ಕಡಿಮೆಯಾಗದಿದ್ದರೆ, ಅದು ಯಕೃತ್ತಿನ ಸಮಸ್ಯೆಗೆ ಕಾರಣವಾಗಿರ ಬಹುದು. ದೇಹದಿಂದ ವಿಷಕಾರಿ ಅಂಶವನ್ನು ತೆಗೆದುಹಾಕುವಲ್ಲಿ ಯಕೃತ್ತು ದಿನದ 24 ಗಂಟೆಯೂ ಕೂಡ ಕಾರ್ಯ ನಿರ್ವಹಿಸುತ್ತದೆ. ಒಂದು ವೇಳೆ ಯಕೃತ್ತು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ, ದೇಹದಲ್ಲಿ ಬೇಡದ ತ್ಯಾಜ್ಯ ಸಂಗ್ರಹಕ್ಕೆ ಕಾರಣವಾಗಬಹುದು, ಜೊತೆಗೆ ಆಯಾಸವೂ ಕೂಡ ಹೆಚ್ಚಾಗಬಹುದುಮತ್ತು ರಕ್ತ ಪರಿಚಲನೆಯ ಮೇಲೆ ಪರಿಣಾಮ ಬೀರುತ್ತದೆ. ಕೊನೆಗೆ ಇದು ಕಣ್ಣುಗಳ ಕೆಳಗೆ ಕಪ್ಪು ವರ್ತುಲ ಗಳಿಗೆ, ಡಾರ್ಕ್ ಸರ್ಕಲ್ ಸಮಸ್ಯೆಗ ಕಾರಣವಾಗಬಹುದು ಎನ್ನುತ್ತಾರೆ ಡಾ. ರಾಜೇಶ್ ಪದಾನ್ ಹಿರಿಯ ಗ್ಯಾಸ್ಟ್ರೋಎಂಟರಾಲಜಿಸ್ಟ್, ಹೆಪಟಾಲಜಿಸ್ಟ್

**ಯಕೃತ್ತು, ಕಪ್ಪು ವರ್ತುಲಗಳ ನಡುವೆ ಇರುವ ಸಂಬಂಧ:** ಯಕೃತ್ತು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ ಅಥವಾ ಅತಿಯಾದ ಒತ್ತಡದಲ್ಲಿದ್ದಾಗ, ಅದರ ಪರಿಣಾಮಗಳು ಮುಖದ ಮೇಲೆ ಗೋಚರಿಸುತ್ತವೆ. ಮೊದಲೇ ಹೇಳಿದ ಹಾಗೆ ದೇಹದಿಂದ ವಿಷಕಾರಿ ಅಂಶವನ್ನು ತೆಗೆದುಹಾಕುವುದು ಯಕೃತ್ತಿನ ಕೆಲಸ. ಆದರೆ ನಮ್ಮ ಅನಾರೋಗ್ಯ ಆಹಾರ ಪದ್ಧತಿ, ಜಡ ಜೀವನಶೈಲಿ, ಹೆಚ್ಚು ಮದ್ಯ ಪಾನ ಮಾಡಿದರೆ, ಸಾಕಷ್ಟು ನಿದ್ರೆ ಮಾಡದಿದ್ದರೆ, ಯಕೃತ್ತು ತಮ್ಮ ಕಾರ್ಯವೈಕರ್ಯವನ್ನು ನಿಧಾನಗೊಳಿಸಬಹುದು, ಇದರಿಂದ ಕಣ್ಣುಗಳ ಕಾಂತಿ ಕಡಿಮೆ ಆಗುವುದರ ಜೊತೆಗೆ ಕಣ್ಣುಗಳ ಕೆಳಗೆ ಕಪ್ಪು ವರ್ತುಲಗಳು ಹೆಚ್ಚು ಗೋಚರಿಸಲು ಶುರುವಾಗುತ್ತದೆ.



ಹಾಗಂತ ಲಿವರ್ ನಲ್ಲಿ ಸಮಸ್ಯೆ ಕಾಣಿಸಿಕೊಂಡಾಗ ಡಾರ್ಕ್ ಸರ್ಕಲ್ ಅಥವಾ ಕಪ್ಪು ವೃತ್ತಗಳು ಮಾತ್ರ ಕಾಣಿಸಿಕೊಳ್ಳುವುದಿಲ್ಲ, ನಮ್ಮಲ್ಲಿ ಬಹುತೇಕರಿಗೆ ಆನುವಂಶಿಕತೆ, ಸ್ಕ್ರೀನ್ ಸಮಯ, ಆಯಾಸ ಮತ್ತು ನೀರಿನ ಕೊರತೆ ಸೇರಿದಂತೆ ಇತರ ಅಂಶಗಳು ಇದಕ್ಕೆ ಕಾರಣವಾಗುತ್ತವೆ.

ಡಾರ್ಕ್ ಸರ್ಕಲ್ ಸಾಮಾನ್ಯವೇ ಅಥವಾ ಯಕೃತ್ತಿನ ಕಾಯಿಲೆಗೆ ಸಂಬಂಧಿಸಿವೆಯೇ ಎಂದು ಹೇಗೆ ಹೇಳುವುದು ಡಾರ್ಕ್ ಸರ್ಕಲ್ ಸಾಮಾನ್ಯವೇ ಅಥವಾ ಯಕೃತ್ತಿನ ಕಾಯಿಲೆಗೆ ಸಂಬಂಧಿಸಿವೆಯೇ ಎಂದು ಹೇಗೆ ಹೇಳುವುದು? ಇದನ್ನು ಯಾವಾಗಲೂ ಹೇಳುವುದು ಸುಲಭವಲ್ಲ. ಆದಾಗ್ಯೂ, ಡಾರ್ಕ್ ಸರ್ಕಲ್ ಯಕೃತ್ತಿನ ಕಾಯಿಲೆಗೆ ಸಂಬಂಧಿಸಿದ್ದರೆ, ಅವು ಮಂದ ಹೊಳಪು, ಕಣ್ಣುಗಳ ಕೆಳಗೆ ಊತ ಅಥವಾ ಸ್ವಲ್ಪ ಹಳದಿ ಬಣ್ಣದಂತಹ ಇತರ ಲಕ್ಷಣಗಳೊಂದಿಗೆ ಇರಬಹುದು.

ನಿಮಗೆ ಆಗಾಗ್ಗೆ ಆಯಾಸ, ದೇಹದಲ್ಲಿ ಶಕ್ತಿ ಕಡಿಮೆ ಆಗುವುದು, ಜೀರ್ಣಕಾರಿ ಸಮಸ್ಯೆಗಳನ್ನು ಸಹ ಅನುಭವಿಸಬಹುದು. ಮತ್ತೊಂದೆಡೆ, ಸಾಮಾನ್ಯ ಕಪ್ಪು ವರ್ತುಲಗಳು ಸಾಮಾನ್ಯ ವಾಗಿ ಕಣ್ಣುಗಳ ಸುತ್ತ ಮಾತ್ರ ಸಂಭವಿಸುತ್ತವೆ ಮತ್ತು ಸರಿಯಾದ ನಿದ್ರೆ, ಸಾಕಷ್ಟು ನೀರು ಕುಡಿಯುವುದು ಮತ್ತು ಕಣ್ಣಿನ ಕೆಳಗಿರುವ ಆರೈಕೆಯಿಂದ ಕ್ರಮೇಣ ಕಡಿಮೆಯಾ ಗಬಹುದು.

> **ಡಾರ್ಕ್ ಸರ್ಕಲ್ ಕಡಿಮೆ ಮಾಡುವುದು ಹೇಗೆ?**
>
> **ಡಾರ್ಕ್ ಸರ್ಕಲ್‌ಗಳನ್ನು ಕಡಿಮೆ ಮಾಡುವ ಮೊದಲ ಹೆಜ್ಜೆ ಅವುಗಳ ಕಾರಣ ಗಳನ್ನು ಅರ್ಥಮಾಡಿಕೊಳ್ಳುವುದು. ಈ ಡಾರ್ಕ್ ಸರ್ಕಲ್ ವರ್ಣ ದ್ರವ್ಯದಿಂದ ಉಂಟಾಗಿದ್ದರೆ, ನೀವು ವಿಟಮಿನ್ ಸಿ, ನಿಯಾಸಿನಮೈಡ್, ಕೋಜಿಕ್ ಆಮ್ಲ ಅಥವಾ ಕೆಫೀನ್ ಹೊಂದಿರುವ ಕಣ್ಣಿನ ಕ್ರೀಮ್‌ಗಳನ್ನು ಬಳಸಬಹುದು. ಅಲ್ಲದೆ, ನಿಮ್ಮ ದೈನಂದಿನ ಅಭ್ಯಾಸಗಳ ಬಗ್ಗೆ ಗಮನ ಕೊಡಿ. ಚೆನ್ನಾಗಿ ನಿದ್ರೆ ಮಾಡಿ, ಸಾಕಷ್ಟು ನೀರು ಕುಡಿಯಿರಿ, ಸನ್‌ಸ್ಕ್ರೀನ್ ಹಚ್ಚಿಕೊಂಡು, ಕಣ್ಣುಗಳ ಕೆಳಗೆ ನಿಧಾನವಾಗಿ ಮಸಾಜ್ ಮಾಡಿ, ಮೊಬೈಲ್ ನೋಡುವ ಸಮಯವನ್ನು ಮಿತಗೊಳಿಸಿ**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಕೋಪದ ಬಡಿದೆಬ್ಬಿಸುವಿಕೆ ವಾದ ಮತ್ತು ಘರ್ಷಣೆಗೆ ಕಾರಣವಾಗಬಹುದು. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು.

**ವೃಷಭ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ನೀವು ನಿಮ್ಮ ಹಣವನ್ನು ಧಾರ್ಮಿಕ ಚಟುವಟಿಕೆಗಳಲ್ಲಿ ಹೂಡಿಕೆ ಮಾಡಬಹುದು, ಇದರಿಂದ ಮಾನಸಿಕ ಶಾಂತಿಯನ್ನು ಪಡೆಯುವ ಸಾಧ್ಯತೆ ಇದೆ.

**ಮಿಥುನ** ಪ್ರೀತಿ ದೇವರ ಪೂಜೆಗೆ ಪರ್ಯಾಯವಾಗಿದೆ; ಇದು ಅತ್ಯಂತ ಆಧ್ಯಾತ್ಮಿಕವೂ ಹಾಗೂ ಧಾರ್ಮಿಕವೂ ಆಗಿದೆ. ನೀವು ಇದನ್ನು ತಿಳಿಯುತ್ತೀರಿ. ನೀವು ಬಹಳಷ್ಟು ಸಾಧಿಸುವ ಸಾಮರ್ಥ್ಯ ಹೊಂದಿದ್ದೀರಿ.

**ಕರ್ಕಾಟಕ** ನೀವು ಹೆಚ್ಚು ಪ್ರಯತ್ನ ಮಾಡಬೇಕಾಗಿ ಬಂದರೂ ಕೂಡ ಮಕ್ಕಳ ಸಂಗದಲ್ಲಿ ಬಿಡುವಿನ ಸಮಯ ಕಳೆಯಲು ಪ್ರಯತ್ನಿಸಬೇಕು. ಯಾರಾದರೂ ಹೆಸರು ಕೆಡಿಸಲು ಪ್ರಯತ್ನಿಸಬಹುದದ್ದರಿಂದ ಜಾಗರೂಕರಾಗಿರಿ.

**ಸಿಂಹ** ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಹಣದ ತುಂಬಾ ಅಗತ್ಯವಿರಬಹುದು ಮತ್ತು ಜೀವನದಲ್ಲಿ ಹಣದ ಏನು ಮೌಲ್ಯವಿದೆ ಎಂದು ನಿಮಗೆ ಅರ್ಥವಾಗಬಹುದು.

**ಕನ್ಯಾ** ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ನಿಮ್ಮ ಸಂಗಾತಿಯ ಆರೋಗ್ಯ ಒತ್ತಡ ಮತ್ತು ಆತಂಕಕ್ಕೆ ಕಾರಣವಾಗಬಹುದು.

**ತುಲಾ** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು,

**ವೃಶ್ಚಿಕ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆಕ್ರಮಿಸಿಕೊಳ್ಳಲು ಬಿಡಬೇಡಿ. ಶಾಂತವಾಗಿ ಮತ್ತು ಒತ್ತಡ ಮುಕ್ತವಾಗಿ ಉಳಿಯಲು ಪ್ರಯತ್ನಿಸಿ ಹಾಗೂ ಅದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ.

**ಧನಸ್ಸು** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಈ ರಾಶಿಚಕ್ರದ ದೊಡ್ಡ ಉದ್ಯಮಿಗಳು ಇಂದು ತುಂಬಾ ಯೋಚಿಸಿ ಅರ್ಥಮಾಡಿಕೊಂಡು ಹಣದ ಹೂಡಿಕೆ ಮಾಡುವ ಅಗತ್ಯವಿದೆ.

**ಮಕರ** ನಿಮ್ಮ ಸಂಗಾತಿಯ ಆರೋಗ್ಯದ ಚಿಂತೆ ಉಂಟುಮಾಡಬಹುದು ಮತ್ತು ಸ್ವಲ್ಪ ವೈದ್ಯಕೀಯ ಗಮನದ ಅಗತ್ಯವಿದೆ. ನಿಮ್ಮ ಪ್ರೇಮ ಜೀವನ ಶರದೃತುವಿನಲ್ಲಿನ ಮರದ ಎಲೆಯಂತಿರುತ್ತದೆ.

**ಕುಂಭ** ಅನಂತ ಚೈತನ್ಯ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ.

**ಮೀನ** ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು.

### ● ಕೊರೋನಾ ದಿನಗಳಿಂದ ಸ್ಥಗಿತಗೊಂಡಿದ್ದ ದಾಂಡೇಲಿ ರೈಲು ಸೇವೆ

# ರಾಜ್ಯದ ಅತಿ ಚಿಕ್ಕ ರೈಲು ಮಾರ್ಗಕ್ಕೆ ಫೆ.7ಕ್ಕೆ ಚಾಲನೆ

• ಉದಯವಾಹಿನಿ ದಾಂಡೇಲಿ

ರಾಜ್ಯದ ಅತಿ ಚಿಕ್ಕ ರೈಲು ಮಾರ್ಗವಾದ ದಾಂಡೇಲಿ – ಅಳ್ನಾವರ ನಡುವಿನ ಪ್ರಯಾಣಿಕ ರೈಲು ಸಂಚಾರಕ್ಕೆ ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ಫೆಬ್ರವರಿ 7 ರಂದು ಚಾಲನೆ ನೀಡಿದ್ದಾರೆ. ಹಲವು ವರ್ಷಗಳ ಬಳಿಕ ಈ ಮಾರ್ಗದಲ್ಲಿ ಡೆಮು ರೈಲು ಸಂಚಾರ ಆರಂಭವಾಗಲಿದೆ.

ಈ ಬಗ್ಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ. ಕೊರೋನಾ ದಿನಗಳಿಂದ ಸ್ಥಗಿತಗೊಂಡಿದ್ದ ದಾಂಡೇಲಿ ರೈಲು ಸೇವೆ ಸಂಸದರ ಯತ್ನದಿಂದ ಮತ್ತೆ ಆರಂಭಗೊಳ್ಳುತ್ತಿದ್ದು, ಫೆ.7 ರಂದು ಸಂಜೆ 4ಕ್ಕೆ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಈ ರೈಲು ಸಂಚಾರವನ್ನು ಅಧಿಕೃತವಾಗಿ ಉದ್ಘಾಟಿಸಲಿದ್ದಾರೆ ಎಂದು ತಿಳಿಸಲಾಗಿದೆ. ಕೆಲ ತಿಂಗಳ ಹಿಂದೆ ಕೇಂದ್ರ ಸಚಿವ ವಿ. ಸೋಮಣ್ಣ ಅವರು ಈ ಮಾಹಿತಿಯನ್ನು ಟ್ವೀಟ್ ಮೂಲಕ ಹಂಚಿಕೊಂಡಿದ್ದರು. ಈ ಹೊಸ ರೈಲು ಸಂಪರ್ಕವು ದಾಂಡೇಲಿ

- ದಾಂಡೇಲಿ ಮತ್ತು ಅಳ್ನಾವರ ನಡುವೆ ರೈಲು ಸಂಚಾರ ಪುನರಾರಂಭ.
- ರೈಲ್ವೆ ಖಾತೆ ರಾಜ್ಯ ಸಚಿವ ವಿ ಸೋಮಣ್ಣ ಫೆಬ್ರವರಿ 7 ರಂದು ಚಾಲನೆ.
- ದಾಂಡೇಲಿ – ಅಳ್ನಾವರ ನಡುವಿನ ರೈಲು ಮಾರ್ಗ ಕೇವಲ 26 ಕಿ.ಮೀ



ಮತ್ತು ಅಳ್ನಾವರವನ್ನು ಜೋಡಿಸಲಿದ್ದು, ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಿಗಳು, ದಿನನಿತ್ಯದ ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಧಾರವಾಡ

**ರೈಲಿನ ವೇಳಾಪಟ್ಟಿ ಏನು?**

**ಅಳ್ನಾವರದಿಂದ ಬೆಳಿಗ್ಗೆ 5.30ಕ್ಕೆ, 7.40ಕ್ಕೆ ಮತ್ತು ಸಂಜೆ 7.30ಕ್ಕೆ ರೈಲು ಹೊರಡಲಿದ್ದು, 45 ನಿಮಿಷಗಳಲ್ಲಿ ದಾಂಡೇಲಿ ತಲುಪಲಿದೆ. ಅದೇ ರೀತಿ, ದಾಂಡೇಲಿಯಿಂದ ಬೆಳಿಗ್ಗೆ 6.45ಕ್ಕೆ, 8.40ಕ್ಕೆ ಮತ್ತು ರಾತ್ರಿ 8.30ಕ್ಕೆ ರೈಲು ಹೊರಟು 45 ನಿಮಿಷಗಳಲ್ಲಿ ಅಳ್ನಾವರ ತಲುಪಲಿದೆ.**

ಈ ರೈಲು ಮಾರ್ಗವು ರಾಜ್ಯದ ಪುರಾತನ ರೈಲು ಮಾರ್ಗಗಳಲ್ಲಿ ಒಂದಾಗಿದೆ. ಅಳ್ನಾವರ ಮತ್ತು ಅಂಬೇವಾಡಿ ನಡುವಿನ ಮಾರ್ಗವು ಶತಮಾನದಷ್ಟು ಹಳೆಯದು. ದಾಂಡೇಲಿ ಮತ್ತು ಹುಬ್ಬಳ್ಳಿ–ಧಾರವಾಡದ ಜನ ಹಾಗೂ ಹೋರಾಟಗಾರರ ಒತ್ತಡಕ್ಕೆ ಮಣಿದು, ರೈಲ್ವೆ ಸಚಿವಾಲಯ ಈ ಮಾರ್ಗದಲ್ಲಿ ರೈಲು ಸಂಚಾರಕ್ಕೆ ಒಪ್ಪಿಗೆ ನೀಡಿದೆ. ಇದು ಉತ್ತರ ಕರ್ನಾಟಕದ ಪ್ರವಾಸೋದ್ಯಮಕ್ಕೆ ದೊಡ್ಡ ಉತ್ತೇಜನ ನೀಡಲಿದೆ. ಮೊದಲನೇ

**26 ಕಿ.ಮೀ ಉದ್ದ**

**ದಾಂಡೇಲಿ – ಅಳ್ನಾವರ ನಡುವಿನ ರೈಲು ಮಾರ್ಗ ಕೇವಲ 26 ಕಿ.ಮೀ ಉದ್ದವಿದ್ದು, ಮೂರು ನಿಲ್ದಾಣಗಳನ್ನು ಹೊಂದಿದೆ. ಈ ಮಾರ್ಗದಲ್ಲಿ ಒಂದು ಡೆಮು ರೈಲನ್ನು ಓಡಿಸಲು ರೈಲ್ವೆ ಇಲಾಖೆ ನಿರ್ಧರಿಸಿದೆ. ಈ ರೈಲು ದಿನನಿತ್ಯ ಬೆಳಿಗ್ಗೆ ಎರಡು ಬಾರಿ ಮತ್ತು ರಾತ್ರಿ ಒಂದು ಬಾರಿ ಸಂಚರಿಸಲಿದೆ.**

ಮಹಾಯುದ್ಧದ ಸಮಯದಲ್ಲಿ, ಅಂದರೆ 1918 ರಲ್ಲಿ, ಮದ್ರಾಸ್ ಮತ್ತು ಸದರ್ನ್ ಮಹಾರಾಷ್ಟ್ರ ರೈಲ್ವೆ ವ್ಯವಸ್ಥೆಯು ಅಳ್ನಾವರದಿಂದ ಅಂಬೇವಾಡಿವರೆಗೆ ಮೀಟರ್ ಗೇಜ್ ರೈಲು ಹಳಿಗಳನ್ನು ನಿರ್ಮಿಸಿತು. ಈ ಹಳಿಗಳು ಬೆಳಗಾವಿಯಿಂದ ಹುಬ್ಬಳ್ಳಿವರೆಗಿನ ಮುಖ್ಯ ರೈಲು ಮಾರ್ಗಕ್ಕೆ ಸಂಪರ್ಕ ಕಲ್ಪಿಸುತ್ತಿದ್ದವು. ಆಗ ಗೋಗಟೆವಾಡಿ, ಶಿಂದಗೇರಿ, ಅಂಬೇವಾಡಿ ಮತ್ತು ದಾಂಡೇಲಿ ಎಂಬ ನಾಲ್ಕು ನಿಲ್ದಾಣಗಳಿದ್ದವು.

**ಸಂಸದರ ಯತ್ನದಿಂದ ಆರಂಭ**

ಮೊದಲು ಈ ಮಾರ್ಗವನ್ನು ಕೇವಲ ಸರಕು ಸಾಗಾಟಕ್ಕೆ, ಮುಖ್ಯವಾಗಿ ಅರಣ್ಯ ಉತ್ಪನ್ನಗಳಾದ ಮರಗಳನ್ನು ಸಾಗಿಸಲು ಬಳಸಲಾಗುತ್ತಿತ್ತು. ನಂತರ ಪ್ರಯಾಣಿಕರ ರೈಲುಗಳೂ ಆರಂಭವಾದವು.

ಆದರೆ, 1994ರಲ್ಲಿ ಬ್ರಾಡ್ ಗೇಜ್ ರೈಲು ಮಾರ್ಗದ ಕಾಮಗಾರಿ ಆರಂಭವಾದಾಗ ಈ ರೈಲು ಸೇವೆ ಸ್ಥಗಿತಗೊಂಡಿತು. 2019ರಲ್ಲಿ ಮತ್ತೆ ಪುನರಾರಂಭವಾದರೂ ಕೋವಿಡ್‌ನಿಂದ ಸ್ಥಗಿತವಾಗಿತ್ತು.

## ಶಾಧಿಪೂರ 33/11ಕೆವಿ ವಿದ್ಯುತ್ ಉಪಕೇಂದ್ರಕ್ಕೆ ಭೂಮಿ ಮಂಜೂರಾತಿ, ಅಧಿವೇಶನದಲ್ಲಿ ಶಾಸಕರ ಪ್ರಸ್ತಾವನೆ ಪ್ರಚಾರಕ್ಕಾಗಿ: ಗ್ರಾಪಂ ಅಧ್ಯಕ್ಷೆ ಭಾರತಿ ಪವ್ಹಾರ ಲೇವಡಿ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಶಾಧಿಪೂರ ಗ್ರಾಮದ 33/11ಕೆವಿ ವಿದ್ಯುತ್ ಕಾಮಗಾರಿಗಾಗಿ ಭೂಮಿ ಮಂಜೂರಾತಿಗಾಗಿ ನೆನೆಗುದಿಗೆ ಬಿದ್ದಿದ್ದ ಯೋಜನೆಗೆ ನನ್ನ ಸತತ ಪ್ರಯತ್ನದಿಂದ ಹಾಗೂ ಕಾಂಗ್ರೇಸ್ ಪಕ್ಷದ ಮುಖಂಡರ ಮಾರ್ಗದರ್ಶನದಿಂದ 33/11ಕೆವಿ ವಿದ್ಯುತ್ ಕಾಮಗಾರಿಗೆ ಭೂಮಿ ಮಂಜೂರಾತಿ ದೊರೆತಿದೆ ಆದರೆ ಶಾಸಕರು ಅಧಿವೇಶನದಲ್ಲಿ ಪ್ರಚಾರಕ್ಕಾಗಿ ಧ್ವನಿ ಎತ್ತಿದ್ದಾರೆ ಎಂದು ಶಾಧಿಪೂರ ಗ್ರಾಪಂ ಅಧ್ಯಕ್ಷೆ ಭಾರತಿ ರಾಜ್ ಪವ್ಹಾರ ಲೇವಡಿ ಮಾಡಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ಗ್ರಾಮದ ರೈತರ ದಶಕಗಳ ಕನಸಾದ 33/11ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಸಂಬಂಧಿಸಿದಂತೆ ಸತತ ಹೋರಾಟದ ಫಲವಾಗಿ ಭೂಮಿ ಆದೇಶ ದೊರೆತಿದೆ. ಮಹತ್ವದ ಸಾಧನೆಯ ಹಿಂದೆ ನಮ್ಮ ನಿರಂತರ ಪ್ರಯತ್ನವಿತ್ತು, ಈ ಯೋಜನೆಯು ನಾನು ಅಧ್ಯಕ್ಷೆ ಆಗುವ 4ವರ್ಷಗಳ ಹಿಂದೆಯೇ ಜೆಸ್ಕಾಂನಿಂದ ಅನುಮೋದನೆ ಪಡೆದಿತ್ತು, ಆದರೆ ಸ್ಥಳೀಯವಾಗಿ ಯಾರೂ ಆಸಕ್ತಿ ವಹಿಸದ ಕಾರಣ ಭೂಮಿ ಮಂಜೂರಾತಿ ಪ್ರಕ್ರಿಯೆ ಸಂಪೂರ್ಣವಾಗಿ ನೆನೆಗುದಿಗೆ ಬಿದ್ದಿತ್ತು, ಅಧಿಕಾರ ವಹಿಸಿಕೊಂಡು ಸವಾಲಾಗಿ ಸ್ವೀಕರಿಸಿ, ತಹಶೀಲ್ದಾರ್ ಕಚೇರಿಯಿಂದ ಬೆಂಗಳೂರಿನ ಮುಖ್ಯ ಕಾರ್ಯದರ್ಶಿಗಳ ಕಚೇರಿವರೆಗೆ ಸತತವಾಗಿ ಓಡಾಟ ನಡೆಸಿದ್ದೇನೆ.



ತಾಂತ್ರಿಕ ಕಾರಣದಿಂದ 03ಬಾರಿ ವಾಪಸ್ ಬಂದಿದ್ದ ಫೈಲ್ ಅನ್ನು ಬೆನ್ನಟ್ಟಿ ಲೋಪದೋಷಗಳನ್ನು ಸರಿಪಡಿಸಿ ಭೂಮಿ ಮಂಜೂರಾಗುವಂತೆ ಮಾಡಿದ್ದೇನೆ.

ಯಾವುದೇ ವೈಯಕ್ತಿಕ ಲಾಭದ ಆಸೆ ಇಲ್ಲದೆ ರೈತರಿಗೆ ವಿದ್ಯುತ್ ಸಮರ್ಪಕ ಸಿಗಬೇಕೆಂಬ ಒಂದೇ ಉದ್ದೇಶದಿಂದ ಜಮೀನಿನ ಸರ್ವೆ ಮತ್ತು ನಕ್ಷೆ ಮಾಡಿಸಿ ಆದೇಶ ತಂದಿದ್ದೇನೆ, ಈ ಹೋರಾಟದ ಪ್ರತಿ ಹೆಜ್ಜೆಯಲ್ಲೂ ನಮ್ಮ ಶ್ರಮವಿದೆ ಎಂಬುವುಕ್ಕೆ ನನ್ನ ಬಳಿ ಅಧಿಕೃತ ದಾಖಲೆ ಗಳಿವೆ, ಕೆಲಸ ಮಾಡಿದ್ದು ನಾವು ಆದರೆ ಶಾಸಕರು ಅಧಿವೇಶನದಲ್ಲಿ ಕೇವಲ ಮಾತನಾಡಿ ಕ್ರೆಡಿಟ್ ಪಡೆಯಲು ಹೊರಟಿರುವ ಶಾಸಕರು ಗ್ರಾಮದ ಒಡೆದ ಕೆರೆ ಮತ್ತು ಆರೋಗ್ಯ ಕೇಂದ್ರದ ಬಗ್ಗೆ ಯಾಕೆ ತುಟಿ ಬಿಚ್ಚುತ್ತಿಲ್ಲ ಎಂದು ತಿರುಗೇಟು ನೀಡಿದ್ದಾರೆ.

ಭೂಮಿ ಮಂಜೂರಾತಿಯ ಮೊದಲ ಹಂತ ಮುಗಿದಿದೆ, ಮುಂದೆ 33/11ಕೆವಿ ವಿದ್ಯುತ್ ಉಪಕೇಂದ್ರದ ಕಾಮಗಾರಿ ಪೂರ್ಣಗೊಂಡು ಲೋಕಾರ್ಪಣೆ ಆಗುವವರೆಗೂ ನಾನು ಶ್ರಮಿಸುತ್ತೇನೆ ಶಾದಿಪುರದ ಸಮಗ್ರ ಅಭಿವೃದ್ಧಿಯೇ ನನ್ನ ಮೊದಲ ಆದ್ಯತೆ ಎಂದು ತಿಳಿಸಿದ್ದಾರೆ.

## ಬಳ್ಳಾರಿ ಎಪಿಎಂಸಿಯಲ್ಲಿ ಹಮಾಲರ ಹರಕತ್ ತೂಕವಾಗದ ಫಸಲು

• ಉದಯವಾಹಿನಿ ಬಳ್ಳಾರಿ

ತಮಗೆ ಹೆಚ್ಚಿನ ಹಮಾಲಿ ಶುಲ್ಕ ನೀಡಬೇಕು ಎಂದು ಅಂಗಡಿಯ ಹಮಾಲರು ನಡೆಸುತ್ತಿರುವ ಮುಷ್ಕರದಿಂದ ಮಧ್ಯಾಹ್ನದವರೆಗೆ ರೈತರು ಮಾರುಕಟ್ಟೆಗೆ ತಂದ ಫಸಲು ಮಾರಾಟವಾಗದೇ ಇದೆ. ಮಾರುಕಟ್ಟೆ ಸಮಿತಿಯ ನಿಯಮಾವಳಿಯಂತೆ ಹಮಾಲರಿಗೆ ಶೇ 20 ರಷ್ಟು ಹಮಾಲಿ ದರ ಹೆಚ್ಚಳಮಾಡಲಾಗಿದೆಯಂತೆ. ಆದರೆ ಖರೀದಿದಾರರಿಂದ ಖಾಲಿ ಚೀಲದ ಗಟ್ಟ ತರಲೂ ಶುಲ್ಕ ನೀಡಬೇಕೆಂಬುದು ಮುಷ್ಕರ ಆರಂಭಿಸಿದ್ದರು. ಈ ಕುರಿತು ಹಮಾಲರು, ಖರೀದಿದಾರರ ಸಭೆ ನಡೆಸಿದ ಮಾರುಕಟ್ಟೆ ಸಮಿತಿ. ಖರೀದಿದಾರರೇ ಖಾಲಿ ಚೀಲ ತರಲಿದ್ದಾರೆ ಎಂದು ನಿರ್ಧರಿಸಿದರು.

ಟೆಂಡರ್ ಪ್ರಕ್ರಿಯೆ ನಡೆಯಿತು. ಖರೀದಿದಾರರ ಹಮಾಲರು ಬಂದಿದ್ದರು. ಆದರೆ ಅಂಗಡಿ ಹಮಾಲರು ನಮಗೇ ಖಾಲಿ ಚೀಲ ತರುವ ಶುಲ್ಕ ನೀಡಬೇಕೆಂದು ಮಧ್ಯಾಹ್ನದ ವರೆಗೆ ತೂಕ ಹಾಕಲು ಬಂದಿರಲಿಲ್ಲ. ಈ ಬಗ್ಗೆ ಎಪಿಎಂಸಿ ಕಾರ್ಯದರ್ಶಿ ಅವರು ಹಮಾಲರ ಮುಖಂಡರ ಸಭೆ ಕರೆದು ಮಾತುಕತೆ ನಡೆಸಿದ್ದರು. ಇತ್ತ ಮಾರುಕಟ್ಟೆಗೆ ಮೆಕ್ಕೆಜೋಳ ಮೊದಲಾದ ಫಸಲು ತಂದಿದ್ದ ರೈತರು ಮಾತ್ರ ತಮ್ಮ ಮಾಲು ಮಾರಾಟವಾಗದೇ ಇದ್ದುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

## ರೆಸಾರ್ಟ್ ತೆರವಿಗೆ ಮೀನುಗಾರರ ಆಗ್ರಹ

• ಉದಯವಾಹಿನಿ ಕುಮಟಾ

ತಾಲ್ಲೂಕಿನ ಕಲಭಾಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಳೆದಂಡೆ ಸಮುದ್ರ ತೀರದಲ್ಲಿ ಮೀನುಗಾರಿಕೆಗೆ ತೊಂದರೆಯಾಗುವ ರೀತಿಯಲ್ಲಿ ಅನಧಿಕೃತವಾಗಿ ರೆಸಾರ್ಟ್ ನಿರ್ಮಿಸಿರುವುದನ್ನು ತೆರವುಗೊಳಿಸುವಂತೆ ಆಗ್ರಹಿಸಿ ನಾಡದೋಣಿ ಹಾಗೂ ಸಾಂಪ್ರದಾಯಿಕ ಮೀನುಗಾರಿಕೆ ಸಂಘದ ತಾಲ್ಲೂಕು ಘಟಕ ಅಧ್ಯಕ್ಷ ಸುಧಾಕರ ತಾರಿ ಅವರ ನೇತೃತ್ವದಲ್ಲಿ ಈಚೆಗೆ ಸ್ಥಳೀಯ ಮೀನುಗಾರರು ಗ್ರಾಮ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಅಕ್ರಮವಾಗಿ ನಿರ್ಮಿಸಿರುವ ರೆಸಾರ್ಟ್‌ನಿಂದಾಗಿ ಅಳೆದಂಡೆಯ ಕಿರಿದಾದ ರಸ್ತೆಯಲ್ಲಿ ಪ್ರಯಾಣಿಕರನ್ನು ಹೊತ್ತ ದೊಡ್ಡ ವಾಹನಗಳು ವೇಗವಾಗಿ ಓಡಾಡುತ್ತವೆ. ರಸ್ತೆ ಬದಿ ಓಡಾಡುವ ಮಹಿಳೆಯರು, ಮಕ್ಕಳು ಅಪಾಯಕ್ಕೆ ಸಿಲುಕುವ ಸಾಧ್ಯತೆ ಹೆಚ್ಚು. ಹಿಂದೆ ಅಳೆದಂಡೆ ರಸ್ತೆ ಬದಿಯ ಹೊಲದಂಡೆಯಲ್ಲಿ ಮೀನುಗಾರರು ನಿರ್ಮಿಸಿಕೊಂಡ ಮೀನುಗಾರಿಕೆಯ ತಾತ್ಕಾಲಿಕ ಶೆಡ್‌ಗಳನ್ನು ಸ್ಥಳೀಯ ತಾಲ್ಲೂಕು ಪಂಚಾಯಿತಿ ಏಕಾಏಕಿ ರಾತ್ರಿ ಹೊತ್ತು ತೆರವುಗೊಳಿಸಿದೆ. ಅನಧಿಕೃತ ರೆಸಾರ್ಟ್‌ಗಳಿಗೂ ಅದೇ ಕಾನೂನು ಅಳವಡಿಸಬೇಕು. ಕಳೆದ ಮೂರು ವರ್ಷಗಳಿಂದ ಇಲ್ಲಿ ಅಕ್ರಮವಾಗಿ ರೆಸಾರ್ಟ್ ನಡೆಸುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸುಮ್ಮನಿರುವುದು ಅನುಮಾನಗಳಿಗೆ ಕಾರಣವಾಗಿದೆ ಎಂದರು.

## ಅಂಜನಾದ್ರಿ ಹೆಸರು ನಾಮಕರಣಕ್ಕೆ ಒತ್ತಾಯ

• ಉದಯವಾಹಿನಿ ಗಂಗಾವತಿ

ನಗರದ ರೈಲು ನಿಲ್ದಾಣಕ್ಕೆ ಅಂಜನಾದ್ರಿ ರೈಲ್ವೆ ನಿಲ್ದಾಣ ಎಂದು ನಾಮಕರಣ ಮಾಡುವಂತೆ ಆಗ್ರಹಿಸಿ ಸರ್ವಾಂಗೀಣ ಅಭಿವೃದ್ಧಿ ಹೋರಾಟ ಸಮಿತಿ ಕಾರ್ಯಕರ್ತರು ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು. ಸಮಿತಿ ಜಿಲ್ಲಾಧ್ಯಕ್ಷ ಬಸವರಾಜ ಮ್ಯಾಗಳಮನಿ ಮಾತನಾಡಿ, ರಾಮಾಯಣ ಕಾಲದ ಇತಿಹಾಸ ಹೊಂದಿರುವ ಗಂಗಾವತಿ ತಾಲ್ಲೂಕಿನಲ್ಲಿ ಸಾಕಷ್ಟು ಪ್ರವಾಸಿ ಸ್ಥಳಗಳನ್ನು ಕಾಣಬಹುದಾಗಿದೆ. ಅಂಜನಾದ್ರಿ ಬೆಟ್ಟ, ಶಬರಿಗುಹೆ, ಪಂಪಾಸರೋವರ ಸೇರಿದಂತೆ ಹಲವು ಪ್ರದೇಶಗಳಿವೆ. ಇಲ್ಲಿಗೆ ಸಾಕಷ್ಟು ಜನ ಭಕ್ತರು, ಪ್ರವಾಸಿಗರು ಭೇಟಿ ನೀಡುತ್ತಾರೆ ಎಂದರು. ಅಲ್ಲದೆ ಗಂಗಾವತಿ–ಬೆಂಗಳೂರಿಗೆ ಹೋಗುವ ರೈಲಿಗೆ ಅಂಜನಾದ್ರಿ ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಬೇಕು. ಈಚೆಗೆ ಉದ್ಯೋಗ ಖಾತರಿ ಯೋಜನೆ ತಿದ್ದುಪಡಿ ಮಾಡಿ, ಗಾಂಧೀಜಿ ಹೆಸರು ಕೈ ಬಿಟ್ಟಿರುವುದು ಸರಿಯಲ್ಲ. ಕೂಡಲೇ ನಿರ್ಧಾರ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

## ಸಾಧನೆಗೆ ಆಸಕ್ತಿ ಮುಖ್ಯ: ಗೌರೀಶ ಅಕ್ಕಿ

• ಉದಯವಾಹಿನಿ, ಯಲಬುರ್ಗಾ

ಯಾವುದೇ ಉನ್ನತ ಹುದ್ದೆಗೆ ಹೋಗಲು, ಸಾಧನೆ ಮಾಡಲು ಆ ವ್ಯಕ್ತಿಯ ಆಸಕ್ತಿ ಮುಖ್ಯವಾಗುತ್ತದೆ ಎಂದು ಬೆಂಗಳೂರಿನ ಆಲ್ಮಾ ಮೀಡಿಯಾ ಸಂಸ್ಥಾಪಕ ಸುದ್ದಿ ನಿರೂಪಕ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಗೌರೀಶ ಅಕ್ಕಿಯವರು ಹೇಳಿದರು. ತಾಲ್ಲೂಕಿನ ಮುಧೋಳ ಗ್ರಾಮದ ಶ್ರೀ ತ್ರಿಲಿಂಗೇಶ್ವರ ಪ್ರೌಢ ಶಾಲೆಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಮೊಬೈಲ್ ಎಂಬ ಆಯುಧ ಒಳ್ಳೆಯದಕ್ಕೂ ಇದೆ ಕೆಟ್ಟದಕ್ಕೂ ಇದೆ

ಅದರ ಸದುಪಯೋಗ ಮಾಡಿಕೊಳ್ಳಿಎಂದು ವಿದ್ಯಾರ್ಥಿಗಳಿಗೆ ಕರೆ ನೀಡುತ್ತಾ ತಮ್ಮದೆ ಆದ ಸ್ಥಾನಮಾನಗಳಿಂದ ಗೌರವ ಬರಬೇಕಾದರೆ ತಮ್ಮ ವೃತ್ತಿಯಲ್ಲಿ ಶ್ರದ್ಧೆ ಪ್ರಾಮಾಣಿಕತೆ ಮುಖ್ಯವಾಗಿರುತ್ತವೆ ಅಂತಹ ನಡಾವಳಿಕೆಯನ್ನು ತಾವು ರೂಢಿಸಿಕೊಳ್ಳಬೇಕಾಗಿದೆ . ಆಕರ್ಷಣೆಗೆ ಬಲಿಯಾಗದೆ ಆದರ್ಶಕ್ಕೆ ಮಾರು ಹೋಗಬೇಕು ನಮ್ಮ ಗೆಳೆಯರ ಸಂಪರ್ಕ



ಉದಯವಾಹಿನಿ ಚಿತ್ರ

ಒಳ್ಳೆಯದಾಗಿರಲಿ ಚಿಕ್ಕ ವಿಚಾರಗಳಿಗೆ ಆಸ್ಪದ ಮಾಡಿ ಮನಸ್ತಾಪ ಮಾಡಿಕೊಳ್ಳಬೇಡಿ ಸಾಧ್ಯವಾದರೆ ಒಳ್ಳೆ ಕೆಲಸ ಮಾಡಿ ಕೆಟ್ಟ ಕೆಲಸಕ್ಕೆ ಎಂದೂ ಮನಸ್ಸು ಮಾಡಬೇಡಿ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಸಣ್ಣ ಪುಟ್ಟ ಕಷ್ಟಗಳು ಎಲ್ಲರಿಗೂ ಇರಬಹುದು ಆದರೆ ಅವುಗಳ ನೆಪದಲ್ಲಿ ನಮ್ಮ ಬಾಳಿನಲ್ಲಿ ಹಿನ್ನಡೆ ಆಗಕೂಡದು ಕಷ್ಟಗಳನ್ನ ಸವಾಲಾಗಿ ಸ್ವೀಕರಿಸಿ ಜೀವನವನ್ನು ಪಾವನ ಮಾಡಿಕೊಳ್ಳ ಬೇಕು, ನಿಮ್ಮ ಪಾದದ ಧೂಳ ನನ್ನ ತಲೆ ಮೇಲೆ ಇರಲಿ ಆದರೆ ಕಣ್ಣುಗಳ ಮೇಲೆ ಬೀಳದಿರಲಿ

**ಪಾಲಕರು ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು ಆದರೆ ಮಕ್ಕಳು ತೆಗೆದು ಕೊಳ್ಳುವ ನಿರ್ಧಾರಕ್ಕೆ ಅಡ್ಡಗಲ್ಲು ಹಾಕಬೇಡಿ ಎಂದರು ಮಕ್ಕಳಲ್ಲಿರುವ ಸೂಪ್ತ ಪ್ರತಿಭೆ ಯನ್ನು ಹೊರತರಲು ಹೆತ್ತವರು ಸಹಕರಿಸಬೇಕು ಅಂದಾಗ ಆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಆಗುವಲ್ಲಿ ಎರಡು ಮಾತಿಲ್ಲ .** –ಗೌರೀಶ ಅಕ್ಕಿ

ಎನ್ನುವ ಕವಿವಾಣಿಯನ್ನು ಸ್ಮರಿಸುತ್ತಾ ಸಂಕುಚಿತತೆಯಿಂದ ಹೊರ ಬಂದಾಗ ಉನ್ನತಿಗೆ ಬರಬೇಕು ಆ ದಿಶೆಯಲ್ಲಿ ಆತ್ಮ ವಿಶ್ವಾಸ ಹೊಂದಿರಿ ಎಂದರು. ಒಳ್ಳೆ ಮೌಲ್ಯಗಳಿಂದ ಒಳ್ಳೆ ಸಮಾಜ ಕಟ್ಟಿರಿ ಎಂದರು. ವಿಧಾನ ಪರಿಷತ ಸದಸ್ಯರಾದ ಶಶೀಲ್ ನಮೋಶಿ ಮಾತನಾಡಿ ಐದು ಲಕ್ಷ ಅನುದಾನ ತ್ರಿಲಿಂಗೇಶ್ವರ ಶಾಲೆಗೆ ಕೊಡುವದಾಗಿ ಘೋಷಿಸಿದರು.

## ಜಿಲ್ಲಾ ಕ್ರೀಡಾಶಾಲೆಗೆ ಪ್ರತಿಭಾವಂತ ಕ್ರೀಡಾಪಟುಗಳ ಆಯ್ಕೆ

• ಉದಯವಾಹಿನಿ, ಚಿತ್ರದುರ್ಗ

ಚಿತ್ರದುರ್ಗ ನಗರದ ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣದ ಕ್ರೀಡಾ ವಸತಿ ಶಾಲೆಗೆ ವಾಲಿಬಾಲ್ ಹಾಗೂ ಅಥ್ಲೆಟಿಕ್ಸ್ ಕ್ರೀಡೆಗಳಲ್ಲಿ 2026–27ನೇ ಸಾಲಿನಲ್ಲಿ ಜಿಲ್ಲೆಯ ಪ್ರತಿಭಾವಂತ ಬಾಲಕ, ಬಾಲಕಿಯರನ್ನು ಗುರುತಿಸಿ ಕ್ರೀಡಾಶಾಲೆಗೆ ಪ್ರವೇಶ ನೀಡಲಾಗುವುದು.

ಪ್ರವೇಶ ಪಡೆದ ಬಾಲಕ–ಬಾಲಕಿಯರಿಗೆ ಇಲಾಖೆಯ ವತಿಯಿಂದ ಉಚಿತವಾಗಿ ಊಟ, ವಸತಿ ಮತ್ತು ಕ್ರೀಡಾ ಪರಿಣಿತರುಗಳಿಂದ ತರಬೇತಿಯನ್ನು ನೀಡಿ ಅತ್ಯುತ್ತಮ ಕ್ರೀಡಾಪಟುಗಳನ್ನಾಗಿ ರೂಪುಗೊಳಿಸಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ರೀತಿಯಲ್ಲಿ ತರಬೇತಿಗೊಳಿಸಲಾಗುವುದು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 4ನೇ ತರಗತಿಯಲ್ಲಿ ಓದುತ್ತಿರುವ ಮತ್ತು 2026 ಜೂನ್ 1ಕ್ಕೆ 10 ವರ್ಷ ಮತ್ತು 11 ವರ್ಷ ಮೀರದ ಬಾಲಕ ಬಾಲಕಿಯರು ಆಯ್ಕೆಯಲ್ಲಿ ಭಾಗವಹಿಸಬಹುದು. ಆಯ್ಕೆಯಲ್ಲಿ ಅಭ್ಯರ್ಥಿಗಳ ದೈಹಿಕ ಸಾಮರ್ಥ್ಯ, ಶಕ್ತಿ, ಚಾಕಚಕ್ಯತೆ, ಸಹಿಷ್ಣುತೆ, ಕುಶಲತೆ, ವೇಗ ಹಾಗೂ ಆಯಾ ಕ್ರೀಡೆಗೆ ಅಗತ್ಯವಿರುವ ಎತ್ತರ ಪರೀಕ್ಷಿಸಿ ಒಟ್ಟಾರೆ ಶೇ.50 ಕ್ಕೂ ಹೆಚ್ಚು ಅಂಕಗಳನ್ನು ಪಡೆದವರಿಗೆ ಯೋಗ್ಯತಾನುಸಾರ ಆಯ್ಕೆಗೆ ಪರಿಗಣಿಸಲಾಗುವುದು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಆಯ್ಕೆ ನಡೆಸಲಾಗುತ್ತಿದ್ದು, ಆಯ್ಕೆ ನಡೆಯುವ ಸ್ಥಳ, ವೇಳೆ ಹಾಗೂ ದಿನಾಂಕಗಳ ವಿವರ ಈ ಕೆಳಗಿನಂತಿದೆ. ಫೆ.5ರಂದು ಬೆಳಿಗ್ಗೆ 11 ರಿಂದ ಮೊಳಕಾಲ್ಮೂರು ಸರ್ಕಾರಿ ಪದವಿ ಪೂರ್ವ ಕಾಲೇಜು, ಫೆ.6 ರಂದು ಬೆಳಿಗ್ಗೆ 11 ರಿಂದ ಚಳ್ಳಕೆರೆ ತಾಲ್ಲೂಕು ಕ್ರೀಡಾಂಗಣ, ಫೆ.7 ರಂದು ಬೆಳಿಗ್ಗೆ 11 ರಿಂದ ಹೊಳಲ್ಕೆರೆ ತಾಲ್ಲೂಕು ಕ್ರೀಡಾಂಗಣ, ಫೆ.9ರಂದು ಬೆಳಿಗ್ಗೆ 11 ರಿಂದ ಹೊಸದುರ್ಗ ತಾಲ್ಲೂಕು ಕ್ರೀಡಾಂಗಣ, ಫೆ.10ರಂದು ಬೆಳಿಗ್ಗೆ 11 ರಿಂದ ಹಿರಿಯೂರು ತಾಲ್ಲೂಕು ಕ್ರೀಡಾಂಗಣ , ಫೆ.11ರಂದು ಬೆಳಿಗ್ಗೆ 11 ರಿಂದ ಚಿತ್ರದುರ್ಗ ಒನಕೆ ಓಬವ್ವ ಕ್ರೀಡಾಂಗಣದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು.

ಜಿಲ್ಲಾ ಮಟ್ಟದ ಆಯ್ಕೆಯನ್ನು ಫೆ. 12 ರಿಂದ 14 ರವರೆಗೆ ಚಿತ್ರದುರ್ಗ ನಗರದ ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ತಾಲ್ಲೂಕು ಕೇಂದ್ರಗಳಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದಲ್ಲಿ ಫೆ.12 ಮತ್ತು ಫೆ.14 ರಂದು ಬೆಳಿಗ್ಗೆ 10ಕ್ಕೆ ಚಿತ್ರದುರ್ಗ ನಗರದ ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣದಲ್ಲಿ ನಡೆಯುವ ಆಯ್ಕೆ ಟ್ರಯಲ್ಸ್‌ನಲ್ಲಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಭಾಗವಹಿಸಬಹುದಾಗಿದೆ. ಆಯ್ಕೆಯಲ್ಲಿ ಭಾಗವಹಿಸುವ ಬಾಲಕ–ಬಾಲಕಿಯರಿಗೆ ಯಾವುದೇ ರೀತಿಯ ಭತ್ಯೆಯನ್ನು ಇಲಾಖೆ ವತಿಯಿಂದ ನೀಡಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ವೀರವನಿತೆ ಒನಕೆ ಓಬವ್ವ ಕ್ರೀಡಾಂಗಣ, ಚಿತ್ರದುರ್ಗ, ಕಛೇರಿ ದೂರವಾಣಿ ಸಂಖ್ಯೆ 08194–235635 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ರೈತರ ಸಮಸ್ಯೆ ಸರಿಪಡಿಸಿ: ಪ್ರಭು ಚವ್ಹಾಣ ಸೂಚನೆ

• ಉದಯವಾಹಿನಿ, ಕಮಲನಗರ

ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಔರಾದ(ಬಿ) ವಿಧಾನಸಭಾ ಕ್ಷೇತ್ರದ ಖೇರ್ಡಾ, ಭಂಡಾರಕುಮಟಾ, ಡೊಂಗರಗಾಂವ, ಕರಕ್ಯಾಳ, ಹುಲ್ಯಾಳ, ಏಕಂಬಾ, ಗಣೇಶಪೂರ(ಎ), ಜಮಾಲಪೂರ, ಖಂಡಿಕೇರಿ ಹಾಗೂ ಹಸ್ಸಿಖೇರಾದಲ್ಲಿ ಗ್ರಾಮ ಸಂಚಾರ ನಡೆಸಿದರು.

ಗ್ರಾಮಸ್ಥರ ಅಹವಾಲುಗಳನ್ನು ಆಲಿಸಿದ ಅವರು, ಅತೀವೃಷ್ಟಿಯಿಂದ ಉಂಟಾಗಿರುವ ಬೆಳೆ ಹಾನಿ ಪರಿಹಾರ ವಿತರಣೆಯಲ್ಲಿ ತಾರತಮ್ಯ ನಡೆಯುತ್ತಿರುವ ಬಗ್ಗೆ ಹಲವು ದೂರುಗಳು ಬರುತ್ತಿವೆ. ತಕ್ಷಣವೇ ಈ ಸಮಸ್ಯೆಗಳನ್ನು ಸರಿಪಡಿಸಿ ರೈತರಿಗೆ ನ್ಯಾಯ ದೊರಕುವಂತೆ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಖೇರ್ಡಾ(ಬಿ) ಗ್ರಾಮಕ್ಕೆ ಭೇಟಿ ನೀಡಿದಾಗ ಈಗಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯು ಮಂದಿರದ ಜಾಗದಲ್ಲಿ ನಿರ್ಮಿಸಲಾಗಿದೆ. ಹಾಗಾಗಿ ಶಾಲೆಗೆ ಹೊಸ ನಿವೇಶನ ಕಲ್ಪಿಸಿಕೊಟ್ಟು ಮಂದಿರ ನಿರ್ಮಿಸಿಕೊಡಬೇಕೆಂದು ಗ್ರಾಮಸ್ಥರು ಶಾಸಕರಿಗೆ ಮನವಿ ಸಲ್ಲಿಸಿದರು. ಗ್ರಾಮದ



ಉದಯವಾಹಿನಿ ಚಿತ್ರ


ಅಭಿವೃದ್ಧಿ ವಿಷಯದಲ್ಲಿ ನಾನು ಸದಾ ಸಿದ್ಧನಿದ್ದು ಅಗತ್ಯ ಕ್ರಮವಹಿಸುವುದಾಗಿ ಶಾಸಕರು ಭರವಸೆ ನೀಡಿದರು.

ಈ ವೇಳೆ ಗ್ರಾಮಗಳಲ್ಲಿನ ಮೂಲಸೌಕರ್ಯ, ಕುಡಿಯುವ ನೀರು, ರಸ್ತೆ, ವಿದ್ಯುತ್, ಕೃಷಿ ಸಮಸ್ಯೆಗಳು ಸೇರಿದಂತೆ ವಿವಿಧ ಬೇಡಿಕೆಗಳು, ಅಭಿವೃದ್ಧಿ ಸಂಬಂಧಿತ ವಿಷಯಗಳ ಕುರಿತು ಗ್ರಾಮಸ್ಥರೊಂದಿಗೆ ಚರ್ಚಿಸಿ, ಹಂತ ಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಭರವಸೆ ನೀಡಿದರು. ಇದೇ ವೇಳೆ ವಿವಿಧೆಡೆ ರಸ್ತೆ, ಕುಡಿಯುವ ನೀರು, ಸಮುದಾಯ ಭವನ ಹಾಗೂ ಮತ್ತಿತರೆ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

## ಗಾಂಧಿ ತತ್ವ ಅಳವಡಿಸಿಕೊಳ್ಳಿ: ಗಣೇಶ ರಾಠೋಡ

• ಉದಯವಾಹಿನಿ, ಗಜೇಂದ್ರಗಡ

ಗಾಂಧೀಜಿಯವರನ್ನು ಕೊಂದ ಶಕ್ತಿಗಳು ಇಂದು ಅಧಿಕಾರದ ಅಹಮ್ಮಿನಲ್ಲಿದ್ದು, ಆ ಶಕ್ತಿಯನ್ನು ಸತ್ಯ, ಅಹಿಂಸೆ, ಸೌಹಾರ್ದ ಸಂದೇಶಗಳ ಮೂಲಕ ತೊಲಗಿಸಬೇಕಿದೆ ಎಂದು ಎಸ್‌ಎಫ್‌ಐ ರಾಜ್ಯ ಉಪಾಧ್ಯಕ್ಷ ಗಣೇಶ ರಾಠೋಡ ಹೇಳಿದರು. ಪಟ್ಟಣದ ಸೇವಾಲಾಲ್ ಕಲ್ಯಾಣ ಮಂಟಪದಲ್ಲಿ ಸೌಹಾರ್ದ ಕರ್ನಾಟಕ ಗಜೇಂದ್ರಗಡ ಸಮಿತಿ ವತಿಯಿಂದ ಈಚೆಗೆ ನಡೆದ ಗಾಂಧಿಯವರ ಹುತಾತ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಮುಖಂಡ ಬಾಲು ರಾಠೋಡ ಮಾತನಾಡಿ, ದೇಶದ ಸ್ವಾತಂತ್ರ್ಯ ಚಳವಳಿಗೆ ದೊಡ್ಡ ಕೊಡುಗೆ ನೀಡಿದ ಗಾಂಧೀಜಿಯವರನ್ನು ದೇಶ ವಿಭಜನೆಯ ನೆಪದಲ್ಲಿ ಕೆಲವರು ಕೊಂದರು. ಆ ಮೂಲಕ ದೇಶದ



ಉದಯವಾಹಿನಿ ಚಿತ್ರ

ಸಂವಿಧಾನ, ಸೌಹಾರ್ದಕ್ಕೆ ಧಕ್ಕೆ ತರುವ ಕೆಲಸ ಮಾಡಿದವು. ಆದರೆ ನಾವು ಈ ದೇಶದ ಸೌಹಾರ್ದದ ರಕ್ಷಣೆಗಾಗಿ ಗಾಂಧೀಜಿಯವರ ತತ್ವಗಳನ್ನು ಅಳವಡಿಸಿಕೊಂಡು ಸೌಹಾರ್ದ ಎತ್ತಿ ಹಿಡಿಯುವ ಕೆಲಸ ಮಾಡಬೇಕಿದೆ ಎಂದರು.

# ಸಿದ್ಧರಾಮೇಶ್ವರರ ಆದರ್ಶ ಯುವ ಪೀಳಿಗೆಗೆ ಪ್ರೇರಣೆ

### ಭೋವಿ ಸಮಾಜದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ಬೆಂಬಲ

• ಉದಯವಾಹಿನಿ, ಬೀದರ್

ಜಿಲ್ಲಾ ಭೋವಿ ಸಮಾಜ ಸಂಘದ ವತಿಯಿಂದ ನಗರದ ರಂಗ ಮಂದಿರದಲ್ಲಿ ಶ್ರೀ ಸಿದ್ಧರಾಮೇಶ್ವರ ಜಯಂತ್ಯೋತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಗಣೇಶ ಮೈದಾನದಿಂದ ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ ಮೂಲಕ ರಂಗ ಮಂದಿರದವರೆಗೆ ಭವ್ಯ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಭೋವಿ ಸಮಾಜದ ಮಹಿಳೆಯರು, ಯುವಕರು ಹಾಗೂ ಹಿರಿಯರು ಸಾಂಪ್ರದಾಯಿಕ ವೇಷಭೂಷಣ ಧರಿಸಿ ಪಾಲ್ಗೊಂಡಿದ್ದು, ಡೊಳ್ಳು ಕುಣಿತ, ಭಜನೆ, ಸಾಂಸ್ಕೃತಿಕ ಕಲಾ ಪ್ರದರ್ಶನಗಳ ಮೂಲಕ ನಗರದ ರಸ್ತೆಗಳಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪಾ ಎಂ. ಅವರು ದೀಪ ಬೆಳಗಿಸುವ ಮೂಲಕ ಮಾಡಲಾಯಿತು.

ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪಾ ಎಂ. ಅವರು ಮಾತನಾಡಿ, ಭೋವಿ ಸಮಾಜದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ಬೆಂಬಲ ನೀಡುವುದಾಗಿ ಭರವಸೆ ನೀಡಿದರು. ಮಕ್ಕಳ ಶಿಕ್ಷಣ ಮತ್ತು ಮಹಿಳಾ ಆರ್ಥಿಕ ಸಬಲೀಕರಣ ಕುರಿತು ಜಾಗೃತಿ ಮೂಡಿಸಿ, ಕನಿಷ್ಠ ಪಿಯುಸಿ ಮಟ್ಟದವರೆಗೆ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂದು ಪೋಷಕರಿಗೆ ಮನವಿ ಮಾಡಿದರು. ಯಾವುದೇ ಪರಿಸ್ಥಿತಿಯಲ್ಲೂ ಮಕ್ಕಳ ಶಿಕ್ಷಣವನ್ನು ನಿಲ್ಲಿಸಬಾರದು. ಶಿಕ್ಷಣವೇ ಬಡತನ ನಿವಾರಣೆಗೆ ಶಾಶ್ವತ ಪರಿಹಾರ'' ಎಂದು ಅವರು ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳನ್ನು ಉಲ್ಲೇಖಿಸಿ, ಶಿಕ್ಷಣದ ಮೂಲಕವೇ ದಾರಿ ನಿರ್ಮೂಲನೆ ಸಾಧ್ಯವೆಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಭೋವಿ ಸಮಾಜ ಸಂಘದ ಅಧ್ಯಕ್ಷರಾದ ಶ್ರೀ ಮಾಣಿಕರಾವ ವಾಡೇಕರ್ ವಹಿಸಿ ಪ್ರಾಸ್ತಾವಿಕ ಮಾತನಾಡಿ, ಸಮಾಜದ ಏಕತೆ, ಶಿಕ್ಷಣಕ್ಕೆ ಮಹತ್ವ, ಯುವಕರ ಶಕ್ತಿಯ ಸದುಪಯೋಗ ಮತ್ತು ಸಮಾಜದ ಒಗ್ಗಟ್ಟು ಅಗತ್ಯವಿದೆ ಎಂದು ಹೇಳಿದರು. ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಬಾಗಲಕೋಟೆ–ಚಿತ್ರದುರ್ಗ ಭೋವಿ



ಉದಯವಾಹಿನಿ ಚಿತ್ರ

**ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಕನಿಷ್ಠ ಹತ್ತು ಮಹಿಳೆಯರು ಸೇರಿ ಸಂಘ ಸ್ಥಾಪಿಸಿದರೆ ಐದು ಲಕ್ಷ ರೂಪಾಯಿ ಸಹಾಯ ನೀಡಲಾಗುವುದು ಎಂದು ತಿಳಿಸಲಾಗಿದ್ದು, ಸಣ್ಣ ಉದ್ಯಮಗಳು ಹಾಗೂ ಸ್ವಯಂ ಉದ್ಯೋಗ ಆರಂಭಿಸಲು ಪ್ರೋತ್ಸಾಹ ನೀಡುವುದಾಗಿ.** –ವಾಡೇಕರ್

**ರಸ್ತೆಗಳಲ್ಲಿ ಸಂಭ್ರಮದ ವಾತಾವರಣ**

(ವಡ್ಡರ) ಗುರುಪೀಠದ ಪರಮ ಪೂಜ್ಯ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮಿಗಳು ಹನ್ನೆರಡನೇ ಶತಮಾನದ ಮಹಾನ್ ಶಿವಶರಣ, ಮೂರನೇ ಶೂನ್ಯಪೀಠ ಚಕ್ರವರ್ತಿ, ಕಾಯಕಯೋಗಿ ಹಾಗೂ ಶ್ರೇಷ್ಠ ವಚನಕಾರರಾದ ಶರಣ ಸಿದ್ಧರಾಮೇಶ್ವರರ ಜಯಂತಿಯನ್ನು ಜಿಲ್ಲಾ ಭೋವಿ ಸಮಾಜ ಸಂಘದ ವತಿಯಿಂದ ಭಕ್ತಿಭಾವ ಮತ್ತು ಸಂಸ್ಕೃತಿಯೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಗುವುದು.


ಸಿದ್ಧರಾಮೇಶ್ವರರು ಸೊನ್ನಲಿಗೆ (ಇಂದಿನ ಸೊಲ್ಲಾಪುರ)ಯಲ್ಲಿ ಕಾಯಕ, ದಾಸೋಹ ಮತ್ತು ಸಮಾಜಸೇವೆಯ ಮೂಲಕ ಜನಹಿತಕ್ಕಾಗಿ ದುಡಿದ ಮಹಾನ್ ಶರಣರಾಗಿದ್ದು, ''ಕಪಿಲಸಿದ್ಧ ಮಲ್ಲಿಕಾರ್ಜುನ'' ಎಂಬ ವಚನಾಂಕಿತದಲ್ಲಿ ವಚನಗಳನ್ನು ರಚಿಸಿದ್ದಾರೆ. ಅವರ ಜೀವನ ಆದರ್ಶಗಳು ಇಂದಿಗೂ ಯುವ ಪೀಳಿಗೆಗೆ ಪ್ರೇರಣೆಯಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಪರಮ ಪೂಜ್ಯ ಶ್ರೀ ಗುರುಬಸವ ಪಟ್ಟದೇವರು ಹಾಗೂ ಪರಮ ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು ಹಾಗೂ ಲಾಡಗೇರಿ ಹಿರೇಮಠ ಸಂಸ್ಥಾನದ ಶ್ರೀ ಷ.ಬ್ರ ಗಂಗಾಧರ ಶಿವಾಚಾರ್ಯರು ದಿವ್ಯ ಸಾನಿಧ್ಯವಹಿಸಿದ್ದರು. ಧಾರ್ಮಿಕ ಉಪನ್ಯಾಸದಲ್ಲಿ ಅವರು ಶ್ರೀ ಸಿದ್ಧರಾಮೇಶ್ವರರ ಆದರ್ಶ, ತ್ಯಾಗ, ಸೇವಾಭಾವ, ಸಾಮಾಜಿಕ ಸಮಾನತೆ ಕುರಿತು ಪ್ರೇರಣಾದಾಯಕ ಸಂದೇಶ ನೀಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಪುಂಡಲೀಕ ನಿಂಗದಳ್ಳಿ ಹಾಗೂ ವೆಂಕಟರಾವ ಶಿಂಧೆ, ಹೈದ್ರಾಬಾದಿನ ಜಾತೀಯ ವಡ್ಡೇರಾ ಸಂಗಮದ ಅಧ್ಯಕ್ಷರಾದ ಪಿಟ್ಲಾ ಶ್ರೀಧರ, ಕಲಬುರಗಿಯ ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷರಾದ ಮಲ್ಲಿಕಾರ್ಜುನ ಕುಸ್ತಿ, ಭಾಲ್ಕಿ ಸಿ.ಪಿ.ಐ ಹನಮರೆಡ್ಡಿ ಭೋವಿ, ಜಹಿರಾಬಾದಿನ ರಾಮಲು ವಡ್ಡೇರಾ, ಧನರಾಜ ವಡೆಯರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯ ನಿರ್ದೇಶಕ ಸಿದ್ದಮ ಶಿಂಧೆ ವಿವಿಧ ಸಮಾಜದ ಮುಖಂಡರು ಇದ್ದರು.

# ತೀವ್ರವಾಗಿ ಕುಸಿದ ಬಾರ್ಡರ್ 2 ಕಲೆಕ್ಷನ್

'ಧುರಂಧರ್' ರೀತಿಯೇ 'ಬಾರ್ಡರ್ 2' ಕೂಡ ಕಲೆಕ್ಷನ್ ಮಾಡಬಹುದು ಎಂದು ನಿರೀಕ್ಷೆ ಮಾಡಲಾಗಿತ್ತು. ಆದರೆ ಆ ರೀತಿ ಆಗಿಲ್ಲ. ದಿನ ಕಳೆದಂತೆ ಈ ಸಿನಿಮಾದ ಕಲೆಕ್ಷನ್ ಗಣನೀಯವಾಗಿ ಕುಸಿಯಲು ಶುರುವಾಗಿದೆ.

11ನೇ ದಿನದಲ್ಲಿ 'ಬಾರ್ಡರ್ 2' ಕಲೆಕ್ಷನ್ ಒಂದಂಕಿಗೆ ಕುಸಿದಿದೆ. ಬಹುತಾರಾಗಣ ಇರುವ 'ಬಾರ್ಡರ್ 2' ಸಿನಿಮಾ ಆರಂಭದಲ್ಲೇ ಜೋರಾಗಿ ಅಬ್ಬರಿಸಿತು. ದೇಶಭಕ್ತಿ ಕಥೆ ಹೊಂದಿರುವ ಈ ಚಿತ್ರಕ್ಕೆ ಜನರಿಂದ ಮೆಚ್ಚುಗೆ ಸಿಕ್ಕಿತು. ಅದರ ಪರಿಣಾಮವಾಗಿ ಬಾಕ್ಸ್ ಆಫೀಸ್‌ನಲ್ಲಿ



ಒಳ್ಳೆಯ ಕಲೆಕ್ಷನ್ ಆಯಿತು. ಆದರೆ ಈಗ ಈ ಸಿನಿಮಾದ ಕಲೆಕ್ಷನ್ ಕುಸಿತ ಕಂಡಿದೆ. 11ನೇ ದಿನಕ್ಕೆ ಈ ಸಿನಿಮಾದ ಕಲೆಕ್ಷನ್ ತೀವ್ರವಾಗಿ ಕುಸಿದಿದೆ. ಸನ್ನಿ ಡಿಯೋಲ್, ವರುಣ್ ಧವನ್, ಅಹಾನ್ ಶೆಟ್ಟಿ, ದಿಲ್ಜಿತ್ ದೊಸಾಂಜ್ ಮುಂತಾದವರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಮೊದಲ ದಿನ 'ಬಾರ್ಡರ್ 2' ಸಿನಿಮಾ 30 ಕೋಟಿ ರೂಪಾಯಿ ಗಳಿಸಿತ್ತು. 2ನೇ ದಿನ 36.5 ಕೋಟಿ ರೂಪಾಯಿ ಕಲೆಕ್ಷನ್ ಆಯಿತು. ಮೂರನೇ ದಿನ 54.5 ಕೋಟಿ ರೂಪಾಯಿ ಗಳಿಕೆ ಆಯಿತು. 4ನೇ ದಿನ ಬರೋಬ್ಬರಿ 59 ಕೋಟಿ ರೂಪಾಯಿ ಆದಾಯ ಹರಿದುಬಂತು. ಆ ಬಳಿಕ 'ಬಾರ್ಡರ್ 2' ಸಿನಿಮಾದ ಕಲೆಕ್ಷನ್‌ನಲ್ಲಿ ಕುಸಿತ ಕಾಣಲು ಆರಂಭ ಆಯಿತು. 'ಬಾರ್ಡರ್ 2' ಚಿತ್ರದ ಕಲೆಕ್ಷನ್ 11ನೇ ದಿನಕ್ಕೆ ಒಂದಕ್ಕಿಗೆ ಕುಸಿದಿದೆ.

ವರದಿಗಳ ಪ್ರಕಾರ 11ನೇ ದಿನ ಈ ಸಿನಿಮಾಗೆ ಕೇವಲ 5.75 ಕೋಟಿ ರೂಪಾಯಿ ಕಲೆಕ್ಷನ್ ಆಗಿದೆ. ಆದ್ದರಿಂದ ಚಿತ್ರತಂಡಕ್ಕೆ ಮುಂದೇನು ಎಂಬ ಚಿಂತೆ ಶುರು ಆಗಿರುತ್ತದೆ. ವಾರಾಂತ್ಯದ ದಿನಗಳಲ್ಲಿ ಮಾತ್ರ ಸ್ವಲ್ಪ ಚೇತರಿಕೆ ಕಾಣುವ ಸಾಧ್ಯತೆ ಇರುತ್ತದೆ. ಏನಾಗುತ್ತದೆ ಎಂಬುದನ್ನು ಕಾದು ನೋಡಬೇಕು. ಈವರೆಗೂ ಭಾರತದ ಬಾಕ್ಸ್ ಆಫೀಸ್‌ನಲ್ಲಿ 'ಬಾರ್ಡರ್ 2' ಸಿನಿಮಾಗೆ 281 ಕೋಟಿ ರೂಪಾಯಿ ಕಮಾಯಿ ಆಗಿದೆ. ಇದು ಉತ್ತಮ ಕಲೆಕ್ಷನ್ ಹೌದಾದರೂ ದೊಡ್ಡ ಮಟ್ಟದ ನಿರೀಕ್ಷೆಯನ್ನು ತಲುಪಿಲ್ಲ ಎನ್ನಬಹುದು. ವಿಮರ್ಶೆಯ ದೃಷ್ಟಿಯಿಂದ ನೋಡಿದರೆ ಪ್ರೇಕ್ಷಕರು ಈ ಚಿತ್ರಕ್ಕೆ ಮಿಶ್ರಪ್ರತಿಕ್ರಿಯೆ ನೀಡಿದ್ದಾರೆ. ವಿಎಫ್‌ಎಕ್ಸ್ ಗುಣಮಟ್ಟದ ಬಗ್ಗೆ ಟೀಕೆ ವ್ಯಕ್ತವಾಗಿದೆ. 'ಧುರಂಧರ್' ಸಿನಿಮಾದಲ್ಲಿ ಕೂಡ ದೇಶಭಕ್ತಿ ಕಥಾಹಂದರ ಇತ್ತು. ಆ ಸಿನಿಮಾ ಸಾವಿರಾರು ಕೋಟಿ ರೂಪಾಯಿ ಕಲೆಕ್ಷನ್ ಮಾಡಿತ್ತು. ಆ ಬಳಿಕ ರಿಲೀಸ್ ಆಗಿದ್ದೇ 'ಬಾರ್ಡರ್ 2' ಸಿನಿಮಾ. ಈ ಸಿನಿಮಾ ನೋಡಿದ ಎಲ್ಲರೂ 'ಧುರಂದರ್' ಜೊತೆ ಹೋಲಿಕೆ ಮಾಡಲು ಆರಂಭಿಸಿದರು. ಜನರಿಗೆ 'ಧುರಂಧರ್' ರೀತಿಯ ಗುಣಮಟ್ಟ 'ಬಾರ್ಡರ್ 2' ಸಿನಿಮಾದಲ್ಲಿ ಕಾಣಿಸಲಿಲ್ಲ.




# ಲ್ಯಾಂಡ್‌ಲಾರ್ಡ್ ಚಿತ್ರಕ್ಕೆ ತೆರಿಗೆ ವಿನಾಯಿತಿ

ದುನಿಯಾ ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಸಿನಿಮಾ ಜನವರಿ 23ರಂದು ತೆರೆಕಂಡು ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿದೆ. ಸಾಮಾಜಿಕ ಅಸಮಾನತೆ ಮತ್ತು ಜಾತಿ ಶೋಷಣೆ ಕುರಿತ ಈ ಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ತೆರಿಗೆ ವಿನಾಯಿತಿ ಘೋಷಿಸಿದ್ದಾರೆ. ಈ ಬೆಂಬಲದಿಂದ 'ಲ್ಯಾಂಡ್‌ಲಾರ್ಡ್' ಹೆಚ್ಚು ಜನರನ್ನು ತಲುಪಲಿದ್ದು, 70ರ ದಶಕದ ಜಾತಿ ಸಂಘರ್ಷ ಹಾಗೂ ರೈತರ ಬವಣೆಯನ್ನು ಪರಿಣಾಮಕಾರಿಯಾಗಿ ಸಮಾಜಕ್ಕೆ ತಲುಪಿಸಲು ನೆರವಾಗಲಿದೆ.

ಸಾಮಾಜಿಕ ಅಸಮಾನತೆ ಹಾಗೂ ಜಾತಿ ಶೋಷಣೆ ವಿಷಯವಿರುವ ದುನಿಯಾ ವಿಜಯ್ ನಟನೆಯ 'ಲ್ಯಾಂಡ್‌ಲಾರ್ಡ್' ಸಿನಿಮಾ ಜನವರಿ 23ರಂದು ರಿಲೀಸ್ ಆಗಿದೆ. ವಿಮರ್ಶಕರಿಂದ ಈ ಚಿತ್ರ ಮೆಚ್ಚುಗೆ ಪಡೆದಿದೆ. ಈ ಸಿನಿಮಾಗೆ ತೆರಿಗೆ ವಿನಾಯಿತಿ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ. ಇದರಿಂದ ಚಿತ್ರಕ್ಕೆ ಮತ್ತಷ್ಟು ಬೆಂಬಲ ಸಿಕ್ಕಂತೆ ಆಗಿದ್ದು, ಹೆಚ್ಚು ಜನರನ್ನು ತಲುಪಲು ಈ ಬೆಳವಣಿಗೆ ಸಹಕಾರಿ ಆಗಲಿದೆ. 'ಲ್ಯಾಂಡ್‌ಲಾರ್ಡ್ 70ರ ದಶಕದ ಕಥೆ ಹೊಂದಿದೆ. ರಾಚಯ್ಯ (ದುನಿಯಾ ವಿಜಯ್), ನಿಂಗವ್ವ (ರಚಿತಾ ರಾಮ್) ಮಗಳು ಭಾಗ್ಯಾ (ರಿತನ್ಯಾ ರಾಮ್) ಜೊತೆ ಹಾಯಾಗಿ ಜೀವನ ನಡೆಸುತ್ತಿರುತ್ತಾರೆ. ಆ ಊರಿನಲ್ಲಿ ಸಣ್ಣ ಧಣಿ (ರಾಜ ಬಿ. ಶೆಟ್ಟಿ) ಪಾರುಪತ್ಯ. ಆತ ಹೇಳಿದಂತೆ ನಡೆಯಬೇಕು.





# ಒಂದು ಹಾಡಿನಿಂದ 70 ಕೋಟಿ ಲಾಭ

## ಹಾಡು ಮಾಡಿದವನಿಗೆ ಸಿಕ್ಕಿದ್ದೆಷ್ಟು

ಸಿನಿಮಾ ಹಾಡುಗಳನ್ನು ಯೂಟ್ಯೂಬ್, ಸ್ಪೋಟಿಫೈ, ಅಮೆಜಾನ್ ಮ್ಯೂಸಿಕ್, ಜಿಯೋ ಸಾವನ್ ರೀತಿಯ ಅಪ್ಲಿಕೇಶನ್‌ಗಳಲ್ಲಿ ಹಾಡುಗಳನ್ನು ಕೇಳುತ್ತಾರೆ. ಯೂಟ್ಯೂಬ್‌ಗಳೆಲ್ಲ ಹಾಡುಗಳನ್ನು ಜನ ಉಚಿತವಾಗಿ ನೋಡುತ್ತಾರೆ. ಆದರೆ ಇದರಿಂದಲೇ ಆಡಿಯೋ ಸಂಸ್ಥೆಗಳಿಗೆ ಭಾರಿ ಮೊತ್ತದ ಹಣ ಬರುತ್ತದೆ. ಈ ಬಗ್ಗೆ ಇದೀಗ ಹಿಂದಿಯ ಸಂಗೀತ ನಿರ್ದೇಶಕರೊಬ್ಬರು ಮಾತನಾಡಿದ್ದಾರೆ.

ಸಿನಿಮಾಗಳ ಆಡಿಯೋ ಹಕ್ಕುಗಳು ಕೋಟ್ಯಂತರ ರೂಪಾಯಿಗೆ ಮಾರಾಟ ಆಗುತ್ತವೆ. ಮುಂಚೆಯೆಲ್ಲ ಜನ ಸಿನಿಮಾಗಳ ಸಿಡಿ, ಕ್ಯಾಸೆಟ್ ಖರೀದಿ ಮಾಡಿ ಹಾಡು ಕೇಳುತ್ತಿದ್ದರು. ಆದರೆ ಈಗ ಯೂಟ್ಯೂಬ್, ಸ್ಪೋಟಿಫೈ, ಅಮೆಜಾನ್ ಮ್ಯೂಸಿಕ್, ಜಿಯೋ ಸಾವನ್ ರೀತಿಯ ಅಪ್ಲಿಕೇಶನ್‌ಗಳಲ್ಲಿ ಹಾಡುಗಳನ್ನು ಕೇಳುತ್ತಾರೆ. ಯೂಟ್ಯೂಬ್‌ಗಳೆಲ್ಲ ಹಾಡುಗಳನ್ನು ಜನ ಉಚಿತವಾಗಿ ನೋಡುತ್ತಾರೆ. ಆದರೆ ಇದರಿಂದಲೇ ಆಡಿಯೋ ಸಂಸ್ಥೆಗಳಿಗೆ ಭಾರಿ ಮೊತ್ತದ ಹಣ ಬರುತ್ತದೆ. ಈ ಬಗ್ಗೆ ಇದೀಗ ಹಿಂದಿಯ ಸಂಗೀತ ನಿರ್ದೇಶಕರೊಬ್ಬರು ಮಾತನಾಡಿದ್ದಾರೆ. ಅಮಾಲ್ ಮಲ್ಲಿಕ್, ಬಾಲಿವುಡ್‌ನ ಜನಪ್ರಿಯ ಸಂಗೀತ ನಿರ್ದೇಶಕ ಮತ್ತು ಗಾಯಕ ಸಹ. ಹಲವಾರು ಅತ್ಯುತ್ತಮ ಸಿನಿಮಾ ಹಾಡುಗಳನ್ನು ನೀಡಿದ್ದಾರೆ. ಆದರೆ ಕೆಲವು ವಿವಾದಗಳಿಗೆ ವಿಶೇಷವಾಗಿ ಸಂಗೀತ ಸಂಸ್ಥೆಗಳ ವಿರೋಧವನ್ನು ಕಟ್ಟಿಕೊಂಡು ಅವಕಾಶ ವಂಚಿತರಾಗಿದ್ದಾರೆ. ಈ ಬಗ್ಗೆ ಇದೀಗ ಅಮಾಲ್ ಮಲ್ಲಿಕ್ ಅವರು ಮಾತನಾಡಿದ್ದು, ಸಂಗೀತ ಸಂಸ್ಥೆಗಳು ಸಂಗೀತಗಾರರಿಗೆ ಮಾಡುವ ಅನ್ಯಾಯವನ್ನು ವಿವರಿಸಿದ್ದಾರೆ. ತಮ್ಮ ಒಂದೇ ಒಂದು ಹಾಡಿನಿಂದ ಸಂಗೀತ ಸಂಸ್ಥೆಗೆ ಕೋಟ್ಯಂತರ ರೂಪಾಯಿ ಹಣ ಬಂತೆಂದು ತಿಳಿಸಿದ್ದಾರೆ. ರಣ್‌ಬೀರ್ ಕಪೂರ್, ಅರ್ಜುನ್ ರಾಮ್‌ಪಾಲ್, ಜಾಕ್ವೆಲಿನ್ ಫರ್ನಾಂಡೀಸ್ ನಟನೆಯ 'ರಾಯ್' ಸಿನಿಮಾಕ್ಕೆ ಅಮಾಲ್ ಮಲ್ಲಿಕ್ ಸಂಗೀತ ನೀಡಿದ್ದರು.



# ಈಗ ಹೇಗಾಗಿದ್ದಾರೆ ನೋಡಿ ನಟಿ ಪಾರ್ವತಿ

'ಮಿಲನ' ಸಿನಿಮಾದಲ್ಲಿ ಪುನೀತ್ ರಾಜ್‌ಕುಮಾರ್ ಜೊತೆ ತೆರೆಹಂಚಿಕೊಂಡ ಪಾರ್ವತಿ ಮೆನನ್ ಅವರು ಸೋಶಿಯಲ್ ಮೀಡಿಯಾದಲ್ಲಿ ಆಯಕ್ಟೀವ್ ಆಗಿದ್ದಾರೆ. ಸಿನಿಮಾ ವಿಷಯದಲ್ಲಿ ಚ್ಯೂಸಿ ಆಗಿರೋ ಅವರು, ಅಲ್ಲೊಂದು, ಇಲ್ಲೊಂದು ಸಿನಿಮಾ ಮಾಡುತ್ತಾರೆ. ಈಗ ಅವರ ಹೊಸ ಫೋಟೋಗಳು ವೈರಲ್ ಆಗಿ ಗಮನ ಸೆಳೆದಿವೆ.

ನಟಿ ಪಾರ್ವತಿ ಅವರ ಬಗ್ಗೆ ಯಾರಿಗೆ ತಾನೇ ಗೊತ್ತಿಲ್ಲ ಹೇಳಿ. 'ಮಿಲನ' ಸಿನಿಮಾ ನೋಡಿದ ಎಲ್ಲರಿಗೂ ಅವರ ಪರಿಚಯ ಇರುತ್ತದೆ. ಪುನೀತ್ ಜೊತೆ ಅವರು ತೆರೆ ಹಂಚಿಕೊಂಡಿದ್ದರು. ಈಗ 'ಮಿಲನ' ಸಿನಿಮಾ ನಾಯಕಿ ತುಂಬಾನೇ ಬದಲಾಗಿದ್ದಾರೆ. 'ಮಿಲನ' ಸಿನಿಮಾ ತೆರೆಗೆ ಬಂದಿದ್ದು 2007ರಲ್ಲಿ. ಅಂದರೆ, ಚಿತ್ರ ಬಂದು 20 ವರ್ಷಗಳು ಕಳೆಯುತ್ತಾ ಬಂದಿವೆ. ಈಗ ಅವರ ಹೊಸ ಫೋಟೋಗಳು ಗಮನ ಸೆಳೆದಿವೆ.

ಈ ಫೋಟೋದಲ್ಲಿ ಅವರು ಮಿರಮಿರ ಮಿಂಚಿದ್ದಾರೆ. ಈ ಫೋಟೋಗಳು ಗಮನ ಸೆಳೆದಿವೆ. ಪಾರ್ವತಿ ಮೆನನ್ ಅವರು ಕಾರ್ಯಕ್ರಮ ಒಂದಕ್ಕಾಗಿ ಇತ್ತೀಚೆಗೆ ವೇದಿಕೆ ಏರಿದ್ದಾರೆ. ಈ ವೇದಿಕೆ ಮೇಲೆ ಕರಿ ಬಣ್ಣದ ಡ್ರೆಸ್ ಹಾಕಿ ಗಮನ ಸೆಳೆದಿದ್ದಾರೆ. ಪಾರ್ವತಿ ಮೆನನ್ ಅವರ ಲುಕ್ ಗಮನ ಸೆಳೆಯೋ ರೀತಿಯಲ್ಲಿ ಇದೆ. ನಟಿಯರು ಲುಕ್ ಬಗ್ಗೆ ಸಾಕಷ್ಟು ಗಮನ ಹರಿಸುತ್ತಾರೆ. ಇದರಲ್ಲಿ ಕೊಂಚ ವ್ಯತ್ಯಾಸ ಆದರೂ ಟ್ರೋಲ್‌ಗೆ ಒಳಗಾಗಬೇಕಾಗುತ್ತದೆ. ಈಗ ನಟಿಯ ದೇಹದ ತೂಕ ಹೆಚ್ಚಿದ್ದಕ್ಕೆ ಅನೇಕರು ಟೀಕೆ ಮಾಡಿದ್ದಾರೆ. ಆದರೆ, ಇದಕ್ಕೆ ಪಾರ್ವತಿ ತಲೆಕೆಡಿಸಿಕೊಂಡಿಲ್ಲ. ಸಾಕಷ್ಟು ನಟಿಯರು ಬಾಡಿ ಶೇಮಿಂಗ್ ಸಂತ್ರಸ್ತೆ ಆದ ಉದಾಹರಣೆ ಇದೆ.



# ಧನುಷ್ ಜೊತೆ ಡೇಟಿಂಗ್ ಗಾಸಿಪ್

## ಪ್ರೀತಿ ಬಗ್ಗೆ ಮಾತಾಡಿದ ಮೃಣಾಲ್

ಸ್ಟಾರ್ ಕಲಾವಿದರಾದ ಮೃಣಾಲ್ ಠಾಕೂರ್ ಮತ್ತು ಧನುಷ್ ಅವರು ಸಿಕ್ಕಾಪಟ್ಟೆ ಕ್ಲೋಸ್ ಆಗಿದ್ದಾರೆ. ಅವರಿಬ್ಬರ ನಡುವೆ ಪ್ರೀತಿ ಮೂಡಿದೆ ಎಂಬ ಗಾಸಿಪ್ ಇದೆ. ಅದನ್ನು ಅವರು ಬಹಿರಂಗವಾಗಿ ಒಪ್ಪಿಕೊಂಡಿಲ್ಲವಾದರೂ ಗಾಸಿಪ್ ಜೋರಾಗಿ ಕೇಳಿಬರುತ್ತಿದೆ.

ಈ ನಡುವೆ ಮಣಾಲ್ ಅವರು ಪ್ರೀತಿಯ ಬಗ್ಗೆ ಮಾತನಾಡಿದ್ದಾರೆ. ನಟಿ ಮೃಣಾಲ್ ಠಾಕೂರ್ ಅವರು ನಟ ಧನುಷ್ ಜೊತೆ ಡೇಟಿಂಗ್ ಮಾಡುತ್ತಿದ್ದಾರೆ ಎಂಬ ಗಾಸಿಪ್ ಇದೆ. ಸದ್ಯಕ್ಕಂತೂ ಈ ಬಗ್ಗೆ ಅವರಿಬ್ಬರು ಸಾರ್ವಜನಿಕವಾಗಿ ಮಾತನಾಡಿಲ್ಲ. ಆದರೂ ಹಲವು ಅಂತೆ-ಕಂತೆಗಳು ಕೇಳಿಬರುತ್ತಿವೆ. ಬಾಲಿವುಡ್‌ನಲ್ಲಿ ಮಾತ್ರವಲ್ಲದೇ ದಕ್ಷಿಣ ಭಾರತದಲ್ಲೂ ಡಿಮ್ಯಾಂಡ್ ಹೊಂದಿರುವ ಮೃಣಾಲ್ ಠಾಕೂರ್ ಅವರು ಈಗ ಪ್ರೀತಿಯ ಬಗ್ಗೆ ಮಾತನಾಡಿದ್ದಾರೆ. ಎಲ್ಲರಿಗೂ ಪ್ರೀತಿ ಆಗಬೇಕು ಎಂದು ಅವರು ಹೇಳಿದ್ದಾರೆ. ಅಂದಹಾಗೆ, ಅವರು ಈ ವಿಷಯ ಮಾತನಾಡಿರುವುದು ಹೊಸ ಹಾಡಿನ ಪ್ರಚಾರದ ವೇಳೆ. ಮೃಣಾಲ್ ಠಾಕೂರ್ ಮತ್ತು ದುಲ್ಕರ್ ಸಲ್ಮಾನ್ ಅವರು 'ಸೀತಾ ರಾಮಂ' ಸಿನಿಮಾದಲ್ಲಿ ಜೋಡಿಯಾಗಿ ನಟಿಸಿದ್ದರು. ಈಗ ಅವರಿಬ್ಬರು ಜೊತೆಯಾಗಿ 'ಬೀಗಿ ಬೀಗಿ..' ಹಾಡಿನಲ್ಲಿ ಅಭಿನಯಿಸಿದ್ದಾರೆ. ಎ.ಆರ್. ರೆಹಮಾನ್ ಅವರು ಈ ಮ್ಯೂಸಿಕ್ ವಿಡಿಯೋಗೆ ಸಂಗೀತ ನೀಡಿದ್ದಾರೆ. ಈ ಲವ್ ಸಾಂಗ್ ಬಗ್ಗೆ ಮಾತನಾಡುವಾಗ ಮೃಣಾಲ್ ಠಾಕೂರ್ ಅವರು ಪ್ರೀತಿ ಕುರಿತು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

ಈ ಭೂಮಿಯ ಮೇಲಿರುವ ಎಲ್ಲರಿಗೂ ಪ್ರೀತಿ ಆಗಬೇಕು. ಅದು ನಿಮ್ಮನ್ನು ಉತ್ತಮ ವ್ಯಕ್ತಿಯನ್ನಾಗಿ ಮಾಡುತ್ತದೆ. ನಿಮ್ಮೊಳಗಿನ ಮಗುವಿನಂತಹ ವ್ಯಕ್ತಿತ್ವವನ್ನು ಅವರು ಪೋಷಿಸುತ್ತದೆ. ಜಗತ್ತಿನಲ್ಲಿನ ಸುಂದರವಾಗಿ ಸಂಗತಿಗಳಲ್ಲಿ ಪ್ರೀತಿ ಕೂಡ ಒಂದಾಗಿದೆ. ಎಲ್ಲರಿಗೂ ಜೀವನದಲ್ಲಿ ಪ್ರೀತಿ ಸಿಗಲಿ ಎಂದು ನಾನು ಪ್ರಾರ್ಥಿಸುತ್ತೇನೆ' ಎಂದು ಮೃಣಾಲ್ ಠಾಕೂರ್ ಅವರು ಹೇಳಿದ್ದಾರೆ.

# ಆತನಿಗೆ ಚಾನ್ಸ್ ಕೊಟ್ರೆ ವಿಶ್ವಕಪ್ ನಮ್ದೇ

## ಬಿಸಿಸಿಐಗೆ ಫ್ಯಾನ್ಸ್ ಒತ್ತಾಯ

ಟಿ20 ವಿಶ್ವಕಪ್ ಮೊದಲ ಬಾರಿಗೆ 2007 ರಲ್ಲಿ ನಡೆದಿತ್ತು. ಟೀಮ್ ಇಂಡಿಯಾ ಫೈನಲ್‌ನಲ್ಲಿ ಪಾಕ್ ಮಣಿಸಿ ವಿಶ್ವ ಚಾಂಪಿಯನ್ ಆಗಿತ್ತು. ನಂತರ 2024ರಲ್ಲಿ ರೋಹಿತ್ ನೇತೃತ್ವದಲ್ಲಿ ಟಿ20 ವಿಶ್ವಕಪ್ ಗೆದ್ದಿತು. ಪ್ರಸ್ತುತ ಭಾರತೀಯ ತಂಡ ಬಲಿಷ್ಠವಾಗಿದೆ. ಟಿ20 ವಿಶ್ವಕಪ್‌ಗೆ ಮುಂಚಿತ ಹಲವು ಬ್ಯಾಟರ್‌ಗಳು ಅಮೋಘ ಪ್ರದರ್ಶನ ತೋರುತ್ತಿದ್ದಾರೆ. ಆದರೆ ಎರಡುವರೆ ವರ್ಷಗಳ ಬಳಿಕ ತಂಡಕ್ಕೆ ಮರಳಿದ ಒಬ್ಬ ಬ್ಯಾಟ್ಸ್‌ಮನ್ ಎದುರಾಳಿಗಳನ್ನು ಭಯಭೀತಗೊಳಿಸುತ್ತಿದ್ದಾರೆ.

ಇತ್ತೀಚೆಗೆ ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಇಶಾನ್ ಕಿಶನ್ ಅನಿರೀಕ್ಷಿತ ಕಮ್‌ಬ್ಯಾಕ್ ಮಾಡಿದ್ದರು. ತಿಲಕ್ ವರ್ಮಾ ಗಾಯದ ಕಾರಣ ಸರಣಿಯನ್ನು ತಪ್ಪಿಸಿಕೊಂಡರು. ಪರಿಣಾಮವಾಗಿ, ಅವರನ್ನು ಭಾರತೀಯ ತಂಡದಿಂದ ಹೊರಬಿದ್ದರು. ಇಶಾನ್ ಕಿಶನ್ ಅವರ ಸ್ಥಾನಕ್ಕೆ ಪ್ಲೇಯಿಂಗ್ ಇಲೆವೆನ್‌ನಲ್ಲಿ ಬಂದರು. ಅವರು ಆಡಿದ ಎಲ್ಲಾ 4 ಪಂದ್ಯಗಳಲ್ಲಿಯೂ ಮೂರು ಪಂದ್ಯಗಳಲ್ಲಿ ಅಬ್ಬರದ ಬ್ಯಾಟಿಂಗ್ ಪ್ರದರ್ಶನ ತೋರಿದರು. ಈ ಸರಣಿಯಲ್ಲಿ ಒಂದು ಶತಕ ಮತ್ತು ಅರ್ಧಶತಕ ಸಿಡಿಸಿದ್ದರು.

ಇನ್ನು ಆರಂಭಿಕನಾಗಿ ಎಲ್ಲಾ ಪಂದ್ಯಗಳಲ್ಲೂ ಆಡಿದ ಸಂಜು ಸ್ಯಾಮ್ಸನ್ ಕಳಪೆ ಪ್ರದರ್ಶನ ನೀಡಿದ್ದಾರೆ. ಪರಿಣಾಮವಾಗಿ, ಫೆಬ್ರವರಿ 7 ರಿಂದ ಪ್ರಾರಂಭವಾಗುವ ಟಿ 20 ವಿಶ್ವಕಪ್‌ನಲ್ಲಿ ಇಶಾನ್ ಕಿಶನ್ ಟೀಮ್ ಇಂಡಿಯಾದ ಆರಂಭಿಕ ಆಟಗಾರನಾಗಿ ಕಣಕ್ಕೆ ಇಳಿಯಬಹುದು ಎನ್ನಲಾಗುತ್ತಿದೆ. ಪ್ರಸ್ತುತ ಸೂಪರ್ ಫಾರ್ಮ್‌ನಲ್ಲಿರುವ ಕಾರಣ, ತಂಡದ ಆಡಳಿತವು ಅವರ ಮೇಲೆ ನಂಬಿಕೆ ಇಟ್ಟಿದೆ.


ಟೀಮ್ ಇಂಡಿಯಾ ಈಗಾಗಲೇ ಅಭಿಷೇಕ್ ಶರ್ಮಾ ರೂಪದಲ್ಲಿ ಸ್ಫೋಟಕ ಆರಂಭಿಕ ಆಟಗಾರನನ್ನು ಹೊಂದಿದೆ. ಇಶಾನ್ ಅವರೊಂದಿಗೆ ಇದ್ದರೆ, ವಿಶ್ವಕಪ್‌ನಲ್ಲಿ ಟೀಮ್ ಇಂಡಿಯಾವನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ ಎಂದು ಅಭಿಮಾನಿಗಳು ಬಿಸಿಸಿಐಗೆ ಸಲಹೆ ಮಾಡುತ್ತಿದ್ದಾರೆ.

ಇಶಾನ್ ಕಿಶನ್ 2021ರಲ್ಲಿ ಪದಾರ್ಪಣೆ ಮಾಡಿದ್ದರು. ಆದರೆ 2023ರವರೆಗೆ ಖಾಯಂ ಸ್ಥಾನ ಸಿಕ್ಕಿರಲಿಲ್ಲ. ಆದರೆ 2023ರಲ್ಲಿ ವರ್ಷ ಏಷ್ಯಾ ಕಪ್‌ನಲ್ಲಿ ಅವರು ಅದ್ಭುತ ಪ್ರದರ್ಶನ ನೀಡಿದರು. ಪರಿಣಾಮವಾಗಿ, ಅವರು ಟಿ20 ವಿಶ್ವಕಪ್ ತಂಡಕ್ಕೆ ಆಯ್ಕೆಯಾದರು. ಆದರೆ, ಅವರಿಗೆ ಆಡುವ ಹನ್ನೊಂದರಲ್ಲಿ ಅವಕಾಶ ಸಿಗಲಿಲ್ಲ. ನಂತರ, ಅವರ ಕೆಲವು ಆತುರದ ನಿರ್ಧಾರಗಳಿಂದಾಗಿ, ಅವರು ಎರಡು ವರ್ಷಗಳ ಕಾಲ ತಂಡದಿಂದ ಹೊರಗುಳಿದಿದ್ದರು. ಆದರೆ 2025 ರಿಂದ ಅವರ ಆಟದ ಶೈಲಿ ಬದಲಾಯಿತು. ದೇಶಿ ಕ್ರಿಕೆಟ್‌ನಲ್ಲಿ ರನ್‌ಗಳ ಮಳೆ ಸುರಿಸಿ ರಾಷ್ಟ್ರೀಯ ತಂಡಕ್ಕೆ ಕಮ್‌ಬ್ಯಾಕ್ ಮಾಡಿದ್ದಾರೆ.

ಒಂದು ಕಡೆ ಸಂಜು ಸ್ಯಾಮ್ಸನ್ ಟಿ20 ಸರಣಿಯಲ್ಲಿ ವೈಫಲ್ಯ ಅನುಭವಿಸುತ್ತಿದ್ದರೆ, ಮತ್ತೊಂದು ತಿಲಕ್ ವರ್ಮಾ ಅನುಪಸ್ಥಿತಿಯಲ್ಲಿ ಸಿಕ್ಕ ಅವಕಾಶವನ್ನ ಇಶಾನ್ ಕಿಶಾನ್ ಅದ್ಭುತವಾಗಿ ಬಳಿಸಿಕೊಂಡು, ತಮ್ಮ ಫಾರ್ಮ್ ಮುಂದುವರಿಸಿದ್ದಾರೆ. ಇವರಿಬ್ಬರ ಪ್ರದರ್ಶನ ಟೀಮ್ ಇಂಡಿಯಾದ ಆಡುವ ಹನ್ನೊಂದರ ಸಮೀಕರಣಗಳು ಬದಲಾಗಿಸಿವೆ. ಇಶಾನ್ ಕಿಶಾನ್ ಟಿ20 ವಿಶ್ವಕಪ್‌ನಲ್ಲಿ ಆರಂಭಿಕ ಆಟಗಾರನಾಗಿ ಆಡಬೇಕೆಂಬ ಕೂಗು ಹೆಚ್ಚಾಗುತ್ತಿದೆ.

ಕಳೆದ ವರ್ಷ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಅವರು ಜಾರ್ಖಂಡ್ ತಂಡದ ನಾಯಕರಾಗಿದ್ದರು. ಅವರು ಶತಕಗಳ ಮೇಲೆ ಶತಕಗಳನ್ನು ಗಳಿಸಿ ತಮ್ಮ ತಂಡವನ್ನು ಚಾಂಪಿಯನ್ ಮಾಡಿದ್ದರು. ನಂತರದ ವಿಜಯ್ ಹಜಾರೆ ಟ್ರೋಫಿಯಲ್ಲೂ ಅವರು ಉತ್ತಮ ಪ್ರದರ್ಶನ ನೀಡಿದರು. ಪರಿಣಾಮವಾಗಿ, ಅವರಿಗೆ ಬಿಸಿಸಿಐನಿಂದ ಕರೆ ಬಂತು. ಅವರನ್ನು ಬ್ಯಾಕಪ್ ವಿಕೆಟ್ ಕೀಪರ್ ಮತ್ತು ಬ್ಯಾಕಪ್ ಓಪನರ್ ಆಗಿ ಆಯ್ಕೆ ಮಾಡಲಾಯಿತು.





# ಪಾಕ್ ಸ್ಪಿನ್ನರ್‌ನ ಬೌಲಿಂಗ್ ಆಕ್ಷನ್ ಕಾನೂನು ಬದ್ಧವೇ

ಪಾಕಿಸ್ತಾನ್ ತಂಡದ ಸ್ಪಿನ್ನರ್ ಉಸ್ಮಾನ್ ತಾರಿಖ್ ಅವರ ಬೌಲಿಂಗ್ ಆಕ್ಷನ್ ಚರ್ಚೆಗೆ ಕಾರಣವಾಗಿದೆ. ಲಾಹೋರ್‌ನ ಗದ್ದಾಫಿ ಸ್ಟೇಡಿಯಂನಲ್ಲಿ ನಡೆದ ಪಾಕಿಸ್ತಾನ್ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಉಸ್ಮಾನ್ ತಾರಿಖ್ ಎಸೆತದಲ್ಲಿ ಆಸ್ಟ್ರೇಲಿಯಾ ದಾಂಡಿಗ ಕ್ಯಾಮರೋನ್ ಗ್ರೀನ್ ಔಟಾಗಿದ್ದರು. ಹೀಗೆ ಔಟಾಗಿ ಪೆವಿಲಿಯನ್ ಕಡೆ ಹೆಜ್ಜೆ ಹಾಕಿದ್ದ ಗ್ರೀನ್ ಪಾಕ್ ಸ್ಪಿನ್ನರ್‌ನ ಬೌಲಿಂಗ್ ಆಕ್ಷನ್ ಬಗ್ಗೆ ಪ್ರಶ್ನೆಗಳೆನ್ನೆತ್ತಿದ್ದರು. ಇದರ ಬೆನ್ನಲ್ಲೇ ಸೋಷಿಯಲ್ ಮೀಡಿಯಾದಲ್ಲೂ ಉಸ್ಮಾನ್ ತಾರಿಖ್ ಅವರ ಬೌಲಿಂಗ್ ಶೈಲಿ ಬಗ್ಗೆ ಚರ್ಚೆ ಶುರುವಾಗಿತ್ತು. ಇದೀಗ ಈ ಚರ್ಚೆಗಳಿಗೆ ಭಾರತದ ಅಂಪೈರ್ ಅನಿಲ್ ಚೌಧರಿ ತೆರೆ ಎಳೆದಿದ್ದಾರೆ.

ಉಸ್ಮಾನ್ ತಾರಿಖ್ ಅವರ ಬೌಲಿಂಗ್ ಶೈಲಿಯ ಬಗ್ಗೆ ಮಾತನಾಡಿದ ಅನಿಲ್ ಚೌಧರಿ, ಅವರ ಬೌಲಿಂಗ್‌ನಲ್ಲಿ ಯಾವುದೇ ತಪ್ಪು ಅಥವಾ ಅನುಮಾನಾಸ್ಪದತೆಯನ್ನು ಕಂಡು ಬರುತ್ತಿಲ್ಲ. ತಾರಿಕ್ ಅವರ ಬೌಲಿಂಗ್ ಶೈಲಿ ಸ್ವಲ್ಪ ಸೈಡ್-ಆರ್ಮ್ ಆಗಿದ್ದು, ಅವರು ಚೆಂಡನ್ನು ಎಸೆಯಲು ತುಸು ವಿಳಂಬ ಮಾಡುತ್ತಿದ್ದಾರೆ ಅಷ್ಟೇ. ಆದಾಗ್ಯೂ, ಅವರು ಎಲ್ಲಾ ಚೆಂಡುಗಳನ್ನು ಒಂದೇ ರೀತಿಯಲ್ಲಿ ಬೌಲ್ ಮಾಡುತ್ತಿದ್ದಾರೆ. ಐಸಿಸಿ ಬೌಲಿಂಗ್ ಮಾರ್ಗಸೂಚಿಗಳ ಪ್ರಕಾರ, ತಮ್ಮ ತೋಳನ್ನು ಬಗ್ಗಿಸುವುದಿಲ್ಲವಾದ್ದರಿಂದ, ಬೌಲಿಂಗ್ ಶೈಲಿ ಸರಿಯಾಗಿದೆ. ಬೌಲಿಂಗ್ ಶೈಲಿ ಸ್ವಲ್ಪ ವಿಭಿನ್ನವಾಗಿದ್ದರೂ, ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಅಂಪೈರ್ ಅನಿಲ್ ಚೌಧರಿ ಹೇಳಿದ್ದಾರೆ.

# ಶ್ರೀಲಂಕಾ ಸ್ಕೋರ್ 189 173 ರನ್ ಬಾರಿಸಿ ಗೆದ್ದ ಇಂಗ್ಲೆಂಡ್



ಶ್ರೀಲಂಕಾ ವಿರುದ್ಧದ 2ನೇ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಭರ್ಜರಿ ಜಯ ಸಾಧಿಸಿದೆ. ಪಲ್ಲೆಕೆಲ್ಲೆ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 189 ರನ್ ಕಲೆಹಾಕಿದ್ದರು. 190 ರನ್‌ಗಳ ಗುರಿ ಪಡೆದ ಇಂಗ್ಲೆಂಡ್ ತಂಡದ ಇನಿಂಗ್ಸ್‌ಗೆ ಮಳೆ ಅಡ್ಡಿಯಾಯಿತು. ಹೀಗಾಗಿ ಡಕ್ ವರ್ತ್ ಲೂಯಿಸ್ ನಿಯಮದ ಪ್ರಕಾರ 17 ಓವರ್‌ಗಳಲ್ಲಿ 168 ರನ್‌ಗಳ ಗುರಿ ನೀಡಲಾಯಿತು. ಈ ಗುರಿಯನ್ನು ಬೆನ್ನತ್ತಿದ ಇಂಗ್ಲೆಂಡ್ ತಂಡ 16.4 ಓವರ್‌ಗಳಲ್ಲಿ 173 ರನ್ ಬಾರಿಸಿ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಮೂರು ಪಂದ್ಯದ ಟಿ20 ಸರಣಿಯಲ್ಲಿ ಇಂಗ್ಲೆಂಡ್ ತಂಡ 2-0 ಅಂತರದಿಂದ ಮುನ್ನಡೆ ಸಾಧಿಸಿದೆ. ಇದರೊಂದಿಗೆ ಇಂಗ್ಲೆಂಡ್ ತಂಡವು ಶ್ರೀಲಂಕಾ ವಿರುದ್ಧದ ಸತತ 10 ಟಿ20 ಪಂದ್ಯಗಳನ್ನು ಗೆದ್ದ ಸಾಧನೆಯನ್ನು ಸಹ ಮಾಡಿದೆ.

# ಟಿ20 ವಿಶ್ವಕಪ್‌ಗೂ ಮುನ್ನ ಸಂಜು ಸ್ಯಾಮ್ಸನ್‌ಗೆ ಕೊನೆಯ ಅವಕಾಶ

ಟಿ20 ವಿಶ್ವಕಪ್ ಸಮೀಪಿಸುತ್ತಿರುವಾಗ, ಸಂಜು ಸ್ಯಾಮ್ಸನ್ ಅವರ ಕಳಪೆ ಫಾರ್ಮ್ ಅಭಿಮಾನಿಗಳಲ್ಲಿ ಆತಂಕ ಮೂಡಿಸಿದೆ. ನ್ಯೂಜಿಲೆಂಡ್ ಸರಣಿಯಲ್ಲಿ ವೈಫಲ್ಯ ಕಂಡಿದ್ದ ಸಂಜುಗೆ, ಇಶಾನ್ ಕಿಶನ್ ಭರ್ಜರಿ ಪ್ರದರ್ಶನ ನೀಡಿ ಪೈಪೋಟಿ ಒಡ್ಡಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧದ ಅಭ್ಯಾಸ ಪಂದ್ಯವು ಸಂಜುಗೆ ಟಿ20 ವಿಶ್ವಕಪ್ ಪ್ಲೇಯಿಂಗ್11ನಲ್ಲಿ ಸ್ಥಾನ ಪಡೆಯಲು ಅಂತಿಮ ಅವಕಾಶವಾಗಿದೆ. ಈ ಪಂದ್ಯದಲ್ಲಿ ಅಬ್ಬರಿಸಿದರೆ ಮಾತ್ರ ಅವರಿಗೆ ತಂಡದಲ್ಲಿ ಸ್ಥಾನ ಸಿಗಬಹುದು.


ಟಿ20 ವಿಶ್ವಕಪ್ ಸಮೀಪಿಸುತ್ತಿರುವ ಬೆನ್ನಲ್ಲೇ ಪ್ರತಿಯೊಬ್ಬ ಟೀಂ ಇಂಡಿಯಾ ಅಭಿಮಾನಿಗೆ ಕಾಡುತ್ತಿರುವ ಪ್ರಶ್ನೆ ಎಂದರೆ ತಂಡದ ವಿಕೆಟ್‌ಕೀಪರ್ ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಫಾರ್ಮ್ ಕಂಡುಕೊಳ್ಳುವುದು ಯಾವಾಗ ಎಂಬುದು. ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯಲ್ಲಿ ಐದು ಪಂದ್ಯಗಳನ್ನಾಡಿದ್ದ ಸಂಜುಗೆ ಒಂದೇ ಒಂದು ಅರ್ಧಶತಕ ಬಾರಿಸಲು ಸಾಧ್ಯವಾಗಿರಲಿಲ್ಲ.

ಆದರೆ ತಿಲಕ್ ವರ್ಮಾ ಇಂಜುರಿಯಿಂದಾಗಿ ತಂಡ ಸೇರಿಕೊಂಡಿದ್ದ ಇಶಾನ್ ಕಿಶನ್ ಭರ್ಜರಿ ಪ್ರದರ್ಶನ ನೀಡಿದ್ದರು. ಸರಣಿಯಲ್ಲಿ ಆಡಿದ ನಾಲ್ಕು ಪಂದ್ಯಗಳಲ್ಲಿ ಒಂದು ಶತಕ ಮತ್ತು ಒಂದು ಅರ್ಧಶತಕ ಕೂಡ ಬಾರಿಸಿದರು. ಪರಿಣಾಮವಾಗಿ, ಸಂಜು ಸ್ಯಾಮ್ಸನ್ ಬದಲಿಗೆ ಕಿಶನ್‌ಗೆ ತಂಡದಲ್ಲಿ ಅವಕಾಶ ಕೊಡಬೇಕೆಂಬ ಕೂಗು ಜೋರಾಗಿದೆ. ಇದೆಲ್ಲದರ ನಡುವೆ ಟಿ20 ವಿಶ್ವಕಪ್ ಪ್ಲೇಯಿಂಗ್ 11 ನಲ್ಲಿ ಸ್ಥಾನ ಪಡೆಯಲು ಸಂಜುಗೆ ಕೊನೆಯ ಅವಕಾಶವೊಂದಿದೆ.

ವಾಸ್ತವವಾಗಿ ಅಂದರೆ ಫೆಬ್ರವರಿ 4 ರ ಬುಧವಾರದಂದು ನವಿ ಮುಂಬೈನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟೀಂ ಇಂಡಿಯಾ ಅಭ್ಯಾಸ ಪಂದ್ಯವನ್ನು ಆಡಲಿದೆ. ಇದು ಅಭ್ಯಾಸ ಪಂದ್ಯವಾಗಿದ್ದರೂ, ಈ ಪಂದ್ಯದ ಎಲ್ಲಾ ಟಿಕೆಟ್‌ಗಳು ಈಗಾಗಲೇ ಮಾರಾಟವಾಗಿವೆ. ವರದಿಗಳ ಪ್ರಕಾರ, 35,000 ಟಿಕೆಟ್‌ಗಳು ಮಾರಾಟವಾಗಿವೆ, ಅಂದರೆ ಹೌಸ್ ಫುಲ್ ಆಗುವ ಸಾಧ್ಯತೆಯಿದೆ. ಈ ಪಂದ್ಯದಲ್ಲಿ ಸಂಜು ಸ್ಯಾಮ್ಸನ್‌ಗೆ ಆಡುವ ಅವಕಾಶ ನೀಡಬಹುದು. ದಕ್ಷಿಣ ಆಫ್ರಿಕಾ ವಿರುದ್ಧ ಅವರು ಸ್ಫೋಟಕ ಇನ್ನಿಂಗ್ಸ್ ಆಡಿದರೆ, ಅವರಿಗೆ ಆಡುವ ಹನ್ನೊಂದರ ಬಳಗದಲ್ಲಿ ಸ್ಥಾನ ಸಿಗಬಹುದು. ನ್ಯೂಜಿಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಸಂಜು ಸ್ಯಾಮ್ಸನ್ ಕಳಪೆ ಪ್ರದರ್ಶನ ನೀಡಿದ್ದರು. ಐದು ಪಂದ್ಯಗಳಲ್ಲಿ 9.2 ಬ್ಯಾಟಿಂಗ್ ಸರಾಸರಿಯೊಂದಿಗೆ ಕೇವಲ 46 ರನ್ ಗಳಿಸಿದ್ದರು.

ಮತ್ತೊಂದೆಡೆ, ಇಶಾನ್ ಕಿಶನ್ ನಾಲ್ಕು ಪಂದ್ಯಗಳಲ್ಲಿ 53.75 ಸರಾಸರಿಯಲ್ಲಿ 215 ರನ್ ಗಳಿಸುವ ಮೂಲಕ ಆಡುವ 11 ನಲ್ಲಿ ತಮ್ಮ ಹಕ್ಕು ಬಲಪಡಿಸಿಕೊಂಡಿದ್ದಾರೆ.

ಈಗ ಸಂಜು ಟಿ20 ವಿಶ್ವಕಪ್ ಪ್ಲೇಯಿಂಗ್ 11 ನಲ್ಲಿ ಸ್ಥಾನ ಪಡೆಯಬೇಕೆಂದರೆ ದಕ್ಷಿಣ ಆಫ್ರಿಕಾ ವಿರುದ್ಧದ ಅಭ್ಯಾಸ ಪಂದ್ಯದಲ್ಲಿ ಅಬ್ಬರಿಸಲೇಬೇಕಿದೆ. ಈ ಪಂದ್ಯದಲ್ಲಿ ಸಂಜು ರನ್ ಗಳಿಸಿದರೆ, ಆರಂಭಿಕ ಸ್ಥಾನವನ್ನು ಪಡೆಯಬಹುದು. ಟೀಂ ಇಂಡಿಯಾ ಆರಂಭದಲ್ಲಿ ಯುಎಸ್‌ಎ ಮತ್ತು ನಮೀಬಿಯಾ ವಿರುದ್ಧ ಪಂದ್ಯಗಳನ್ನು ಆಡಲಿದೆ. ಈ ಎರಡು ತಂಡಗಳ ವಿರುದ್ಧ ರನ್ ಗಳಿಸುವುದು ಸಂಜು ಸ್ಯಾಮ್ಸನ್‌ಗೆ ಸುಲಭವಾಗುತ್ತದೆ. ಹೀಗಾಗಿ ಸ್ಯಾಮ್ಸನ್ ಆಫ್ರಿಕಾ ವಿರುದ್ಧ ಹೇಗೆ ಆಡುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966